ಸ್ಥಾಪನೆ : 1994

GSTIN: 29AADAA7412N1ZI

# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., (ರಿ.)


ಪ್ರಧಾನ ಕಛೇರಿ : # 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು-570 004. Ph. : 2330014/2334140


ಶಾಖಾ ಕಛೇರಿ : ಸಿ.ಎ.-16, ವಿಜಯನಗರ 2ನೇ ಹಂತ, ಮೈಸೂರು-570 017. Ph. : 2411556

Email: agastyasociety.mysore@gmail.com Website: www.agastyasociety.com


## 30ನೇ ವಾರ್ಷಿಕ ಸರ್ವಸದಸ್ಯರ ಸಭೆ


ದಿನಾಂಕ: 24-08-2025 ಭಾನುವಾರ

## 2024-25ನೇ ಸಾಲಿನ ವಾರ್ಷಿಕ ವರದಿ




## ಆತ್ಮೀಯ ಆಮಂತ್ರಣ

# ಹಾಲಿ ನಿರ್ದೇಶಕ ಮಂಡಳಿ
## ಪದಾಧಿಕಾರಿಗಳು



ಶ್ರೀ ಎಂ.ಡಿ. ಗೋಪಿನಾಥ್
ಅಧ್ಯಕ್ಷರು



ಶ್ರೀಮತಿ ಸೌಮ್ಯ ಎಂ.ಎನ್.
ಉಪಾಧ್ಯಕ್ಷರು



ಶ್ರೀ ಕೆ. ನಾಗರಾಜ
ಖಜಾಂಚಿ


## ನಿರ್ದೇಶಕರು



'ಸಹಕಾರ ರತ್ನ'
ಶ್ರೀ ಸಿ.ವಿ. ಪಾರ್ಥಸಾರಥಿ



ಶ್ರೀ ಹೆಚ್.ಎಸ್. ಪ್ರಶಾಂತ್ ತಾತಾಚಾರ್



ಶ್ರೀ ಎಂ.ಆರ್. ಬಾಲಕೃಷ್ಣ



ಶ್ರೀ ಹೆಚ್.ಪಿ. ಚೇತನ್



ಶ್ರೀ ಎನ್. ಫಣಿರಾಜ್



ಶ್ರೀಮತಿ ಮಹಿಮ ಪಿ.



ಶ್ರೀ ಕೆ. ವಿಕ್ರಮ್



ಶ್ರೀಮತಿ ನಾಗಶ್ರೀ ಎನ್.



ಶ್ರೀ ಕೆ.ಎನ್. ಅರುಣ್



ಶ್ರೀ ಶಿವರುದ್ರಪ್ಪ



ಶ್ರೀಮತಿ ಎಸ್. ರಾಜಮ್ಮ



ಶ್ರೀಮತಿ ಶಾಶ್ವತಿ ನಾಯಕ ಎಂ.ಪಿ.



ಶ್ರೀಮತಿ ಎನ್. ವೀಣಾ,
ಪ್ರಭಾರ ಕಾರ್ಯದರ್ಶಿ

# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

**ಪ್ರಧಾನ ಕಛೇರಿ: #1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು –570004 ಫೋ: 0821–2330014, 2334140**
**ಶಾಖಾ ಕಛೇರಿ: ಸಿಎ–16, 2ನೇ ಹಂತ, ವಿಜಯನಗರ, ಮೈಸೂರು–570017 ಫೋ: 0821–2411556**

## ಸೊಸೈಟಿಯ 2024–25ನೇ ಸಾಲಿನ
## ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರೇ,

ಮೇಲ್ಕಂಡ ಸೊಸೈಟಿಯ 2024–25ನೇ ಸಾಲಿನ 30ನೇ ವಾರ್ಷಿಕ ಮಹಾಸಭೆಯನ್ನು

**ದಿನಾಂಕ:24/08/2025ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ**

ಸಂಘದ ಅಧ್ಯಕ್ಷರಾದ

**ಶ್ರೀ ಎಂ ಡಿ ಗೋಪಿನಾಥ್** ಬಿ.ಕಾಂ,

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ

**ಸ್ಥಳ:**

## ಶಾರದಾ ವಿಲಾಸ ಶತಮಾನೋತ್ಸವ ಭವನ

**ಕೃಷ್ಣಮೂರ್ತಿಪುರಂ, ಮೈಸೂರು**

**ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ತಪ್ಪದೆ ಸಭೆಗೆ ಹಾಜರಾಗಬೇಕಾಗಿ ಕೋರಲಾಗಿದೆ**

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ

ದಿನಾಂಕ: 07/08/2025

**ವೀಣಾ ಎನ್**
**ಪ್ರಭಾರ ಕಾರ್ಯದರ್ಶಿ**

**ವಿಶೇಷ ಸೂಚನೆ:**

1) ನಮ್ಮ ಸಂಘದಲ್ಲಿ 6168 ಸದಸ್ಯರಿದ್ದು, ಕೋರಂ ಶೇಕಡ 10 ಅಂದರೆ ಕನಿಷ್ಟ 617 ಸದಸ್ಯರು ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲೇ ಬೇಕಾಗಿರುತ್ತದೆ. ಆದುದರಿಂದ ಸದಸ್ಯರು ಸಭೆ ನಿಗದಿಯಾಗಿರುವ ಸಮಯಕ್ಕೆ ಸರಿಯಾಗಿ ಹಾಜರಿದ್ದು ಸಭೆಯನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಲಾಗಿದೆ.
2) ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಯಾವುದೇ ವಿಷಯ ಅಥವಾ ಸಲಹೆ ಸೂಚನೆಗಳೇನಾದರೂ ಇದ್ದಲ್ಲಿ ಸರ್ವಸದಸ್ಯರ ಸಭೆಗೆ ಐದು(5) ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಸಂಘದ ಪ್ರಧಾನ ಕಛೇರಿ ವ್ಯವಹಾರದ ವೇಳೆಯಲ್ಲಿ ಪ್ರಭಾರ ಕಾರ್ಯದರ್ಶಿಯವರಿಗೆ ತಲುಪಿಸಬೇಕು. ನಂತರ ಬಂದ ವಿಷಯಗಳಿಗೆ ಮಹಾಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ. ತಾವು ಕೇಳಿರುವ ವಿಷಯಗಳಿಗೆ ಟಿಪ್ಪಣಿ ಹಾಗೂ ದಾಖಲೆಗಳನ್ನು ತಯಾರು ಮಾಡಿಕೊಳ್ಳಲು ಕಾಲಾವಕಾಶ ಬೇಕಾಗಿರುವುದರಿಂದ ಸದಸ್ಯರು ಸಹಕರಿಸಬೇಕಾಗಿ ಕೋರಲಾಗಿದೆ.
3) ಸದಸ್ಯರು ಕಡ್ಡಾಯವಾಗಿ ಷೇರು ಪಾಸ್ ಪುಸ್ತಕ ಅಥವಾ ಗುರುತಿನ ಚೀಟಿಯನ್ನು ತರತಕ್ಕದ್ದು.
4) ಸದಸ್ಯರಿಗೆ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿದೆ.

## ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

**ಪ್ರಧಾನ ಕಛೇರಿ: #1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು –570004 ಫೋ: 0821–2330014, 2334140**

**ಶಾಖಾ ಕಛೇರಿ: ಸಿಎ–16, 2ನೇ ಹಂತ, ವಿಜಯನಗರ, ಮೈಸೂರು–570017 ಫೋ: 0821–2411556**

### 'ಪ್ರತಿಭಾ ಪುರಸ್ಕಾರ ಮತ್ತು ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ'

**ದಿನಾಂಕ:24/08/2025ರ ಭಾನುವಾರ ಬೆಳಿಗ್ಗೆ 9.30 ಗಂಟೆಗೆ**

ಸಂಘದ ಅಧ್ಯಕ್ಷರಾದ

**ಶ್ರೀ ಎಂ ಡಿ ಗೋಪಿನಾಥ್** ಬಿ.ಕಾಂ.,

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ

## ಸ್ಥಳ : ಶಾರದಾ ವಿಲಾಸ ಶತಮಾನೋತ್ಸವ ಭವನ

ಕೃಷ್ಣಮೂರ್ತಿಪುರಂ, ಮೈಸೂರು.

ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ತಪ್ಪದೆ ಕಾರ್ಯಕ್ರಮಕ್ಕೆ ಹಾಜರಾಗಬೇಕಾಗಿ ಕೋರಲಾಗಿದೆ

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
**ವೀಣಾ ಎನ್**
**ಪ್ರಭಾರ ಕಾರ್ಯದರ್ಶಿ**

**ಕಾರ್ಯಕ್ರಮ ಪಟ್ಟಿ:**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಹಿರಿಯ ಸದಸ್ಯರಿಗೆ ಸನ್ಮಾನ
4. ಪ್ರತಿಭಾ ಪುರಸ್ಕಾರ
5. ರಾಜ್ಯ/ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಂಘದ ಸದಸ್ಯರಿಗೆ/ಸದಸ್ಯರ ಮಕ್ಕಳಿಗೆ ಸನ್ಮಾನ

**ವಿಶೇಷ ಸೂಚನೆ :** ಸಂಘದ ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ./ಪಿ.ಯು.ಸಿ /ತತ್ಸಮಾನ ಪರೀಕ್ಷೆಗಳಲ್ಲಿ, ಸಂಸ್ಕೃತ, ಸಂಗೀತ, ನೃತ್ಯ ಹಾಗೂ ಡಿಪ್ಲೊಮೊ ಕೋರ್ಸ್‌ಗಳಲ್ಲಿ ಶೇಕಡ 85 ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರನ್ನು ಪುರಸ್ಕರಿಸಲಾಗುವುದು. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಪೋಷಕರು ಮಹಾಸಭೆಗೆ ಕಡ್ಡಾಯವಾಗಿ ಹಾಜರಾಗಿ ಪುರಸ್ಕಾರವನ್ನು ಪಡೆಯತಕ್ಕದ್ದು. ಈ ಸಂಧರ್ಭದಲ್ಲಿ ಹಾಜರಾಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ನಂತರ ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಗುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ/ವಿದ್ಯಾರ್ಥಿನಿಯರ ತಂದೆ ತಾಯಿ ಸಂಘದ ಕಛೇರಿ ವ್ಯವಹಾರದ ವೇಳೆಯಲ್ಲಿ ಲಿಖಿತ ಅರ್ಜಿ, ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಹಾಗೂ ಸದಸ್ಯತ್ವದ ಪಾಸ್ ಪುಸ್ತಕದೊಂದಿಗೆ, ವಿದ್ಯಾರ್ಥಿ/ವಿದ್ಯಾರ್ಥಿನಿಯರ ಒಂದು ಇತ್ತೀಚಿನ ಭಾವಚಿತ್ರದೊಂದಿಗೆ ಸಲ್ಲಿಸಬೇಕು.

ಸಂಘದ ಸದಸ್ಯರು ಹಾಗೂ ಸದಸ್ಯರ ಮಕ್ಕಳು ಯಾವುದೇ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿ ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿ ಪುರಸ್ಕೃತರಾಗಿದ್ದಲ್ಲಿ ಅಂತಹವರನ್ನು ಪುರಸ್ಕರಿಸಲಾಗುವುದು.

ಸಂಘದ ಹಿರಿಯ ಸದಸ್ಯರನ್ನು ಗೌರವಾನ್ವಿತವಾಗಿ ಸನ್ಮಾನಿಸಲಾಗುವುದು.

ಈ ಮೇಲಿನ ಯಾವುದೇ ಪುರಸ್ಕೃತಕ್ಕೆ ಸಂಬಂಧಪಟ್ಟ ಸದಸ್ಯರು ಸಂಪೂರ್ಣ ಮಾಹಿತಿಯನ್ನು ದಿನಾಂಕ: 20/08/2025ರ ಬುಧವಾರ ಸಂಜೆ 6.00 ಘಂಟೆಯ ಒಳಗಾಗಿ ಸಂಘಕ್ಕೆ ನೀಡಬೇಕಾಗಿ ವಿನಂತಿ.

## ಸರ್ವಸದಸ್ಯರ ಸಭೆಯ ಕಾರ್ಯಕ್ರಮ ಪಟ್ಟಿ

1. ಪ್ರಾರ್ಥನೆ
2. ಸಾಮೂಹಿಕ ಶಾಂತಿ ಮಂತ್ರ
3. ಸ್ವಾಗತ ಭಾಷಣ
4. 30ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
5. ದೈವಾಧೀನರಾದ ಸದಸ್ಯರಿಗೆ ಸಂತಾಪ ಸೂಚನೆ.
6. 29ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು.
7. 2024–25ನೇ ಸಾಲಿನ ಆಡಳಿತ ಮಂಡಲಿ ವರದಿಯ ಅನುಮೋದನೆ.
8. 2024–25ನೇ ಸಾಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಅನುಮೋದನೆ.
9. 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅನುಮೋದನೆ.
10. 2024–25ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳು.
11. ಸಂಘದ ಪ್ರಧಾನ ಕಛೇರಿಯಲ್ಲಿ ಸದಸ್ಯರಿಗೆ ಅನುಕೂಲವಾಗುವಂತೆ ಲಿಫ್ಟ್ ಅಳವಡಿಸುವ ಬಗ್ಗೆ. ಮತ್ತು ಅದಕ್ಕೆ ತಗಲುವ ವೆಚ್ಚಗಳಿಗೆ ನಿಯಮಾನುಸಾರ ಸಂಘದ ಮೀಸಲು ನಿಧಿಯ ಮೊತ್ತವನ್ನು ಬಳಸಿಕೊಳ್ಳಲು ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ನೀಡುವ ಬಗ್ಗೆ.
12. 2024–25ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಾಗಿ ಖರ್ಚಾಗಿರುವ ಬಗ್ಗೆ ಅನುಮೋದನೆ ನೀಡುವುದು ಮತ್ತು 2025–26ನೇ ಸಾಲಿನ ಆಯ–ವ್ಯಯದ ಅಂದಾಜು ಮಂಜೂರಾತಿ.
13. ಸಹಕಾರ ಸಂಘಗಳ ಕಾಯಿದೆ ಕಲಂ 63(2) ರೀತ್ಯ 2025–26ನೇ ಸಾಲಿಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.
14. ಸಹಕಾರ ಸಂಘಗಳ ಕಾಯಿದೆ ಕಲಂ 58ರ ರೀತ್ಯ ರಾಷ್ಟ್ರೀಕೃತ ಹಾಗೂ ಇತರೇ ಸಹಕಾರ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಲು, ಸಂಘದ ಠೇವಣಾತಿಗಳನ್ನು ಹೂಡಿಕೆ ಮಾಡಲು ಹಾಗೂ ಸರ್ಕಾರಿ ಭದ್ರತಾ ಠೇವಣಿಯಲ್ಲಿ ಹೂಡಿಕೆ ಮಾಡಲು ಅನುಮೋದನೆ ನೀಡುವ ಬಗ್ಗೆ.
15. ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸಂಘದಿಂದ ನೀಡಲಾದ ಸಾಲಗಳ ಬಾಕಿ, ಸುಸ್ತಿಬಾಕಿ ಯಾವುದಾದರೂ ಇದ್ದರೆ ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ.
16. ಮರಣ ಹೊಂದಿರುವ ಸದಸ್ಯರ ವಸೂಲಿಯಾಗದ ಡಿಕ್ರಿ ಸಾಲದ ಮೊತ್ತವನ್ನು ಕರಡು ಸಂಶಯಾಸ್ಪದ ಸಾಲದ ನಿಧಿ ಮೊತ್ತದಿಂದ ಹೊಂದಾಣಿಕೆ ಮಾಡಲು ಅನುಮೋದನೆ ನೀಡುವ ಬಗ್ಗೆ.
17. ಅನುಪಯುಕ್ತ ಚರಾಸ್ತಿಗಳನ್ನು ಆಸ್ತಿಯಿಂದ ಬೇರ್ಪಡಿಸಿ write off ಮಾಡುವ ಬಗ್ಗೆ.
18. ಸದಸ್ಯರಿಂದ ಸ್ವೀಕೃತವಾದ ಸಲಹೆ/ಸೂಚನೆಗಳ ಪರಿಶೀಲನೆ.
19. ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರೆ ವಿಷಯಗಳು.
20. ಅಧ್ಯಕ್ಷರ ಭಾಷಣ
21. ವಂದನಾರ್ಪಣೆ
22. ರಾಷ್ಟ್ರಗೀತೆ

## ಹಾಲಿ ಇರುವ ಆಡಳಿತ ಮಂಡಲಿ ಸದಸ್ಯರು

### ಪದಾಧಿಕಾರಿಗಳು:

**ಶ್ರೀ ಎಂ.ಡಿ. ಗೋಪಿನಾಥ್,** ಬಿ.ಕಾಂ., – ಅಧ್ಯಕ್ಷರು
ನಂ.1135, 2ನೇ ಕ್ರಾಸ್, 2ನೇ ಮುಖ್ಯರಸ್ತೆ, 2ನೇ ಹಂತ, ಶ್ರೀರಾಂಪುರ, ಮೈಸೂರು–23

**ಶ್ರೀಮತಿ ಸೌಮ್ಯ ಎಂ.ಎನ್,** ಎಂ.ಎಸ್ಸಿ., ಬಿ.ಎಡ್. – ಉಪಾಧ್ಯಕ್ಷರು
ನಂ. ಇ–229, 1ನೇ ಹಂತ, ಕುವೆಂಪುನಗರ, ಮೈಸೂರು–23

**ಶ್ರೀ ಕೆ. ನಾಗರಾಜ,** ಬಿ.ಎಸ್ಸಿ., (ಎಲ್.ಎಲ್.ಬಿ.) – ಖಜಾಂಚಿ
'ಶ್ರೀಯೋಗ' ನಂ.374/1, ವೀಣೆ ಶೇಷಣ್ಣರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು–04

### ನಿರ್ದೇಶಕರುಗಳು:

**ಶ್ರೀ ಸಿ.ವಿ. ಪಾರ್ಥಸಾರಥಿ,** ಬಿ.ಎ.
ನಂ.426–ಸಿ, ಕೆ.ಎನ್. ಅಗ್ರಹಾರ, ಕೆ ಆರ್ ಮೊಹಲ್ಲಾ, ಮೈಸೂರು –24

**ಶ್ರೀ ಹೆಚ್.ಎಸ್. ಪ್ರಶಾಂತ್‌ತಾತಾಚಾರ್**
ನಂ. 224/2, ಮೂರ್ತಿ ನಿಲಯ, ಉತ್ತರಾಧಿ ಮಠದ ರಸ್ತೆ, ಪೂರ್ವಕ್ಕೆ 2ನೇ ಅಡ್ಡರಸ್ತೆ, ಮೈಸೂರು–04

**ಶ್ರೀ ಎಂ.ಆರ್. ಬಾಲಕೃಷ್ಣ,** ಬಿ.ಕಾಂ.,
ನಂ. 761, 7ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು –04

**ಶ್ರೀ ಹೆಚ್.ಪಿ. ಚೇತನ್,** AMICE(Arch Engg). AIIV
ನಂ. S–53, ಎರಡನೇ ಹಂತ, ಶ್ರೀರಾಂಪುರ, ಮೈಸೂರು

**ಶ್ರೀ ಪಣಿರಾಜ್ ಎನ್,** ಡಿ.ಸಿ.ಇ.
ನಂ. 46, 1ನೇ ಫೇಸ್, 7ನೇ ಕ್ರಾಸ್, ಕ್ರೈಸ್ಟ್ ಪಬ್ಲಿಕ್ ಶಾಲೆ ಹತ್ತಿರ, ಬೋಗಾದಿ, ಮೈಸೂರು–26

**ಶ್ರೀಮತಿ ಮಹಿಮ ಪಿ,** ಬಿ.ಬಿ.ಎಂ., ಎಂ.ಬಿ.ಎ
ನಂ. 531, ಎಲ್.ಐ.ಜಿ. 2, 3ನೇ ಹಂತ, ಹೆಬ್ಬಾಳ್, ಮೈಸೂರು –16

**ಶ್ರೀ ವಿಕ್ರಮ್ ಕೆ.**
ನಂ. 443/43, ಟಿ ಹೆಚ್ ರಸ್ತೆ, ಕೆ.ಎನ್. ಅಗ್ರಹಾರ, ಕೆ ಆರ್ ಮೊಹಲ್ಲ, ಮೈಸೂರು

**ಶ್ರೀಮತಿ ನಾಗಶ್ರೀ ಎನ್,** Dip. In E&C.
ನಂ. 712, 15ನೇ ಕ್ರಾಸ್, 2ನೇ ಹಂತ, ಶ್ರೀರಾಂಪುರ, ಮೈಸೂರು

**ಶ್ರೀ ಅರುಣ್ ಕೆ.ಎನ್,** ಬಿ.ಇ.
ನಂ. 1225, 1ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು –04

**ಶ್ರೀ ಶಿವರುದ್ರಪ್ಪ**
ನಂ 29, ರಾಮಮಂದಿರ ರಸ್ತೆ, ಮಹೇಂದ್ರ ಎನ್‌ಕ್ಲೇವ್, ಜೆ ಪಿ ನಗರ, ಮೈಸೂರು

**ಶ್ರೀಮತಿ ರಾಜಮ್ಮ ಎಸ್,** ಬಿ.ಎ., ಬಿ.ಎಡ್.
ನಂ. 860, 7ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆ, ಅರವಿಂದನಗರ, ಮೈಸೂರು

**ಶ್ರೀಮತಿ ಶಾಶ್ವತಿ ನಾಯಕ ಎಂ.ಪಿ,** ಬಿ.ಇ.
ನಂ 58/1, 13ನೇ ಮೇನ್, ಬೋಗಾದಿ, ಮೈಸೂರು–570 026

---

### ಸಂಘದ ಕಾನೂನು ಸಲಹೆಗಾರರು

**ಶ್ರೀ ಶಶಿಧರ್,** ಬಿ.ಎಸ್ಸಿ.,ಎಲ್‌ಎಲ್‌ಬಿ,
**ಶ್ರೀ ಎಂ ಎನ್ ಶ್ರೀನಿವಾಸ್,** ಬಿ.ಕಾಂ.,ಎಲ್.ಎಲ್.ಬಿ., ಪಿಜಿಡಿಸಿಎಲ್.
**ಶ್ರೀ ಸ್ವಾಮಿ ಕೆ.ಟಿ,** ಎಂ.ಎ.,ಎಲ್‌ಎಲ್‌ಬಿ.,
**ಶ್ರೀ ಪಾಲಾಕ್ಷ,** ಬಿ.ಎ.,ಎಲ್.ಎಲ್.ಬಿ.,
**ಶ್ರೀ ಡಿ ಬಿ ಜೋಷಿ,** ಬಿ.ಎ.,ಎಲ್.ಎಲ್.ಬಿ., ಡಿ.ಸಿ.ಎಂ.,

**ಆಂತರಿಕ ಲೆಕ್ಕ ಪರಿಶೋಧಕರು : ಶ್ರೀ ಸಿಎ. ಮಧುಸೂಧನ,** B.Com., ACA.

# ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

## 2024–25ನೇ ಸಾಲಿನ ಆಡಳಿತ ಮಂಡಲಿ ವರದಿ

ಮಾನ್ಯ ಸದಸ್ಯ ಭಾಂಧವರೆ,

ಸಂಸ್ಥೆಯ 30ನೇ ವಾರ್ಷಿಕ ಮಹಾಸಭೆಗೆ ಸದಸ್ಯರೆಲ್ಲರಿಗೂ ಆತ್ಮೀಯ ಸ್ವಾಗತ.

ಸಂಘದ 2024–25ನೇ ಸಾಲಿನ ವಾರ್ಷಿಕ ವರದಿ, ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತ:ಖ್ತೆಗಳು, ನಿವ್ವಳ ಲಾಭದ ವಿನಿಯೋಗಗಳ ಮತ್ತು 2025–26ನೇ ಸಾಲಿನ ಕಾರ್ಯನಿರ್ವಹಣಾ ಖರ್ಚುಗಳ ಅಂದಾಜು ಮಂಜೂರಾತಿ ಹಾಗೂ ಇತ್ಯಾದಿಗಳನ್ನು ಸರ್ವ ಸದಸ್ಯರ ಸಭೆಯ ಅವಗಾಹನೆಗೆ ಸಲ್ಲಿಸಲಾಗಿದೆ. ಸನ್ಮಾನ್ಯ ಸದಸ್ಯರು ಈ ವರದಿಗೆ ಅನುಮೋದನೆ ನೀಡಬೇಕೆಂದು ಕೋರಲಾಗಿದೆ.

2024–25ನೇ ಸಾಲಿಗೆ ಶ್ರೀ ಸಿ.ಎ. ಸತ್ಯನಾರಾಯಣ ಸಿ.ಎಸ್. ಸನ್ನದು ಲೆಕ್ಕಿಗರು ಇವರಿಂದ ಸಂಘದ ಲೆಕ್ಕಪರಿಶೋಧನೆ ನಡೆದಿದ್ದು, ಆಡಿಟ್ ವರ್ಗೀಕರಣದಲ್ಲಿ ಸಂಘವನ್ನು "ಬಿ" ದರ್ಜೆ ಸಂಘವೆಂದು ವರ್ಗೀಕರಿಸಲಾಗಿದೆ. ಸಂಘದ ಆರ್ಥಿಕ ಪರಿಸ್ಥಿತಿಯು ಉತ್ತಮ ಮಟ್ಟದಲ್ಲಿರುತ್ತದೆ. 2023–24 ಮತ್ತು 2024–25ನೇ ಸಾಲಿನ ತುಲನಾತ್ಮಕ ವಿವರಣೆಯನ್ನು ಈ ಕೆಳಕಂಡಂತೆ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

| ಕ್ರಮ ಸಂಖ್ಯೆ | ವಿವರಗಳು | 2023–24 ರೂ. | 2024–25 ರೂ. |
|---|---|---|---|
| 1 | ಸದಸ್ಯರ ಷೇರು ಬಂಡವಾಳ | 3,24,23,700 | 3,32,88,700 |
| 2 | ಆಪದ್ಧನ ನಿಧಿ | 1,99,06,360 | 2,11,30,279 |
| 3 | ಇತರೆ ನಿಧಿಗಳು | 2,12,22,196 | 2,08,47,880 |
| 4 | ಸದಸ್ಯರ ಠೇವಣಿಗಳು | 25,26,15,832 | 26,54,89,667 |
| 5 | ಇತರೆ ಜವಾಬ್ದಾರಿಗಳು | 29,35,146 | 31,93,223 |
| 6 | ಕಾಯ್ದಿರಿಸಿದ ಲೆಕ್ಕಗಳು | 1,25,78,011 | 66,30,258 |
| 7 | ಅಮಾನತ್ತು ಲೆಕ್ಕಗಳು | 2,79,746 | 3,31,404 |
| 8 | ನಗದು ಶಿಲ್ಕು | 20,10,691 | 15,47,922 |
| 9 | ಬ್ಯಾಂಕ್ ಲೆಕ್ಕಗಳು | 17,16,615 | 60,07,545 |
| 10 | ಧನವಿನಿಯೋಗಗಳು | 11,49,52,971 | 7,99,20,273 |
| 11 | ಸ್ಥಿರಾಸ್ತಿ ಹಾಗೂ ಚರಾಸ್ತಿಗಳು | 1,54,02,637 | 1,54,50,941 |
| 12 | ಸದಸ್ಯರ ಸಾಲಗಳು | 20,36,66,228 | 24,31,35,777 |
| 13 | ಸಿಬ್ಬಂದಿ ಸಾಲ | 6,85,412 | 5,19,544 |
| 14 | ಇತರೆ ಆಸ್ತಿಗಳು | 70,45,483 | 75,38,672 |
| 15 | ನಿವ್ವಳ ಲಾಭ | 35,19,047 | 32,09,263 |

**1)ಸದಸ್ಯರ ಷೇರು ಬಂಡವಾಳ – ರೂ.** 3,32,88,700/–

ಸಾಮಾನ್ಯ ಸದಸ್ಯರು, ಸಹ ಸದಸ್ಯರು, ನಾಮಮಾತ್ರ ಸದಸ್ಯರುಗಳನ್ನು ಒಳಗೊಂಡಂತೆ ಈ ಸಾಲಿನ ಪ್ರಾರಂಭದಲ್ಲಿ 6079 ಸದಸ್ಯರಿದ್ದು, ಸಾಲಿನ ಅಖೈರಿಗೆ ಒಟ್ಟು 6713 ಸದಸ್ಯರಿರುತ್ತಾರೆ.

ಸಂಘದ ಉಪನಿಯಮದ ಪ್ರಕಾರ ಷೇರಿನ ಮುಖ ಬೆಲೆಯು ರೂ.1000/–ಗಳಾಗಿದ್ದು, ಒಬ್ಬ ಸದಸ್ಯ ಕನಿಷ್ಟ ಒಂದು ಷೇರು ಹೊಂದಿರತಕ್ಕದ್ದು ಎಂಬಂತೆ, ಕೆಲವು ಸದಸ್ಯರು ರೂ.1,500/– ಅಥವಾ 2,500/– ಹೊಂದಿರುತ್ತಾರೆ. ಅಂತಹ ಸದಸ್ಯರು ವ್ಯತ್ಯಾಸದ ಷೇರು ಮೊಬಲಗನ್ನು ಜಮಾ ಮಾಡಲು ತಿಳಿಸಲಾಗಿದೆ. ಕನಿಷ್ಟ ಒಂದು ಷೇರುಗಿಂತ ಕಡಿಮೆ ಇರುವ ಷೇರುದಾರರನ್ನು, ಷೇರು ಸುಸ್ತಿದಾರರ ಖಾತೆಯಲ್ಲಿ ಇಡಲಾಗಿದೆ. ಈ ಖಾತೆಯಲ್ಲಿ 333 ಸದಸ್ಯರುಗಳಿದ್ದು, ನಿರ್ದೇಶಕ ಮಂಡಲಿ ಸಭೆಯ ಅನುಮತಿ ಪಡೆದು ವ್ಯತ್ಯಾಸದ ಮೊತ್ತವನ್ನು ಜಮಾ ಮಾಡಲು ತಿಳಿಸಲಾಗಿದೆ. ಸದಸ್ಯರು ಸಂಘವು ಒದಗಿಸುವ ಸೌಲಭ್ಯಗಳಲ್ಲಿ ಯಾವುದಾದರು ಒಂದನ್ನು ಪಡೆದುಕೊಂಡು ಹಾಗೂ ಸರ್ವಸದಸ್ಯರ ಸಭೆಗೆ ಹಾಜರಾಗಿ ತಮ್ಮ ಹಕ್ಕನ್ನು ಕಾಯ್ದಿರಿಸಿಕೊಳ್ಳಲು ತಿಳಿಸಲಾಗಿದೆ.

**2) ಆಪದ್ಧನ ನಿಧಿ– ರೂ. 2,11,30,279/–**

ಸಹಕಾರ ಸಂಘಗಳ ಕಾಯ್ದೆ ಹಾಗೂ ಸಂಘದ ಉಪನಿಯಮಾನುಸಾರ ಸರ್ವಸದಸ್ಯರ ಸಭೆಯ ಅನುಮೋದನೆಯಂತೆ 2023–24ನೇ ಸಾಲಿನಲ್ಲಿ ನಿವ್ವಳ ಲಾಭದಿಂದ ಹಂಚಿಕೆಯಾದ ಆಪದ್ಧನ ಮೊತ್ತ ಹಾಗೂ ಲಾಭಾಂಶ ಘೋಷಣೆಯಾದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಲಾಭಾಂಶವನ್ನು ಪಡೆಯದೆ ಇರುವ ಸದಸ್ಯರ ಮೊತ್ತ, ಅವಧಿ ಮುಕ್ತಾಯವಾದ ನಾಮಮಾತ್ರ ಸದಸ್ಯರ ಮೊತ್ತ, ಸಂಘದ ಸದಸ್ಯರು ಸದಸ್ಯತ್ವವನ್ನು ಮುಕ್ತಾಯಗೊಳಿಸಿದಾಗ ವೈಕುಂಠನಿಧಿಗೆ ನೋಂದಣಿ/ಸದಸ್ಯನಾಗಿದ್ದು ನೀಡಿರುವ ಒಟ್ಟು ಮೊತ್ತ ರೂ.12,59,207/–ಗಳನ್ನು ಯುಕೋ ಬ್ಯಾಂಕ್‌ನಲ್ಲಿ ಠೇವಣಿ ಮಾಡಲಾಗಿದ್ದು, ಆಪದ್ಧನ ನಿಧಿಗೆ ಇಯರ್ ಮಾರ್ಕ್ ಮಾಡಲಾಗಿದೆ.

**3) ಇತರೆ ನಿಧಿಗಳು – ರೂ.2,08,47,880/–**

ಸಂಘವು 2023–24ನೇ ಸಾಲಿನಲ್ಲಿ ಗಳಿಸಿದ ಲಾಭವನ್ನು ಮಹಾಸಭೆಯ ಅನುಮೋದನೆಯಂತೆ ಹಂಚಿಕೆಯಾದ ಮೊತ್ತವನ್ನು ಆಯಾಯ ನಿಧಿಗಳಿಗೆ ವರ್ಗಾವಣೆ ಮಾಡಲಾಗಿರುತ್ತದೆ.

**ಸದಸ್ಯರ ಮರಣೋತ್ತರ ನಿಧಿ:** ದೈವಾಧೀನರಾದ ಸದಸ್ಯರಿಗೆ ಸಂಘದ ನಿಯಮದಂತೆ ದಿನಾಂಕ: 16/03/2023 ರಿಂದ ಜಾರಿಗೆ ಬರುವಂತೆ ರೂ.5,000/–ಗಳನ್ನು ಸದಸ್ಯರ ನಾಮಿನಿದಾರರಿಗೆ ಈ ನಿಧಿಯಿಂದ ಪಾವತಿಸಲಾಗುವುದು. ವರದಿ ಸಾಲಿನಲ್ಲಿ 64 ಸದಸ್ಯರಿಗೆ ರೂ.3,08,000/– ಪಾವತಿಸಲಾಗಿರುತ್ತದೆ.

| ಕ್ರ ಸಂ | ಮರಣ ನಿಧಿ ಸಂಖ್ಯೆ | ಮರಣ ನಿಧಿ ಮೊತ್ತ | ಒಟ್ಟು ಮೊತ್ತ |
|---|---|---|---|
| 1 | 6 | 3000–00 | 18,000–00 |
| 2 | 58 | 5000–00 | 2,90,000–00 |
| | | **ಒಟ್ಟು ಮೊತ್ತ** | **3,08,000–00** |

ಈ ಮೇಲೆ ತಿಳಿಸಿರುವ ಮರಣ ನಿಧಿ ಪಾವತಿ ಮೊತ್ತದಲ್ಲಿ ಹೆಚ್ಚುವರಿಯಾಗಿ ರೂ.17,000/– ಪಾವತಿಯಾಗಿದ್ದು, ವಿವರ ಈ ಕೆಳಗಿನಂತೆ :

| ಕ್ರ ಸಂ | ವಿವರಗಳು | ಒಟ್ಟು ಮೊತ್ತ |
|---|---|---|
| 1 | ಪ್ರಾರಂಭಿಕ ಶಿಲ್ಕು | 41,000–00 |
| 2 | 23–24ನೇ ಸಾಲಿನ ಲಾಭಾಂಶ ಹಂಚಿಕೆಯಿಂದ | 2,50,000–00 |
| 3 | ಹೆಚ್ಚುವರಿ ಮೊತ್ತ ಮರಣ ನಿಧಿಗೆ | 17,000–00 |
| | **ಒಟ್ಟು ಮೊತ್ತ** | **3,08,000–00** |

**ಮರಣ ಪರಿಹಾರ ನಿಧಿ (ವೈಕುಂಠ ನಿಧಿ) – ರೂ.3,80,804/–**

ವರದಿ ಸಾಲಿನಲ್ಲಿ 10 ಸದಸ್ಯರು ಸೇರ್ಪಡೆಯಾಗಿರುತ್ತಾರೆ. ಈ ಸಾಲಿನಲ್ಲಿ 11 ಸದಸ್ಯರು ಪೌತಿಯಾಗಿದ್ದು, ಸದರಿಯವರ ನಾಮಿನಿದಾರರಿಗೆ ಮರಣ ಪರಿಹಾರ ನಿಧಿ (ವೈಕುಂಠ ನಿಧಿ) ಯಿಂದ ಮೊತ್ತ ರೂ. 5,500/– ಹಾಗೂ ವೈಕುಂಠ ನಿಧಿ ಮೇಲೆ ಪಾವತಿಸಬೇಕಾದ ಮೊತ್ತದಿಂದ ರೂ. 49,500/– ಪಾವತಿಸಲಾಗಿರುತ್ತದೆ. ಸದಸ್ಯತ್ವ ಮುಕ್ತಾಯಗೊಳಿಸಿದ 3 ಮಂದಿ ಸದಸ್ಯರ ವೈಕುಂಠನಿಧಿ ಮೊತ್ತ ರೂ.1,500/–ಗಳನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗಿದೆ.

ಮರಣ ಪರಿಹಾರ ನಿಧಿ(ವೈಕುಂಠ ನಿಧಿ) ಯೋಜನೆಯಲ್ಲಿ ಸದಸ್ಯತ್ವ ಪಡೆದ ಸದಸ್ಯರು ವ್ಯವಹರಿಸಲು ಸಾಧ್ಯವಿಲ್ಲವೆಂದು ಷೇರು ಮುಕ್ತಾಯಗೊಳಿಸಿದ್ದಲ್ಲಿ ಮರಣ ಪರಿಹಾರ ನಿಧಿ(ವೈಕುಂಠ ನಿಧಿ) ಸದಸ್ಯತ್ವದ ಮೊತ್ತವನ್ನು ನಿಯಮಾನುಸಾರ ಆಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಈ ಮೊತ್ತವನ್ನು ವೈಕುಂಠ ನಿಧಿ/ಮರಣ ಪರಿಹಾರ ನಿಧಿ ಮೇಲೆ ಪಾವತಿಸಬೇಕಾದ ಮೊತ್ತಕ್ಕೆ ವರ್ಗಾವಣೆ ಮಾಡಲು ಅನುಮೋದನೆ ಕೋರಲಾಗಿದೆ.

**ಧರ್ಮದ ನಿಧಿ : ರೂ.1,25,722/–** ದೇಣಿಗೆ ಕೋರಿ ಬಂದ ಪತ್ರಗಳನ್ನು ಪರಿಗಣಿಸಿ ವರದಿ ಸಾಲಿಗೆ ರೂ.24,000/– ಪಾವತಿಸಲಾಗಿರುತ್ತದೆ.

**ವಿದ್ಯಾ ನಿಧಿ ಮತ್ತು ಹಿರಿಯ ಸದಸ್ಯರ ಸನ್ಮಾನ ನಿಧಿ :** ದಿನಾಂಕ:01/09/2024ರಂದು ನಡೆದ ವಾರ್ಷಿಕ ಸರ್ವಸದಸ್ಯರ ಸಭೆಯ ದಿನದಂದು ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಹಾಗೂ ಇತರೇ ಪ್ರತಿಭೆಯಲ್ಲಿ ಪುರಸ್ಕೃತರಾದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಂಘದ ಹಿರಿಯ ಸದಸ್ಯರನ್ನು ಗೌರವ ಪೂರ್ವಕವಾಗಿ ಸನ್ಮಾನಿಸಲಾಯಿತು. ಕಾರ್ಯಕ್ರಮವು ಯಶಸ್ವಿಯಾಗಿ ನಡೆದಿರುತ್ತದೆ. ಇದಕ್ಕೆ ತಗುಲಿದ ಖರ್ಚು ವೆಚ್ಚ ಈ ಕೆಳಗಿನಂತೆ ಇರುತ್ತದೆ.

| ಕ್ರ ಸಂ | ವಿವರಗಳು | ಮೊತ್ತ |
|---|---|---|
| 01 | ವಿದ್ಯಾ ನಿಧಿಯಿಂದ | 26,840 |
| 02 | ಹಿರಿಯ ನಾಗರೀಕರ ಸನ್ಮಾನ ನಿಧಿಯಿಂದ | 6,649 |
| | **ಒಟ್ಟು ಮೊತ್ತ** | 33,489 |

**4) ಸದಸ್ಯರ ಠೇವಣಿಗಳು– ರೂ.26,54,89,667/–**

ಸಂಘದ ಸದಸ್ಯರಿಂದ ವಿವಿಧ ಠೇವಣಾತಿಗಳನ್ನು ಸಂಗ್ರಹಿಸಲಾಗುತ್ತಿದ್ದು, ಠೇವಣಿಯು ಕಳೆದ ಸಾಲಿಗಿಂತ ಶೇಕಡ 5.09ರಷ್ಟು ಏರಿಕೆಯಾಗಿರುತ್ತದೆ. ಸಂಘದ ಆರ್ಥಿಕ ಸ್ಥಿರತೆ, ಆರ್ಥಿಕ ಹೊರೆಯನ್ನು ಗಮನದಲ್ಲಿಟ್ಟುಕೊಂಡು ಠೇವಣಾತಿಗಳ ಬಡ್ಡಿ ದರವನ್ನು ಕಾಲಕಾಲಕ್ಕೆ ಪರಿಶೀಲಿಸಿ ಆಡಳಿತ ಮಂಡಲಿಯಲ್ಲಿ ಪರಿಷ್ಕರಣೆ ಮಾಡಲಾಗಿರುತ್ತದೆ.

ಸಂಸ್ಥೆಯ ಪ್ರಾರಂಭದ ದಿನಗಳಲ್ಲಿ ಚಾಲ್ತಿಯಲ್ಲಿದ್ದ ನಗದು ಪತ್ರವನ್ನು ಕೆಲವು ಸದಸ್ಯರು ಖರೀದಿಸಿದ್ದು, ಅವಧಿ ಮುಕ್ತಾಯವಾಗಿದ್ದರೂ ಹಿಂಪಡೆದಿರುವುದಿಲ್ಲ. ಇದನ್ನು ಪ್ರತಿ ಲೆಕ್ಕಪರಿಶೋಧನಾ ವರದಿಯಲ್ಲೂ ಆಕ್ಷೇಪಣೆ ಮಾಡಲಾಗುತ್ತಿದೆ. ಆದುದರಿಂದ ಅಂತಹ ಸದಸ್ಯರು ಇದನ್ನೇ ತಿಳುವಳಿಕೆ ಪತ್ರವೆಂದು ತಿಳಿದು ಸಂಘದ ವ್ಯವಹಾರದ ವೇಳೆಯಲ್ಲಿ ತಮ್ಮ ಹಣವನ್ನು ಪಡೆದು ಖಾತೆ ಮುಕ್ತಾಯ ಮಾಡಿಕೊಳ್ಳುವಂತೆ ಕೋರಲಾಗಿದೆ.

**5) ಇತರೆ ಜವಾಬ್ದಾರಿಗಳು – ರೂ. 31,93,223/–**

**ಸದಸ್ಯರ ಲಾಭಾಂಶ:** ರೂ.27,70,178/– ಲಾಭಾಂಶ ಪಾವತಿಸಲು ಬಾಕಿ ಇರುತ್ತದೆ. ಲಾಭಾಂಶ ಪಡೆಯದೆ ಇರುವ ಸದಸ್ಯರು ಸಂಘದ ವ್ಯವಹಾರದ ವೇಳೆಯಲ್ಲಿ ಷೇರು ಪಾಸ್‌ಪುಸ್ತಕವನ್ನು ಹಾಜರುಪಡಿಸಿ ಪಡೆದುಕೊಳ್ಳುವಂತೆ ಸೂಚಿಸಲಾಗಿದೆ. ಉಪನಿಯಮ 91 ರಂತೆ ಲಾಭಾಂಶ ಘೋಷಿಸಿದ ದಿನಾಂಕದಿಂದ 3 ವರ್ಷದೊಳಗೆ ಲಾಭಾಂಶ ಪಡೆಯದಿರುವ ಮೊಬಲಗನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡಲಾಗುವುದು. ಆದುದರಿಂದ 2021–22ನೇ ಸಾಲಿನ ಲಾಭಾಂಶ ಪಡೆಯದೆ ಇರುವ ಸದಸ್ಯರು ದಿನಾಂಕ 30/09/2025ರವರೆಗೆ ಪಡೆಯಲು ಅವಕಾಶವಿರುತ್ತದೆ. ಇದೇ ತಿಳುವಳಿಕೆ ಪತ್ರವಾಗಿದ್ದು, ಮುಂದೆ ಇದರ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡುವುದಿಲ್ಲ.

**ಜಿಎಸ್‌ಟಿ ಪಾವತಿಸಬೇಕಾದದ್ದು:** ರೂ. (530/–) ಸದರಿ ಹೆಚ್ಚಿಗೆ ಪಾವತಿಸಿರುವ ಮೊತ್ತವನ್ನು ಏಪ್ರಿಲ್ 2025ರ ಜಿಎಸ್‌ಟಿ ಸಲ್ಲಿಕೆಯಲ್ಲಿ ಏಪ್ರಿಲ್ 2025ರ ಪಾವತಿ ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗಿರುತ್ತದೆ. ಸಂಘದ ಜಿಎಸ್‌ಟಿ ನೊಂದಣಿಸಂಖ್ಯೆ: 29AADAA7412N1ZI ಆಗಿರುತ್ತದೆ.

**ಸಿಬ್ಬಂದಿ ವೃತ್ತಿ ತೆರಿಗೆ:** ರೂ.1200/– ಮಾರ್ಚಿ ಮಾಹೆಯಲ್ಲಿ ಸಿಬ್ಬಂದಿ ಸಂಬಳದಿಂದ ಕಡಿತಗೊಳಿಸಿದ ಮೊತ್ತವನ್ನು ಏಪ್ರಿಲ್ ಮಾಹೆಯಲ್ಲಿ ಸಂಬಂಧಿತ ಇಲಾಖೆಗೆ ಜಮಾ ಮಾಡಲಾಗಿದೆ.

**ಸಿಬ್ಬಂದಿ ಭವಿಷ್ಯ ನಿಧಿ:** ರೂ.22,550/– ಮಾರ್ಚಿ ಮಾಹೆಯಲ್ಲಿ ಸಿಬ್ಬಂದಿ ಸಂಬಳದಿಂದ ಕಡಿತಗೊಳಿಸಿದ ಮೊತ್ತವನ್ನು ಏಪ್ರಿಲ್ ಮಾಹೆಯಲ್ಲಿ ಸಂಬಂಧಿತ ಇಲಾಖೆಗೆ ಜಮಾ ಮಾಡಲಾಗಿದೆ.

**ಬಾಡಿಗೆ ಮುಂಗಡ:** ರೂ.2,50,000/– ವಿಜಯನಗರ ಶಾಖಾ ಕಛೇರಿ ಆವರಣದಲ್ಲಿ ಸ್ಕೇಟಿಂಗ್ ರಿಂಕ್ ಮತ್ತು ಕಟ್ಟಡದ ಒಂದು ಭಾಗವನ್ನು ಬಾಡಿಗೆಗೆ ನೀಡಲಾಗಿದ್ದು, ಅವರಿಂದ ಸಂಗ್ರಹಿಸಿರುವ ಬಾಡಿಗೆ ಮುಂಗಡದ ಮೊತ್ತ.

**ಷೇರು ಬಾಕಿದಾರರು:** ರೂ.1,44,300/– ಗಳನ್ನು ಷೇರು ಅಮಾನತ್ತಿನಲ್ಲಿ ಇಡಲಾಗಿರುತ್ತದೆ. 333 ಸದಸ್ಯರು ಷೇರು ಸುಸ್ತಿದಾರರಾಗಿದ್ದು, ಅಂತಹ ಸದಸ್ಯರು ಸಂಘದ ನಿಯಮಾನುಸಾರ ಷೇರು ಸುಸ್ತಿ ಮೊತ್ತವನ್ನು ಜಮಾ ಮಾಡಿ ಸಂಘದೊಂದಿಗೆ ವ್ಯವಹಾರ ಮಾಡಲು ಕೋರಲಾಗಿದೆ.

**ವಿಮೆ (ಸಿಬ್ಬಂದಿಯವರಿಂದ):** ರೂ.1,625/– ಸಿಬ್ಬಂದಿಯವರು ಎಲ್‌ಐಸಿ ಪಾಲಿಸಿ ಪಡೆದಿದ್ದು, ಪ್ರಿಮಿಯಂ ಕಂತನ್ನು ಮಾಹೆಯಾನ ಸಂಬಳದಿಂದ ಕಡಿತಗೊಳಿಸುವ ಸೌಲಭ್ಯವನ್ನು ಹೊಂದಿರುತ್ತಾರೆ. ಅದರಂತೆ ಸಿಬ್ಬಂದಿಯಿಂದ ಸಂಗ್ರಹಿಸಿದ ಮೊತ್ತವನ್ನು ವರದಿ ಸಾಲಿನಲ್ಲಿ ಎಲ್‌ಐಸಿ ಕಛೇರಿಗೆ ಪಾವತಿಸಲಾಗಿದೆ.

**ಯಶಸ್ವಿನಿ ನೋಂದಣಿ ಶುಲ್ಕ:** ರೂ.3,900/– ಸರ್ಕಾರದಿಂದ ಸಂಘದ ಸದಸ್ಯರಿಗೆ ಯಶಸ್ವಿನಿ ವಿಮಾ ಯೋಜನೆ ಸೌಲಭ್ಯವನ್ನು ನೀಡಲಾಗಿದ್ದು, ನಮ್ಮ ಸಂಘದ ಸದಸ್ಯರಿಂದ ಯಶಸ್ವಿನಿ ವಿಮಾ ಯೋಜನೆಗೆ ಸಂಗ್ರಹಿಸಿದ ಮೊತ್ತವನ್ನು ನಿಯಮಾನುಸಾರ ಎಂ ಡಿ ಸಿ ಸಿ ಬ್ಯಾಂಕ್‌ಗೆ ಏಪ್ರಿಲ್ ಮಾಹೆಯಲ್ಲಿ ಜಮಾ ಮಾಡಲಾಗಿದೆ.

**6) ಕಾಯ್ದಿರಿಸಿದ ಲೆಕ್ಕಗಳು: ರೂ.66,30,258/–**

| ವಿವರ | ಪ್ರಾರಂಭಿಕ ಶಿಲ್ಕು | ವರದಿ ಸಾಲಿನಲ್ಲಿ ಪಾವತಿ | ವರದಿ ಸಾಲಿಗೆ ಕಾಯ್ದಿರಿಸಿದ್ದು | ಅಂತಿಮ ಶಿಲ್ಕು ಪಾವತಿಸಬೇಕಾದದ್ದು |
|---|---|---|---|---|
| ಲೆಕ್ಕ ಪರಿಶೋಧನಾ ಶುಲ್ಕ | 1,21,500–00 | 1,21,500–00 | 1,21,500–00 | 1,21,500–00 |
| ಅಗಸ್ತ್ಯ ರಜತಸಿರಿ ಆರ್‌ಡಿ ಮೇಲಿನ ಬಡ್ಡಿ | 75,09,654–00 | 75,09,654–00 | – | – |
| ನಗದು ಪತ್ರದ ಮೇಲಿನ ಬಡ್ಡಿ | 15,994–00 | – | – | 15,994–00 |
| ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 22,01,570–00 | 17,89,480–00 | 29,36,110–00 | 33,48,200–00 |
| ಸಂಚಿತ ಠೇವಣಿ ಮೇಲಿನ ಬಡ್ಡಿ | 8,44,125–00 | 6,88,887–00 | 9,07,813–00 | 10,63,051–00 |
| ಪಿಗ್ಮಿ ಠೇವಣಿ ಮೇಲಿನ ಬಡ್ಡಿ | – | – | 55,460–00 | 55,460–00 |
| ಸಿಬ್ಬಂದಿ ಗಳಿಕೆ ರಜಾ ಪಾವತಿಸ ಬೇಕಾದದ್ದು | 16,11,000–00 | – | 1,33,092–00 | 17,44,092–00 |
| ಭದ್ರತಾ ಕಪಾಟು ಠೇವಣಿ ಮೇಲಿನ ಬಡ್ಡಿ | 12,110–00 | 12,110–00 | 12,176–00 | 12,176–00 |
| ವೈಕುಂಠ ನಿಧಿ ಮೇಲಿನ ಬಡ್ಡಿ | 2,62,058–00 | 49,500–00 | 57,227–00 | 2,69,785–00 |
| **ಒಟ್ಟು ಮೊತ್ತ** | **1,25,78,011–00** | **1,01,71,131–00** | **42,23,378–00** | **66,30,258–00** |

**7) ಅಮಾನತ್ತು ಲೆಕ್ಕಗಳು: ರೂ.3,31,404/–**

ಸದಸ್ಯರು ಸಂಘದ ಬ್ಯಾಂಕ್ ಖಾತೆಗೆ NEFT/Online Banking ಮುಖಾಂತರ ಜಮಾ ಮಾಡಿದ ಮೊಬಲಗಿನ ವಿವರವನ್ನು ಸಂಸ್ಥೆಗೆ ನೀಡದೆ ಇರುವ ಮೊತ್ತ, ಅವಧಿ ಮುಕ್ತಾಯವಾದ ನಾಮಮಾತ್ರ ಸದಸ್ಯರ ಹೆಸರಿನಲ್ಲಿದ್ದ ಸದಸ್ಯರ ಉಳಿತಾಯ ಖಾತೆ ಮೊತ್ತ, ಸಂಘದಿಂದ ಸದಸ್ಯರಿಗೆ ಪಾವತಿಗಾಗಿ ನೀಡಿದ ಚೆಕ್ ಹಾಳೆಯನ್ನು ನಗದೀಕರಿಸದೆ ಇರುವ ಮೊತ್ತ ಇತ್ಯಾದಿ ಮೊಬಲಗನ್ನು ಅಮಾನತ್ತು ಖಾತೆಯಲ್ಲಿ ಇಡಲಾಗಿದೆ.

**8) ನಗದು ಶಿಲ್ಕು: ರೂ.15,47,922/–**

ಸಂಘದ ಪ್ರಧಾನ ಹಾಗೂ ಶಾಖಾ ಕಛೇರಿಯಲ್ಲಿ ನಿಯಾಮಾನುಸಾರ ಸಂಘದಲ್ಲಿಟ್ಟುಕೊಳ್ಳಬಹುದಾದ ನಗದು ಶಿಲ್ಕನ್ನು ಆಡಳಿತ ಮಂಡಲಿ ಸಭೆಯಲ್ಲಿ ನಿಗದಿ ಪಡಿಸಿರುವಂತೆ ದಿನನಿತ್ಯದ ವ್ಯವಹಾರಕ್ಕಾಗಿ ಇರಿಸಿಕೊಳ್ಳಲಾಗಿದೆ.

**9) ಬ್ಯಾಂಕ್ ಶಿಲ್ಕುಗಳು: ರೂ.60,07,545/–**

ಸಂಘವು ನಿಯಮಾನುಸಾರ ನಿಗದಿಪಡಿಸಿರುವ ಕನಿಷ್ಟ ಮೊತ್ತವನ್ನು ದಿನ ನಿತ್ಯದ ವ್ಯವಹಾರದಲ್ಲಿ ತೊಡಗಿಸಿಕೊಂಡು ಹೆಚ್ಚು ಸಂಗ್ರಹವಾದ ಮೊತ್ತವನ್ನು ಸಂಘವು ಹೊಂದಿರುವ ಚಾಲ್ತಿ/ಉಳಿತಾಯ ಖಾತೆಗೆ ಜಮಾ ಮಾಡಲಾಗುವುದು. ಸದಸ್ಯರ ಅನುಕೂಲಕ್ಕಾಗಿ ನಗದು ವ್ಯವಹಾರವನ್ನು ಕಡಿತಗೊಳಿಸುವ ಸಲುವಾಗಿ ಸಂಘವು ಹೊಂದಿರುವ ರಾಷ್ಟ್ರೀಕೃತ ಬ್ಯಾಂಕಿನ ಮೂಲಕ RTGS/NEFT ಮೂಲಕ ಮತ್ತು ಸಂಬಂಧಿಸಿದ ಸದಸ್ಯರ ಹೆಸರಿನಲ್ಲಿ ಚೆಕ್ ಮೂಲಕ ಹಣ ಪಾವತಿ ಮಾಡುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

**10) ಧನ ವಿನಿಯೋಗಗಳು: ರೂ. 7,99,20,273/–**

ಸಂಘವು ದೈನಂದಿನ ವ್ಯವಹಾರಗಳಿಗೆ ಹಣವನ್ನು ಚಾಲ್ತಿ/ಉಳಿತಾಯ ಖಾತೆಯಲ್ಲಿ ತೊಡಗಿಸುವುದರ ಮೂಲಕ ಹಾಗೂ ಆಗಿಂದಾಗ್ಗೆ ಒಳಹರಿವಿನ ಹೆಚ್ಚುವರಿ ಮೊತ್ತವನ್ನು ರಾಷ್ಟ್ರೀಕೃತ/ನಿಗದಿತ ಮತ್ತು ಸಹಕಾರ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ/ನಗದು ಪ್ರಮಾಣ ಪತ್ರದ ಮೂಲಕ ಹಣವನ್ನು ತೊಡಗಿಸಲಾಗಿದೆ.

ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ನಿ., ಇದರಲ್ಲಿ ಠೇವಣಾತಿಯಲ್ಲಿ ತೊಡಗಿಸಿದ್ದ ಮೊತ್ತ ರೂ.1,39,00,088/– ಗಳನ್ನು ವಾಪಸ್ಸು ಪಡೆಯಲಾಗಿರುತ್ತದೆ. ಠೇವಣಾತಿ ವಾಪಸಾತಿಯಲ್ಲಿ ಆದ ಅಡಚಣೆಗೆ ಸಂಘವು ಹೆಚ್ಚಿನ ಶ್ರಮವನ್ನು ವಹಿಸಿದ್ದು ಆರ್.ಬಿ.ಐ.ಗೆ ಪತ್ರವನ್ನು ಬರೆದು ಅದರ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ಬ್ಯಾಂಕಿಗೆ ಪತ್ರ ವ್ಯವಹಾರವನ್ನು ಮಾಡಲಾಗಿದ್ದು ಹಾಗೂ ಸಂಘದ ಕಾನೂನು ಸಲಹೆಗಾರರ ಮೂಲಕ ಪತ್ರವನ್ನು ಬರೆದು ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಬ್ಯಾಂಕಿನವರೊಂದಿಗೆ ಪ್ರತಿ ಹಂತದಲ್ಲಿಯೂ ನಿರಂತರವಾಗಿ ವಿಲೀನೀಕರಣದ ಹಾಗೂ ಆರ್ಥಿಕ ಸ್ಥಿತಿಗತಿಯ ಮಾಹಿತಿಯನ್ನು ಸಂಗ್ರಹಿಸಿ ದಿ ಕಾಸ್ಮೋಸ್ ಮಲ್ಟಿ ಸ್ಟೇಟ್ ಕೋ–ಆಪರೇಟಿವ್ ಬ್ಯಾಂಕ್ ಲಿ., ರವರೊಂದಿಗೆ ವಿಲೀನೀಕರಣವಾದ ದಿನಾಂಕದಂದು ಅವರ ಅಧಿಕಾರಿಗಳೊಂದಿಗೆ ಸಂಘದಿಂದ ಪದಾಧಿಕಾರಿಗಳು ನೇರವಾಗಿ ಭೇಟಿ ಮಾಡಿ ಸಂಘದ ಠೇವಣಿಗಳನ್ನು ಮುಕ್ತಾಯಗೊಳಿಸುವಂತೆ ಸೂಚಿಸಿ ಠೇವಣಾತಿ ಮೊತ್ತದೊಂದಿಗೆ ಬಡ್ಡಿಯನ್ನು ಸೇರಿಸಿ ವಾಪಸ್ಸು ಪಡೆಯಲಾಗಿರುತ್ತದೆ. ಇದಕ್ಕೆ ಸಹಕರಿಸಿದ ಸಂಘದ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸಲಾಗುತ್ತಿದೆ.

ಸಂಘದ ಹೆಚ್ಚುವರಿ ಮೊತ್ತವನ್ನು ರಾಷ್ಟ್ರೀಕೃತ/ ನಿಯಮಿತ ಹಾಗೂ ಸಹಕಾರ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಠೇವಣಾತಿಯಲ್ಲಿ ತೊಡಗಿಸಲಾಗಿದೆ. ಸರ್ವಸದಸ್ಯರ ಸಭೆಯ ಅನುಮೋದನೆಯಂತೆ ಲಾಭಾಂಶದ ಹಂಚಿಕೆಯ ಮೊತ್ತವನ್ನು ಆಯಾಯ ನಿಧಿಗಳಿಗೆ ವರ್ಗಾವಣೆ ಮಾಡಿ ನಿಯಮಾನುಸಾರ ಇತರೇ ನಿಧಿಗಳಲ್ಲಿ ಮೊತ್ತವನ್ನು ರಾಷ್ಟ್ರೀಕೃತ/ ನಿಯಮಿತ ಹಾಗೂ ಸಹಕಾರ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಠೇವಣಾತಿಯಲ್ಲಿ ತೊಡಗಿಸಿ ಇಯರ್ ಮಾರ್ಕ್ ಮಾಡಲಾಗಿದೆ. ವಿವರ ಈ ಕೆಳಗಿನಂತಿದೆ.

| ವಿವರ | ಹೂಡಿಕೆಗಳು | ಆಪದ್ಧನ ನಿಧಿ ಹೂಡಿಕೆ | ಷೇರು ಮೊತ್ತ | ಇತರೆ ನಿಧಿಗಳ ಹೂಡಿಕೆಗಳು | ಒಟ್ಟು ಮೊತ್ತ |
|---|---|---|---|---|---|
| ಮೈಸೂರು ಚಾಮರಾಜನಗರ ಜಿಲ್ಲಾ ಕೇಂದ್ರ ಬ್ಯಾಂಕ್ ಲಿ., | – | 1,99,06,756 | 10,000 | – | 1,99,16,756 |
| ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಲಿ., | 1,29,86,721 | – | – | 1,43,41,108 | 2,73,27,829 |
| ಯುಕೊ ಬ್ಯಾಂಕ್ ಮೈಸೂರು | 2,41,21,114 | 12,59,207 | – | 72,95,367 | 3,26,75,688 |
| **ಒಟ್ಟು ಮೊತ್ತ** | **3,71,07,835** | **2,11,65,963** | **10,000** | **2,16,36,475** | **7,99,20,273** |

**11) ಸ್ಥಿರಾಸ್ತಿ ಹಾಗೂ ಚರಾಸ್ತಿಗಳು: ರೂ.1,54,50,941/–**

ಸಂಘವು ಒಟ್ಟು ರೂ. 1,54,50,941/– ಸ್ಥಿರಾಸ್ತಿ–ಚರಾಸ್ತಿ ಹೊಂದಿದೆ. ಸಂಘದ ಶಾಖಾ ಕಛೇರಿ ಸಿಎ–16 ನಿವೇಶನ "ನಾಗರೀಕ ಸೌಲಭ್ಯ" ನಿವೇಶನವಾಗಿದ್ದು, ದಿನಾಂಕ 13/12/2000 ರಲ್ಲಿ ಮುಡಾದೊಂದಿಗೆ 30 ವರ್ಷಗಳಿಗೆ ಭೋಗ್ಯದ ಒಪ್ಪಂದದ ಪ್ರಕಾರ ಪಡೆಯಲಾಗಿದೆ. ಒಟ್ಟು ಗುತ್ತಿಗೆಯ ಮೊಬಲಗನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಮರುನಿಗದಿಪಡಿಸುವುದನ್ನು ಗಮನದಲ್ಲಿರಿಸಿಕೊಂಡು 30 ವರ್ಷಗಳಿಗೆ ಸಮವಾಗಿ ಹೊಂದಾಣಿಕೆ ಮಾಡುವ ಸಲುವಾಗಿ ವರದಿ ಸಾಲಿನಲ್ಲಿ ರೂ.1,12,000/–ಸವಕಳಿ ನಿಧಿಯಲ್ಲಿ ಹೊಂದಾಣಿಕೆ ಮಾಡಲಾಗಿರುತ್ತದೆ. ಈ ಮೊತ್ತವನ್ನು ಮುಂದೆ ಪ್ರಾಧಿಕಾರದವರು ಭೋಗ್ಯ/ ಖರೀದಿ ಮೊತ್ತವನ್ನು ನಿಗದಿಪಡಿಸಿದಾಗ ಉಪಯೋಗಿಸಿಕೊಳ್ಳಲಾಗುವುದು.

ವರದಿ ಸಾಲಿನಲ್ಲಿ ರೂ.21,186/– ಮೌಲ್ಯದ 1 ಪ್ರಿಂಟರ್ ಹಾಗೂ ರೂ.27,118/– ಮೌಲ್ಯದ 5 ಕುರ್ಚಿಗಳನ್ನು ಖರೀದಿ ಮಾಡಲಾಗಿದ್ದು, ಆಯಾ ಖಾತೆ ಸ್ಟಾಕ್‌ಗೆ ತೆಗೆದುಕೊಳ್ಳಲಾಗಿದೆ.

**12) ಸದಸ್ಯರ ಸಾಲಗಳು: ರೂ.24,31,35,777/–**

ವರ್ಷಾಂತ್ಯಕ್ಕೆ ವಿವಿಧ ಸಾಲಗಳಿಂದ ಬಾಕಿ ರೂ.24,31,35,777/–ಗಳಿದ್ದು, ಹಿಂದಿನ ಸಾಲಿಗೆ

ಹೋಲಿಸಿದ್ದಲ್ಲಿ ಸಾಲ ವಿತರಣೆಯ ಪ್ರಮಾಣವು ಕಳೆದ ಸಾಲಿಗಿಂತ ಶೇಕಡ 28.76ರಷ್ಟು ಏರಿಕೆಯಾಗಿರುತ್ತದೆ. ಸಾಲ ವಸೂಲಾತಿಯು ಸಹ ಹಿಂದಿನ ಸಾಲಿಗಿಂತ ಶೇಕಡ 14.89ರಷ್ಟು ವರದಿ ಸಾಲಿಗೆ ಏರಿಕೆಯಾಗಿರುತ್ತದೆ. ಸಂಘದಿಂದ ಸಾಲ ಪಡೆದಿರುವ ಸದಸ್ಯರೆಲ್ಲರೂ ಕ್ರಮಬದ್ಧವಾಗಿ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕೆಂದು ಕೋರುತ್ತೇವೆ. ಸಂಘದಲ್ಲಿನ ಸುಸ್ತಿಸಾಲ ವಸೂಲಾತಿಗಾಗಿ ನಿಯೋಜಿಸಲಾದ ಸಿಬ್ಬಂದಿಯು ಪ್ರತಿದಿನ ಸಾಲ ಸುಸ್ತಿದಾರರ ಮನೆಗೆ ಖುದ್ದಾಗಿ ತೆರಳಿ ಸಾಲ ವಸೂಲಾತಿ ಕಾರ್ಯ ಕೈಗೊಂಡಿರುತ್ತಾರೆ. ಎಸ್‌ಎಂಎಸ್ ಮೂಲಕ ಸುಸ್ತಿ ಸಾಲದ ಮಾಹಿತಿಯನ್ನು ಸದಸ್ಯರಿಗೆ ಕಳುಹಿಸಲಾಗುತ್ತಿದೆ. ಸಂಸ್ಥೆಯ ಸಿಬ್ಬಂದಿವರ್ಗದವರು, ಪದಾಧಿಕಾರಿಗಳು ಮತ್ತು ನಿರ್ದೇಶಕ ಮಂಡಲಿ ಸದಸ್ಯರು ನೇರವಾಗಿ ಹಾಗೂ ದೂರವಾಣಿ ಕರೆ ಮಾಡುವುದರ ಮೂಲಕವೂ ಮಾಸಿಕ ಕಂತನ್ನು ಕಟ್ಟಲು ತಿಳುವಳಿಕೆ ನೀಡಲಾಗುತ್ತಿದೆ. ಸಾಲ ಮರುಪಾವತಿಯ ಅನುಕೂಲಕ್ಕಾಗಿ ಸಂಘದ ಯುಕೋ ಬ್ಯಾಂಕ್ ಖಾತೆಯ ಚಾಲ್ತಿ ಖಾತೆಗೆ RTGS/NEFT ಮೂಲಕ ಹಣವನ್ನು ಜಮಾ ಮಾಡಿ ಸಂಘಕ್ಕೆ ಮಾಹಿತಿ ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸಂಘದ ಬ್ಯಾಂಕ್ ಚಾಲ್ತಿ ಖಾತೆಗೆ ನೆಫ್ಟ್ ಮಾಡುವ ವ್ಯವಸ್ಥೆಯನ್ನು ತೊಡಗಿಸಿಕೊಳ್ಳಲು ಸಾಧ್ಯವಾಗದೇ ಇರುವ ಸದಸ್ಯರು ತಾವು ಮಾಸಿಕ ಕಂತನ್ನು ಪಾವತಿಸುವ ದಿನಾಂಕದಂದು ದೂರವಾಣಿ ಮುಖಾಂತರ ತಿಳಿಯಪಡಿಸಿದ್ದಲ್ಲಿ ಸಂಘದ ವಸೂಲಾತಿ ಸಿಬ್ಬಂದಿಯವರು ಖುದ್ದಾಗಿ ಮನೆಗೆ ಬಂದು ಸಂಗ್ರಹ ಮಾಡಿಕೊಂಡು ಸಂಘದಿಂದ ಒದಗಿಸಿರುವ ರಶೀದಿಯನ್ನು ತಮಗೆ ನೀಡುತ್ತಾರೆ. ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಂಡು ಮಾಸಿಕ ಕಂತನ್ನು ಕ್ರಮವಾಗಿ ಪಾವತಿಸಬೇಕಾಗಿ ವಿನಂತಿ. ಅವಧಿ ಮೀರಿದ ಸಾಲಗಳ ವಸೂಲಾತಿಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಿ ಸ್ಪಂದಿಸದ ಸದಸ್ಯರುಗಳ ವಿರುದ್ಧ ದಾವಾ ಹೂಡುವ ಕ್ರಮ ಜರುಗಿಸಲಾಗುತ್ತಿದೆ. ಸದಸ್ಯರು ಇದಕ್ಕೆ ಆಸ್ಪದ ಕೊಡದೆ ಸಾಲ ಮರುಪಾವತಿ ಮಾಡುವಂತೆ ಮನವಿ ಮಾಡಲಾಗಿದೆ.

**13) ಸಿಬ್ಬಂದಿ ಸಾಲ: ರೂ.5,19,544/–**

ಖಾಯಂ ಸಿಬ್ಬಂದಿಗೆ ಸಾಲಗಳನ್ನು ಉಪನಿಯಮದನುಸಾರ ವಿತರಣೆ ಮಾಡಲಾಗಿದೆ. ಅಂತಿಮ ಶಿಲ್ಕು ರೂ.5,19,544/–

**14) ಇತರೇ ಆಸ್ತಿಗಳು: ರೂ.75,38,672/–**

**ದಾವಾ ಫೀ:** ರೂ.1,23,900/–ದಾವಾ ಹೂಡಿರುವ ಪ್ರಕರಣಗಳಿಂದ ಬರಬೇಕಾದ ಬಾಬ್ತು. ವರದಿ ಸಾಲಿನಲ್ಲಿ 42 ಸುಸ್ತಿ ಸದಸ್ಯರ ಮೇಲೆ ದಾವ ಹೂಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 4 ಖಾತೆಗಳು ಮುಕ್ತಾಯವಾಗಿರುತ್ತದೆ.

**ಧನವಿನಿಯೋಗಗಳ ಮೇಲಿನ ಬರಬೇಕಾದ ಬಡ್ಡಿ: ರೂ. 6,66,611/–** ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ನಿ., ಇದರಲ್ಲಿ ಠೇವಣಾತಿಯಲ್ಲಿ ಹೂಡಿಕೆ ಮಾಡಲಾಗಿದ್ದು, ಅದರ ಮೇಲೆ ವರದಿ ಸಾಲಿಗೆ ಬರಬೇಕಾದ ಬಡ್ಡಿಯನ್ನು ಸಂಬಂಧಪಟ್ಟ ಬ್ಯಾಂಕಿನ ಧೃಢೀಕರಣದ ಆಧಾರದಂತೆ ತೆಗೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಂಸ್ಥೆಯಿಂದ ಬಡ್ಡಿ ಬಂದಾಗ ಈ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

**ಆದಾಯ ತೆರಿಗೆ ಮೇಲ್ಮನವಿ ಠೇವಣಿ ಪಾವತಿ: ರೂ. 3,13,376/–**ಕ.ನಿ. ವರ್ಷ 2017–18ರ ಸಂಬಂಧ ಆದಾಯ ತೆರಿಗೆ ಅಂತಿಮ ಆದೇಶದಲ್ಲಿ, ಸಂಘದ ಕಲಂ 80ಪಿ ಅಡಿಯಲ್ಲಿ ಲಭ್ಯವಿರುವ ಕಡಿತ ಸೌಲಭ್ಯವನ್ನು ಪರಿಗಣಿಸದೆ ಆದಾಯ ತೆರಿಗೆಯನ್ನು ನಿರ್ಧರಿಸಲಾಗಿದೆ. ಸದರಿ ಆದೇಶದ ವಿರುದ್ಧ ಸಂಘವು ಆದಾಯ ತೆರಿಗೆ ಆಯುಕ್ತರು (ಅಪೀಲ್ಸ್)ರವರಿಗೆ ಮೇಲ್ಮನವಿ ಸಲ್ಲಿಸಿದ್ದು, ನಿಯಮಾನುಸಾರ ಶೇ.20ರಷ್ಟು ಠೇವಣಿ ಮೊತ್ತ ಪಾವತಿಸಲಾಗಿದೆ. ಸಂಘವು ಸಲ್ಲಿಸಿರುವ ಮೇಲ್ಮನವಿಗೆ ಆದಾಯ ತೆರಿಗೆ ಇಲಾಖೆಯಿಂದ ಸಂಘದ ಪರವಾಗಿ ದಿನಾಂಕ 26.07.2022ರಂದು ಆದೇಶ ನೀಡಲಾಗಿರುತ್ತದೆ. ಇದುವರೆಗೂ ಪಾವತಿ ಆಗಿರುವುದಿಲ್ಲ. ಈ ಸಂಬಂಧ ಆದಾಯ ತೆರಿಗೆ ಇಲಾಖೆಯಲ್ಲಿ ಸಂಬಂಧಪಟ್ಟ ಅಧಿಕಾರಿಯನ್ನು ಭೇಟಿ ಮಾಡಲಾಗಿದ್ದು, ಪತ್ರ ವ್ಯವಹಾರವನ್ನು ಮಾಡಲಾಗಿರುತ್ತದೆ.

**ದೂರವಾಣಿ ಠೇವಣಿ:** ರೂ.3,661/– ದೂರವಾಣಿ ಠೇವಣಿ ಇರುತ್ತದೆ.

**ಪುಸ್ತಕ ಮತ್ತು ಫಾರಂಗಳ ದಾಸ್ತಾನು:** ರೂ.33,928/–
ಸಂಘವು ದಿನನಿತ್ಯದ ವ್ಯವಹಾರಕ್ಕೆ ಉಪಯೋಗಿಸಿಕೊಳ್ಳಲಾಗುತ್ತದೆ.

**ಕಾನೂನು ಶುಲ್ಕ ವಸೂಲಾತಿಗೆ ಬಾಕಿ:** ರೂ.1,15,941/–ಸಂಘದಿಂದ ಸಾಲ ಪಡೆದ ಸದಸ್ಯರು ಕ್ರಮವಾಗಿ ಪಾವತಿಸದೇ ಸುಸ್ತಿದಾರರಾದ ಹಾಗೂ ಅವಧಿ ಮೀರಿದ ಸಾಲಗಳ ವಸೂಲಾತಿ ಕ್ರಮವಾಗಿ ಕಾನೂನು ಸಲಹೆಗಾರರ ಮೂಲಕ ತಿಳುವಳಿಕೆ ಪತ್ರವನ್ನು ನೀಡಲಾಗಿದ್ದು, ದಾವಾ ಹೂಡಲಾಗಿರುತ್ತದೆ. ಈ ಮೊತ್ತವನ್ನು ಸುಸ್ತಿ ಸಾಲಗಾರರಿಂದ ವಸೂಲಿ ಮಾಡಲಾಗುವುದು.

**ಟಿ ಡಿ ಎಸ್ ಬರಬೇಕಾದದ್ದು:** ರೂ.62,81,255/– ಸಂಘವು ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸಹಕಾರ ಬ್ಯಾಂಕ್‌ಗಳಲ್ಲಿ ಹಣವನ್ನು ಹೂಡಿಕೆ ಮಾಡಲಾಗಿದ್ದು, ಆ ಮೊತ್ತದಿಂದ ಬರುವ ಬಡ್ಡಿಯ ಮೇಲೆ ಟಿಡಿಎಸ್ ಕಡಿತಗೊಳಿಸಲಾಗಿರುತ್ತದೆ. ಸಂಘವು ಚಾಲ್ತಿ ಖಾತೆಯಲ್ಲಿ ದಿನನಿತ್ಯದ ವ್ಯವಹಾರಕ್ಕೆ ನಗದು ಪಾವತಿ ಮತ್ತು ಜಮಾ ಮಾಡುವುದಕ್ಕೆ 194N ಆಧಾರದಂತೆ ಹಣವನ್ನು ಕಡಿತಗೊಳಿಸಿರುತ್ತದೆ. ವಿವರ ಈ ಕೆಳಗಿನಂತಿದೆ:

| ಕ ನಿ ವರ್ಷ | ಮೊಬಲಗು | | ಕ ನಿ ವರ್ಷ | ಮೊಬಲಗು |
|---|---|---|---|---|
| 2014–15 | 95,964 | | 2021–22 | 4,95,004 |
| 2015–16 | 2,03,512 | | 2022–23 | 5,37,616 |
| 2016–17 | 12,190 | | 2023–24 | 10,82,403 |
| 2018–19 | 11,907 | | 2024–25 | 10,01,278 |
| 2020–21 | 2,72,502 | | 2025–26 | 25,68,879 |
| **ಒಟ್ಟು** | | | | **62,81,255** |

ಮೇಲಿನ ಟಿಡಿಎಸ್ ಬಾಬ್ತು ಮರುಪಾವತಿಗೆ ಸನ್ನದು ಲೆಕ್ಕಿಗರ ಸಲಹೆಯ ಮೇರೆಗೆ ಹಾಗೂ ಮಾರ್ಗದರ್ಶನದಲ್ಲಿ ಆದಾಯತೆರಿಗೆ ಇಲಾಖೆಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ ಹಾಗೂ ಆಂತರಿಕ ಲೆಕ್ಕಪರಿಶೋಧಕರು ಮತ್ತು ಪ್ರಭಾರ ಕಾರ್ಯದರ್ಶಿಯವರು ಖುದ್ದಾಗಿ ಇಲಾಖಾ ಅಧಿಕಾರಿಗಳನ್ನು ಭೇಟಿ ಮಾಡಿ ಅನುಸರಣಾ ಕ್ರಮ ಕೈಗೊಳ್ಳಲಾಗಿರುತ್ತದೆ.

**15) ನಿವ್ವಳ ಲಾಭ: ರೂ.32,09,263/–**

ಸಂಘವು 2024–25ನೇ ಸಾಲಿನಲ್ಲಿ ರೂ. 32,09,263/– ನಿವ್ವಳ ಲಾಭಗಳಿಸಿರುತ್ತದೆ. ಕಳೆದ ಬಾರಿಗೆ ಹೋಲಿಕೆ ಮಾಡಿದಾಗ ಲಾಭ ಕಡಿಮೆಯಾಗಿರುತ್ತದೆ. ಕಾರಣ ಸದರಿ ವರ್ಷದಲ್ಲಿ ಸದಸ್ಯರು ಅಗಸ್ತ್ಯ ರಜತ ಸಿರಿ ಆರ್ ಡಿ ಖಾತೆಯಲ್ಲಿ ತೊಡಗಿಸಿದ ಮೊತ್ತದ ಅವಧಿ ಮುಕ್ತಾಯಗೊಂಡಿದ್ದು, ಅದಕ್ಕೆ ಹೆಚ್ಚುವರಿಯಾಗಿ ಬಡ್ಡಿಯನ್ನು ಪಾವತಿ ಮಾಡಲಾಗಿರುತ್ತದೆ. ಸಂಘದ ಸದಸ್ಯರಿಂದ ಚಿನ್ನಾಭರಣ ಸಾಲ ಹಾಗೂ ಸ್ಥಿರಾಧಾರ ಸಾಲಗಳ ಬೇಡಿಕೆ ಹೆಚ್ಚಾಗಿದ್ದು, ಅದರ ಪಾವತಿಗೆ ಸಂಘದ ಹೂಡಿಕೆಯನ್ನು ಅವಧಿಗೆ ಮುನ್ನ ಮುಕ್ತಾಯಗೊಳಿಸಲಾಗಿರುತ್ತದೆ. ಇದರಿಂದ ಹೂಡಿಕೆ ಮೇಲಿನ ಬಡ್ಡಿಯು ಕಡಿಮೆಯಾಗಿರುತ್ತದೆ ಹಾಗೂ ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಹೂಡಿಕೆಗಳನ್ನು ರಾಷ್ಟ್ರೀಕೃತ/ನಿಯಮಿತ ಬ್ಯಾಂಕಿನಲ್ಲಿ ಹೂಡಿಕೆ ಮಾಡಲಾಗಿದ್ದು, ನಿಯಮಾನುಸಾರ ಹೂಡಿಕೆ ಮೇಲಿನ ಬಡ್ಡಿಗೆ ಆದಾಯ ತೆರಿಗೆ ಪಾವತಿ ಅಂದಾಜು ಶೇಕಡ.30 ಪಾವತಿ ಮಾಡಬೇಕಾಗಿರುತ್ತದೆ. ವರದಿ ಸಾಲಿನಲ್ಲಿ ರೂ.6,34,873/– ಆದಾಯ ತೆರಿಗೆ ಪಾವತಿ ಮಾಡಲಾಗಿರುತ್ತದೆ. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡುವುದರಿಂದ ಆದಾಯತೆರಿಗೆ ಇಲಾಖೆ ನೀಡುತ್ತಿರುವ 80P ರಿಯಾಯಿತಿ ಸಿಗುವುದಿಲ್ಲ. ಠೇವಣಾತಿ ಮೇಲಿನ ಬಡ್ಡಿ ದರವು ಸಹಕಾರ ಬ್ಯಾಂಕ್‌ಗಳಿಗೆ ಹೋಲಿಸಿದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಕಡಿಮೆ ಇರುತ್ತದೆ. ಅದರ ಮೇಲೆ ಆದಾಯತೆರಿಗೆ ಪಾವತಿ ಮಾಡಬೇಕಾಗಿರುವುದರಿಂದ ಇದು ನೇರವಾಗಿ ಸಂಘದ ಲಾಭಗಳಿಕೆಯ ಮೇಲೆ ಪರಿಣಾಮ ಬೀರುತ್ತದೆ. ಆದುದರಿಂದ ಸಂಘದ ಹೂಡಿಕೆ/ನಿಧಿಗಳ ಮೊತ್ತವನ್ನು ಸಹಕಾರಿ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ಅನುಮತಿ ನೀಡಬೇಕೆಂದು ಸರ್ವಸದಸ್ಯರ ಸಭೆಗೆ ಮನವಿ ಮಾಡಿಕೊಳ್ಳುತ್ತಿದ್ದೇವೆ.

ವರದಿ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ.32,09,263/–ಗಳನ್ನು ಉಪನಿಬಂಧನೆಯ ಅನ್ವಯ ಹಂಚಿಕೆಗೆ ಮಹಾಸಭೆಯ ಅನುಮೋದನೆಗೆ ಮಂಡಿಸಲಾಗಿದ್ದು, ಅಂಗೀಕಾರ ಕೋರಲಾಗಿದೆ.

**16) ಆದಾಯತೆರಿಗೆ:** ಸಂಘದ ಆದಾಯ ತೆರಿಗೆ ಸಲ್ಲಿಕೆಗಳನ್ನು ಸನ್ನದು ಲೆಕ್ಕಿಗರಾದ ಸಿ.ಎ. ಸದಾಶಿವ ಕೆ.ಎಸ್ (ಪಾಲುದಾರರು) ಮುಖಾಂತರ ನಿಗದಿತ ಸಮಯದಲ್ಲಿ ಆದಾಯತೆರಿಗೆ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

**17) ಸರಕು ಮತ್ತು ಸೇವಾ ತೆರಿಗೆ:** ಸಂಘದ ಜಿ.ಎಸ್.ಟಿ ಮಾಹೆಯಾನ ಸಲ್ಲಿಕೆಗಳನ್ನು ನಿಗದಿತ ದಿನಾಂಕದೊಳಗೆ ಸಂಘದ ಜಿ ಎಸ್ ಟಿ ಸಲಹೆಗಾರರಾದ ಸಿ.ಎ. ಸದಾಶಿವ ಕೆ ಎಸ್ (ಪಾಲುದಾರರು) ಇವರ ಮುಖಾಂತರ ಸಲ್ಲಿಸಲಾಗಿರುತ್ತದೆ.

**18) ಟಿ.ಡಿ.ಎಸ್ ಕಡಿತ:** ಸಂಘದಿಂದ ಟಿ.ಡಿ.ಎಸ್ ಕಡಿತ ಅನ್ವಯವಾಗುವ ಪಾವತಿಗಳ ಮೇಲೆ ಟಿ.ಡಿ.ಎಸ್ ಕಡಿತಗೊಳಿಸಿ, ಸದರಿ ಮೊತ್ತವನ್ನು ನಿಗದಿತ ದಿನಾಂಕದೊಳಗೆ ಪಾವತಿ ಮತ್ತು ಸಲ್ಲಿಕೆಗಳನ್ನು ಸಂಘದ ಸಲಹೆಗಾರರಾದ ಭವಾನಿ ಅಸೋಸಿಯೇಟ್ಸ್‌ರವರ ಮುಖಾಂತರ ಸಲ್ಲಿಸಲಾಗಿರುತ್ತದೆ.

**19) ಸಿಬ್ಬಂದಿ ವರ್ಗ:** ಸಂಘದಲ್ಲಿ ಪ್ರಸ್ತುತ 6 ಜನ ಖಾಯಂ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸಿಬ್ಬಂದಿ ವರ್ಗದವರಿಗೆ ಕಳೆದ ಸಾಲಿನ ಸರ್ವಸದಸ್ಯರ ಸಭೆಯ ತೀರ್ಮಾನದಂತೆ ಎಕ್ಸ್‌ಗ್ರೇಷಿಯಾ ಪ್ರತಿ ಸಿಬ್ಬಂದಿಗೆ ರೂ. 10,000/–ದಂತೆ ರೂ.60,000/– ಮತ್ತು ಮೂರು ಗುತ್ತಿಗೆ ಸಿಬ್ಬಂದಿಯವರಿಗೆ ರೂ.30,000/– ಹಾಗೂ ಒಬ್ಬ ಸಿಬ್ಬಂದಿಗೆ ರೂ. 10,000/–ದಂತೆ ಒಟ್ಟು ರೂ.1,00,000/– ಎಕ್ಸ್‌ಗ್ರೇಷಿಯಾ ಪಾವತಿಸಲಾಗಿದೆ.

**20) ಇತರೆ:** ಸಂಘದಲ್ಲಿ ಕೆಲವು ಹಿರಿಯ ಸದಸ್ಯರು ಹಾಗೂ ಸದಸ್ಯರುಗಳು ಮನವಿ ಪತ್ರವನ್ನು ನೀಡಿದ್ದು, ಸಂಘದ ವ್ಯವಹಾರದ ಸ್ಥಳ ಮೊದಲನೇ ಮಹಡಿಯಲ್ಲಿರುವುದರಿಂದ ಸದಸ್ಯರಿಗೆ ಹತ್ತಲು ಕಷ್ಟವಾಗುತ್ತಿದ್ದು ಹಾಗೂ ಕೆಲವು ಹೃದಯಸಂಬಂಧಿ ಖಾಯಿಲೆಯಿಂದ ಬಳಲುತ್ತಿರುವ ಸದಸ್ಯರುಗಳು ಸಂಘದಲ್ಲಿ ಲಿಫ್ಟ್ ಅಳವಡಿಕೆಗೆ ಮನವಿ ಮಾಡಿರುವುದನ್ನು ಪರಿಗಣಿಸಿ ಸಂಘದ ಪ್ರಧಾನ ಕಛೇರಿಗೆ ಲಿಫ್ಟ್ ಅಳವಡಿಸಲು ಅನುಮತಿ ನೀಡುವಂತೆ ಸರ್ವಸದಸ್ಯರಲ್ಲಿ ಮನವಿ ಮಾಡುತ್ತಿದ್ದೇವೆ.

ಸಂಘದ ಪ್ರಧಾನ ಕಛೇರಿಯ 30ನೇ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 15/12/2024 ರಂದು ಸದ್ವಿದ್ಯಾ ಶಾಲೆಯಲ್ಲಿ ಸಂಘದ ಸದಸ್ಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ತತ್ಸಂಬಂಧ ದಿನಾಂಕ 25/12/2024 ರಂದು ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರದಲ್ಲಿ ಸಂಘದ ಪ್ರವರ್ತಕರುಗಳ ಹಾಗೂ ಸದಸ್ಯರ ಸಮ್ಮುಖದಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮ, ಗ್ರಾಹಕರ ಸಮಾವೇಶ ಮತ್ತು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಎಲ್ಲಾ ಸದಸ್ಯ ಬಾಂಧವರಿಗೆ, ನಿರ್ದೇಶಕರುಗಳಿಗೆ, ಆಂತರಿಕ ಲೆಕ್ಕ ಪರಿಶೋಧಕರಿಗೆ, ಕಾನೂನು ಸಲಹೆಗಾರರಿಗೆ, ಅಂತಿಮ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಿದ ಸನ್ನದು ಲೆಕ್ಕಿಗರಿಗೆ ಮತ್ತು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ಸನ್ನದು ಲೆಕ್ಕಿಗರಿಗೆ, ಜಿಎಸ್‌ಟಿ ಸಲಹೆಗಾರರಿಗೆ, ಮಹಾಸಭೆಯ ವರದಿ ಪುಸ್ತಕವನ್ನು ಮುದ್ರಿಸಿದ ಮುದ್ರಣಾಲಯದವರಿಗೆ, ಸಂಘದ ನಿರಂತರ ವ್ಯವಹಾರಗಳಿಗೆ ಶ್ರಮಿಸುತ್ತಿರುವ ಆಭರಣ ಮೌಲ್ಯಮಾಪಕರು, ಸ್ಥಿರಾಸ್ತಿ ಮೌಲ್ಯಮಾಪಕರು, ಪಿಗ್ಮಿ ಸಂಗ್ರಹಕಾರರು, ಭದ್ರತಾ ಸಿಬ್ಬಂದಿ, ಸಂಘವು ಖಾತೆ ಮತ್ತು ಹೂಡಿಕೆಯಲ್ಲಿ ತೊಡಗಿಸಿರುವ ಕೋ–ಆಪರೇಟಿವ್ ಬ್ಯಾಂಕ್ ಮತ್ತು ನಿಗದಿತ/ರಾಷ್ಟ್ರೀಕೃತ ಬ್ಯಾಂಕ್‌ಗಳು, ಸಹಕಾರ ಇಲಾಖೆಯವರಿಗೆ, ಸಂಸ್ಥೆಯ ಅಭಿವೃದ್ಧಿಗಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂಘದ ಸಿಬ್ಬಂದಿ ವರ್ಗದವರಿಗೆ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಅನಂತಾನಂತ ಧನ್ಯವಾದಗಳು.

ಆಡಳಿತ ಮಂಡಲಿ ಪರವಾಗಿ
**ಎಂ ಡಿ ಗೋಪಿನಾಥ್**
ಅಧ್ಯಕ್ಷರು

# ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

## 01/04/2024 ರಿಂದ 31/03/2025 ರವರೆಗಿನ ಕ್ರೋಢೀಕೃತ ಲಾಭ – ನಷ್ಟದ ತ:ಖ್ತೆ

| 31/03/2024 ಕ್ಕೆ ಇದ್ದಂತೆ ಒಟ್ಟು (ರೂ) | ನಷ್ಟದ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು(ರೂ) | 31/03/2024 ಕ್ಕೆ ಇದ್ದಂತೆ ಒಟ್ಟು(ರೂ) | ಲಾಭದ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು(ರೂ) |
|---:|---|---:|---:|---|---:|
| | **1) ಸದಸ್ಯರ ಠೇವಣಿಗಳ ಮೇಲಿನ ಬಡ್ಡಿ ಲೆಕ್ಕಗಳು:** | | | **1) ಸಾಲಗಳ ಮೇಲಿನ ಬಡ್ಡಿ ಬಂದಿದ್ದು:** | |
| 1,24,17,593.00 | ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ | 1,33,94,511.00 | 4,964.00 | ಆಪತ್ಬಂಧು ಸಾಲಗಳ ಮೇಲಿನ ಬಡ್ಡಿ | 5,647.00 |
| 10,43,739.00 | ಸಂಚಿತ ಠೇವಣಿಗಳ ಮೇಲಿನ ಬಡ್ಡಿ | 12,64,227.00 | – | ಅಲ್ಪಾವಧಿ ಜಂಟಿ ಸಾಲಗಳ ಮೇಲಿನ ಬಡ್ಡಿ | 45,479.00 |
| 15,19,243.00 | ಸದಸ್ಯರ ಉಳಿತಾಯ ಖಾತೆ ಮೇಲಿನ ಬಡ್ಡಿ | 14,82,655.00 | 78,56,798.00 | ಸ್ಥಿರಾಸ್ತಿ ಸಾಲಗಳ ಮೇಲಿನ ಬಡ್ಡಿ | 73,39,237.00 |
| 78,236.00 | ಪಿಗ್ಮಿ ಠೇವಣಿಗಳ ಮೇಲಿನ ಬಡ್ಡಿ | 1,56,919.00 | 72,64,183.00 | ಚಿನ್ನಾಭರಣ ಸಾಲಗಳ ಮೇಲಿನ ಬಡ್ಡಿ | 95,58,969.00 |
| 30,29,376.00 | ಅಗಸ್ತ್ಯರಜತಸಿರಿ ಆರ್.ಡಿ ಠೇವಣಿಗಳ ಮೇಲಿನ ಬಡ್ಡಿ | 14,09,895.00 | 89,865.00 | ಬೆಳ್ಳಿ ಸಾಲಗಳ ಮೇಲಿನ ಬಡ್ಡಿ | 86,238.00 |
| 13,819.00 | ಸಿಬ್ಬಂದಿ ಭದ್ರತಾ ಠೇವಣಿಗಳ ಮೇಲಿನ ಬಡ್ಡಿ | 14,767.00 | 43,775.00 | ವಾಹನ ಸಾಲಗಳ ಮೇಲಿನ ಬಡ್ಡಿ | 2,09,051.00 |
| 12,511.00 | ಭದ್ರತಾ ಕಪಾಟು ಠೇವಣಿಗಳ ಮೇಲಿನ ಬಡ್ಡಿ | 13,320.00 | 5,75,834.00 | ಠೇವಣಿ ಆಧಾರ ಸಾಲಗಳ ಮೇಲಿನ ಬಡ್ಡಿ | 5,82,225.00 |
| **1,81,14,517.00** | **ಮೊತ್ತ(1)** | **1,77,36,294.00** | 60,04,594.00 | ಜಂಟಿ ಸಾಲಗಳ ಮೇಲಿನ ಬಡ್ಡಿ | 56,96,197.00 |
| | | | 1,68,187.00 | ದಿನವಹಿಮರುಪಾವತಿ ಸಾಲಗಳ ಮೇಲಿನ ಬಡ್ಡಿ | 1,71,508.00 |
| | **2) ಆಡಳಿತ ನಿರ್ವಹಣಾ ವೆಚ್ಚಗಳು:** | | 24,300.00 | ವಿದ್ಯಾಭ್ಯಾಸ ಸಾಲಗಳ ಮೇಲಿನ ಬಡ್ಡಿ | 14,968.00 |
| | **ಖಾಯಂ ಸಿಬ್ಬಂದಿ ಲೆಕ್ಕಗಳು:** | | 87,862.00 | ಸಿಬ್ಬಂದಿ ಜಂಟಿ ಸಾಲಗಳ ಮೇಲಿನ ಬಡ್ಡಿ | 65,149.00 |
| 28,98,473.00 | ಖಾಯಂ ಸಿಬ್ಬಂದಿ ವೇತನ | 30,04,660.00 | 1,28,962.00 | ಡಿಕ್ರಿ ಸಾಲಗಳ ಮೇಲಿನ ಬಡ್ಡಿ | 1,90,038.00 |
| 1,36,916.00 | ಭವಿಷ್ಯ ನಿಧಿ ವಂತಿಗೆ ಸಂಘದಿಂದ | 1,29,600.00 | 25,896.00 | ಸಿಬ್ಬಂದಿ ಸ್ಥಿರಾಸ್ತಿ ಸಾಲಗಳ ಮೇಲಿನ ಬಡ್ಡಿ | 20,869.00 |
| 11,805.00 | ಭವಿಷ್ಯ ನಿಧಿ ಸೇವಾ ಶುಲ್ಕ | 11,400.00 | 18,762.00 | ಸುಸ್ತಿ ಬಡ್ಡಿ | 12,116.00 |
| 3,49,494.00 | ಸಿಬ್ಬಂದಿ ಉಪದಾನ (24–25ನೇ ಸಾಲಿಗೆ ಕಾಯ್ದಿರಿಸಿದ್ದು) | 3,63,977.00 | **2,22,93,982.00** | **ಮೊತ್ತ(1)** | **2,39,97,691.00** |
| 97,140.00 | ಸಿಬ್ಬಂದಿ ಗಳಿಕೆ ರಜೆ (24–25ನೇ ಸಾಲಿಗೆ ಕಾಯ್ದಿರಿಸಿದ್ದು) | 1,33,092.00 | | | |
| | **ಗುತ್ತಿಗೆ ಆಧಾರ ಸಿಬ್ಬಂದಿ ಲೆಕ್ಕಗಳು:** | | | **2) ಧನವಿನಿಯೋಗಗಳ ಮೇಲಿನ ಬಡ್ಡಿ –ಆದಾಯ:** | |
| 6,20,551.00 | ಗುತ್ತಿಗೆ ಸಿಬ್ಬಂದಿ ವೇತನ | 7,00,555.00 | 60,37,119.25 | ಧನವಿನಿಯೋಗಗಳ ಮೇಲಿನ ಬಡ್ಡಿ | 37,78,550.00 |
| **41,14,379.00** | **ಮೊತ್ತ(2)** | **43,43,284.00** | | ಆಪದ್ಧನ ನಿಧಿ ಹೂಡಿಕೆಯ ಮೇಲಿನ ಬಡ್ಡಿ– | |
| | | | 11,48,222.00 | ಎಂಡಿಸಿಸಿ ಬ್ಯಾಂಕ್‌ನಿಂದ | 9,95,338.00 |
| | | | – | ಆಪದ್ಧನ ನಿಧಿ ಹೂಡಿಕೆಯ ಮೇಲಿನ ಬಡ್ಡಿ – | |
| | | | | ಯುಕೋ ಬ್ಯಾಂಕ್‌ನಿಂದ | 29,207.00 |

| | | | | | |
|---|---|---|---|---|---|
| | **3) ರಿಪೇರಿ ಮತ್ತು ನವೀಕರಣ ವೆಚ್ಚಗಳು:** | | 39,568.00 | ಯುಕೋ ಬ್ಯಾಂಕ್ ಸ್ವೀಪ್‌ಠೇವಣಿ ಮೇಲಿನ ಬಡ್ಡಿ | 1,30,272.00 |
| 11,490.00 | ನಾಮಫಲಕದ ವೆಚ್ಚ | – | 20,854.00 | ಬ್ಯಾಂಕ್ ಉಳಿತಾಯ ಖಾತೆ ಮೇಲಿನ ಬಡ್ಡಿ | 14,438.00 |
| 63,916.00 | ರಿಪೇರಿ ಮತ್ತು ನವೀಕರಣ | 23,949.00 | 158.00 | ಎಂ ಡಿ ಸಿ ಸಿ ಬ್ಯಾಂಕ್ ಷೇರು – ಲಾಭಾಂಶ | – |
| 38,550.00 | ಗಣಕಯಂತ್ರ ನಿರ್ವಹಣಾ ವೆಚ್ಚ | 23,201.00 | – | | |
| 24,500.00 | ಎಸ್.ಎಂ.ಎಸ್. ನಿರ್ವಹಣಾ ವೆಚ್ಚಗಳು | 47,000.00 | **72,45,921.25** | **ಮೊತ್ತ(2)** | **49,47,805.00** |
| 47,273.00 | ನಿರ್ವಹಣಾ ವೆಚ್ಚ (ಇತರೆ) | 33,792.00 | | | |
| **1,85,729.00** | **ಮೊತ್ತ(3)** | **1,27,942.00** | | **3) ಇತರೆ ಆದಾಯಗಳು:** | |
| | | | | ಆದಾಯ ತೆರಿಗೆ ಮೇಲಿನ ಬಡ್ಡಿ | 56,178.00 |
| | | | 6,400.00 | ಪ್ರವೇಶ ಧನ | 18,800.00 |
| | **4) ಕಮಿಷನ್ ಮತ್ತು ಸಾಲ ವಸೂಲಾತಿ ವೆಚ್ಚಗಳು:** | | 14,350.00 | ಷೇರು ಫೀ | 34,100.00 |
| 32,987.00 | ದಿನವಹಿ ಮರುಪಾವತಿ ಸಾಲಗಳ ಕಮೀಷನ್ | 34,342.00 | 5,34,786.00 | ಇನ್ಸಿಡೆಂಟಲ್ ಚಾರ್ಜಸ್ ವಸೂಲಾತಿ | 5,55,565.00 |
| 56,000.00 | ಪಿಗ್ಮಿ ಸಂಗ್ರಹಕಾರರಿಗೆ ಪ್ರೋತ್ಸಾಹ ಧನ | 60,300.00 | 15,125.00 | ಅಂಚೆ ವೆಚ್ಚ ವಸೂಲಾತಿ | 8,623.00 |
| 4,14,838.00 | ಪಿಗ್ಮಿ ಕಮಿಷನ್ | 4,09,820.00 | 66,127.00 | ಲಾಕರ್ ಬಾಡಿಗೆ ವಸೂಲಾತಿ | 80,000.00 |
| 46,893.00 | ಪ್ರೋತ್ಸಾಹಧನ (ಸಾಲ ವಸೂಲಾತಿ ಸಂಬಂಧ ಸಿಬ್ಬಂದಿಗೆ ಪಾವತಿ) | 38,121.00 | 3,06,092.00 | ಬಾಡಿಗೆ ಆದಾಯದ ಲೆಕ್ಕಗಳು | 4,83,264.00 |
| 1,301.00 | ಸಾಲ ವಸೂಲಾತಿ ವೆಚ್ಚ | 2,620.00 | 47,684.00 | ಮುದ್ರಣ ಮತ್ತು ಲೇಖನ ಸಾಮಗ್ರಿ ಸಂಬಂಧದ ವಸೂಲಾತಿ | 61,410.00 |
| **5,52,019.00** | **ಮೊತ್ತ(4)** | **5,45,203.00** | 4,152.00 | ಸಾಲ ವಸೂಲಾತಿ ಖರ್ಚು– ಸದಸ್ಯರಿಂದ ಜಮಾ | 1,915.00 |
| | | | 41,391.00 | ಪಿಗ್ಮಿ ಕಮೀಷನ್ – ಅವಧಿಪೂರ್ವ ಮುಕ್ತಾಯದ ಸಂಬಂದ | 33,542.00 |
| | **5) ಆದಾಯ ತೆರಿಗೆ ಲೆಕ್ಕಗಳು** | | 814.00 | ಬ್ಯಾಂಕ್ ಸೇವಾ ಶುಲ್ಕ ಜಮಾ | 972.60 |
| – | ಆದಾಯ ತೆರಿಗೆ ವೆಚ್ಚ | 6,34,873.00 | 2,000.00 | ಜಾಹಿರಾತು ವೆಚ್ಚ ಜಮಾ | 1,575.00 |
| 1,000.00 | ಆದಾಯ ತೆರಿಗೆ ಮೇಲ್ಮನವಿ ಶುಲ್ಕ | – | **10,38,921.00** | **ಮೊತ್ತ(3)** | **13,35,944.60** |
| 1,79,045.00 | ಆದಾಯ ತೆರಿಗೆ ಶುಲ್ಕ ಪಾವತಿ | – | | | |
| **1,80,045.00** | **ಮೊತ್ತ(5)** | **6,34,873.00** | | **4) ಇತರೇ ಜಮಾ:** | |
| | | | 37.50 | ಇತರೇ ಜಮಾ | – |
| | | | 2,992.00 | ಕಛೇರಿ ಉಪಕರಣದ ವಿಲೇವಾರಿಯಿಂದ (ಯುಪಿಎಸ್/ಜನರೇಟರ್‌ಬ್ಯಾಟರಿ ವಿಲೇವಾರಿಯಿಂದ) | – |

| 31/03/2024 ಕ್ಕೆ ಇದ್ದಂತೆ ಒಟ್ಟು (ರೂ) | ನಷ್ಟದ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು(ರೂ) | 31/03/2024 ಕ್ಕೆ ಇದ್ದಂತೆ ಒಟ್ಟು(ರೂ) | ಲಾಭದ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು(ರೂ) |
|---|---|---|---|---|---|
| | **6) ಇತರೆ ಆಡಳಿತ ನಿರ್ವಹಣಾ ವೆಚ್ಚಗಳು:** | | | | |
| 96,952.00 | ವಿದ್ಯುತ್ ವೆಚ್ಚ | 79,881.00 | – | ದಿನಪತ್ರಿಕೆ ಮಾರಟದಿಂದ | 990.00 |
| 2,800.00 | ವಿದ್ಯುತ್ ಉಪಕರಣ | – | – | ಸಾದಿಲ್ವಾರು ಜಮಾ | 450.00 |
| 19,714.00 | ನೀರಿನ ಕಂದಾಯ | 34,141.00 | **3,029.50** | **ಮೊತ್ತ(4)** | **1,440.00** |
| 5,000.00 | ಸಂಘದ ವೃತ್ತಿ ತೆರಿಗೆ | 5,000.00 | | | |
| 88,932.00 | ವಿಮೆ ವಂತಿಗೆ | 84,745.00 | | **5) ಸವಕಳಿಗಳು:** | |
| 1,750.00 | ಲಾಕರ್ ಬಾಡಿಗೆ | – | | ಯುಪಿಎಸ್/ಜನರೇಟರ್ | 31,244.00 |
| 51,253.00 | ದೂರವಾಣಿ ವೆಚ್ಚ | 39,769.00 | | ಗಣಕ ಯಂತ್ರ | 910.00 |
| 24,861.00 | ಅಂಚೆ ವೆಚ್ಚ | 19,184.00 | | **ಮೊತ್ತ(5)** | **32,154.00** |
| 1,53,529.00 | ಮುದ್ರಣ ಮತ್ತು ಲೇಖನ ಸಾಮಗ್ರಿ | 1,16,611.00 | | | |
| 4,73,575.00 | ಪಹರೆ ಮತ್ತು ರಕ್ಷಣೆ | 4,73,273.00 | | | |
| 7,926.00 | ದಿನಪತ್ರಿಕೆ ಚಂದಾ | 8,030.00 | | | |
| 21,000.00 | ಗೌರವ ಧನ ಪಾವತಿ (ಪದಾಧಿಕಾರಿಗಳಿಗೆ) | 21,000.00 | | | |
| 2,500.00 | ಗೌರವ ಧನ ಪಾವತಿ (ಇತರೆ) | 2,000.00 | | | |
| 68,386.00 | ವೃತ್ತಿ ಶುಲ್ಕ | 3,49,636.00 | | | |
| 1,02,922.00 | ಕಟ್ಟಡ ಕಂದಾಯ | 1,28,631.00 | | | |
| 76,000.00 | ಪ್ರಯಾಣ ಭತ್ಯೆ | 1,11,654.00 | | | |
| 1,07,200.00 | ಸಭಾ ಭತ್ಯೆ | 1,20,800.00 | | | |
| 1,20,000.00 | ಸಂಭಾವನೆ | 1,37,526.00 | | | |
| 6,14,458.60 | ಸಾದಿಲ್ವಾರು ವೆಚ್ಚಗಳು | 4,69,238.40 | | | |
| 8,260.00 | ಕಾನೂನು ವೆಚ್ಚ | 8,802.00 | | | |
| 409.00 | ಕಛೇರಿ ಉಪಕರಣದ ವಿಲೇವಾರಿಯಿಂದ | | | | |
| | (ಯುಪಿಎಸ್/ಜನರೇಟರ್ ಬ್ಯಾಟರಿ ವಿಲೇವಾರಿಯಿಂದ) | – | | | |
| 4,66,891.00 | ಸರ್ವಸದಸ್ಯರ ಸಭೆಯ ವೆಚ್ಚಗಳು | 5,52,575.00 | | | |
| 31,232.00 | ವಾರ್ಷಿಕೋತ್ಸವದ ವೆಚ್ಚಗಳು | 41,089.00 | | | |
| – | ಸದಸ್ಯರ ಮರಣೋತ್ತರ ನಿಧಿಗೆ – ಖರ್ಚು | 17,000.00 | | | |

| | | | | | |
|---|---|---|---|---|---|
| 1,440.00 | ಸಹಕಾರ ಸಪ್ತಾಹ ಹಾಗು ಗ್ರಾಹಕರ ಸಭೆಯ ವೆಚ್ಚ | 1,13,516.00 | | | |
| 1,905.00 | ಜಾಹಿರಾತು ವೆಚ್ಚ | 8,919.00 | | | |
| 2,500.00 | ಉಪನಿಯಮದ ತಿದ್ದುಪಡಿ ಶುಲ್ಕ ಪಾವತಿ | – | | | |
| 7,895.00 | ಇನ್ಸಿಡೆಂಟಲ್ ಚಾರ್ಜಸ್ ಪಾವತಿ | 12,888.00 | | | |
| 6,410.46 | ಬ್ಯಾಂಕ್ ಸೇವಾ ಶುಲ್ಕ | 15,683.20 | | | |
| 5,24,933.00 | ಚುನಾವಣಾ ವೆಚ್ಚ | – | | | |
| 1,35,000.00 | ಲೆಕ್ಕ ಪರಿಶೋಧನಾ ಶುಲ್ಕ 2024–25 ನೇ ಸಾಲಿಗೆ | 1,35,000.00 | | | |
| 48,000.00 | ಕ್ಯಾಲೆಂಡರ್ ಮುದ್ರಣ ವೆಚ್ಚ | 46,200.00 | | | |
| 1,52,119.00 | ಅನರ್ಹ ಜಿ ಎಸ್ ಟಿ ವೆಚ್ಚ | 1,62,947.00 | | | |
| 58,249.00 | ವೈಕುಂಠ ನಿಧಿ ಮೇಲಿನ ಬಡ್ಡಿ | 57,227.00 | | | |
| **34,84,002.06** | **ಮೊತ್ತ(6)** | **33,72,965.60** | | | |
| | **7) ಸವಕಳಿಗಳು:** | | | | |
| 2,60,752.00 | ಕಟ್ಟಡಗಳು | 2,53,315.00 | | | |
| 54,170.00 | ಪೀಠೋಪಕರಣಗಳು | 84,834.00 | | | |
| 38,579.00 | ಯುಪಿಎಸ್/ಜನರೇಟರ್ | – | | | |
| 78,615.00 | ಗಣಕ ಯಂತ್ರ | 7,061.00 | | | |
| **4,32,116.00** | **ಮೊತ್ತ(7)** | **3,45,210.00** | | | |
| **35,19,046.69** | **ನಿವ್ವಳ ಲಾಭ** | **32,09,263.00** | | | |
| **3,05,81,853.75** | **ಒಟ್ಟು** | **3,03,15,034.60** | **3,05,81,853.75** | **ಒಟ್ಟು** | **3,03,15,034.60** |

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಪರವಾಗಿ

ಸಹಿ/–
ಗೋಪಿನಾಥ್ ಎಂ.ಡಿ
**ಅಧ್ಯಕ್ಷರು**

ಸಹಿ/–
ಸೌಮ್ಯ ಎಂ ಎನ್
**ಉಪಾಧ್ಯಕ್ಷರು**

ಸಹಿ/–
ನಾಗರಾಜ ಕೆ
**ಖಜಾಂಚಿ**

ಸಹಿ/–
ಉಮಾ. ಎಸ್
**ಲೆಕ್ಕಿಗರು**

ಸಹಿ/–
ವೀಣಾ. ಎನ್
**ಪ್ರಭಾರ ಕಾರ್ಯದರ್ಶಿ**

ಸಮಾನ ದಿನಾಂಕದ ನನ್ನ ವರದಿಗೆ ಅನುಗುಣವಾಗಿ

ಸಹಿ/–
ಸಿ.ಎ. ಸತ್ಯನಾರಾಯಣ ಸಿ.ಎಸ್.
ಸನ್ನದು ಲೆಕ್ಕಿಗರು, ಸ. ಸಂಖ್ಯೆ : 218258
ಸಿ.ಎಸ್.ಎಸ್. ಅಂಡ್ ಕೋ. ಪರವಾಗಿ
ಎಫ್.ಆರ್.ಎನ್ : 011450S
ದಿನಾಂಕ : 30–07–2025
ಸ್ಥಳ : ಮೈಸೂರು
UDIN NO : 25218258BMJIEL9109

# ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

## ದಿನಾಂಕ 31/03/2025ರಲ್ಲಿ ಇದ್ದಂತೆ ಕ್ರೋಢೀಕೃತ ಆಸ್ತಿ – ಜವಾಬ್ದಾರಿ ತ:ಖ್ತೆ

| 31/03/2024 ಕ್ಕೆ ಇದ್ದಂತೆ ಒಟ್ಟು (ರೂ) | ಜವಾಬ್ದಾರಿ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು (ರೂ) | 31/03/2024 ಕ್ಕೆ ಇದ್ದಂತೆ ಒಟ್ಟು (ರೂ) | ಆಸ್ತಿಗಳ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು (ರೂ) |
|---|---|---|---|---|---|
| | **ಪಾವತಿಯಾದ ಪಾಲು ಬಂಡವಾಳ:** | | | **ನಗದು ಶಿಲ್ಕು:** | |
| 3,01,71,200.00 | ಸದಸ್ಯರಿಂದ | 3,10,28,000.00 | 20,10,691.00 | ಅಂತಿಮ ನಗದು ಶಿಲ್ಕು | 15,47,922.00 |
| 22,51,300.00 | ಸಹ ಸದಸ್ಯರಿಂದ | 22,60,500.00 | 20,10,691.00 | | 15,47,922.00 |
| 1,200.00 | ನಾಮ ಮಾತ್ರ ಸದಸ್ಯರಿಂದ | 200.00 | | **ಬ್ಯಾಂಕ್ ಶಿಲ್ಕುಗಳು:** | |
| 3,24,23,700.00 | | 3,32,88,700.00 | (15,33,873.62) | ಯೂಕೋ ಬ್ಯಾಂಕ್ ಚಾಲ್ತಿ ಖಾತೆ | 2,48,499.93 |
| | **ಆಪದ್ಧನ ನಿಧಿ:** | | 34,80,800.00 | ಯುಕೋ ಬ್ಯಾಂಕ್ ಚಾಲ್ತಿ ಖಾತೆ ಸ್ವೀಪ್ ಠೇವಣಿಗಳು | 40,89,954.00 |
| 1,99,06,360.33 | ಆಪದ್ಧನ ನಿಧಿ | 2,11,30,279.02 | 5,01,714.71 | ಬ್ಯಾಂಕ್ ಆಫ್ ಇಂಡಿಯಾ ಚಾಲ್ತಿ ಖಾತೆ | – |
| 1,99,06,360.33 | | 2,11,30,279.02 | 1,00,542.00 | ಬ್ಯಾಂಕ್ ಆಫ್ ಇಂಡಿಯಾ ಚಾಲ್ತಿಖಾತೆ ಸ್ವೀಪ್‌ಠೇವಣಿಗಳು | – |
| | **ಇತರೆ ನಿಧಿಗಳು:** | | 9,97,050.00 | ಕೆನರಾ ಬ್ಯಾಂಕ್ ಚಾಲ್ತಿ ಖಾತೆ | – |
| 40,20,947.75 | ಕರಡು ಸಂಶಯಾಸ್ಪದ ಸಾಲದ ನಿಧಿ | 41,02,100.75 | 12,21,413.49 | ಮೈ.ಚಾ.ಜಿ.ಸ.ಕೇ. ಬ್ಯಾಂಕ್ ಚಾಲ್ತಿ ಖಾತೆ (ಎಂ ಸಿ ಡಿ ಸಿ ಸಿ ಬ್ಯಾಂಕ್) | 12,16,567.49 |
| 41,000.00 | ಸದಸ್ಯರ ಮರಣೋತ್ತರ ನಿಧಿ | – | 5,30,310.26 | ಎಸ್ ಬಿ ಐ, ವಿಜಯನಗರ ಉಳಿತಾಯ ಖಾತೆ | 4,52,523.76 |
| 1,14,166.00 | ವಿದ್ಯಾ ನಿಧಿ | 87,326.00 | 52,97,956.84 | | 60,07,545.18 |
| 31,45,230.00 | ಕಟ್ಟಡ ನಿಧಿ | 31,45,230.00 | | **ಹೂಡಿಕೆಗಳು ಹಾಗು ಧನ ವಿನಿಯೋಗಗಳು:** | |
| 3,09,862.42 | ಸಿಬ್ಬಂದಿ ಕ್ಷೇಮ ನಿಧಿ | 3,09,862.42 | | ಇತರೆ ನಿಧಿಗಳ ಹೂಡಿಕೆಗಳು ಮತ್ತು | |
| | | | 9,14,54,873.57 | ಸಾಮಾನ್ಯ ಧನವಿನಿಯೋಗಗಳು | 5,87,44,310.57 |
| 1,49,722.00 | ಧರ್ಮದ ನಿಧಿ | 1,25,722.00 | 1,99,06,755.41 | ಆಪದ್ಧನ ನಿಧಿ ಹೂಡಿಕೆ ಎಂ ಡಿ ಸಿ ಸಿ ಬ್ಯಾಂಕ್ | 1,99,06,755.41 |
| 16,29,742.56 | ಲಾಭಾಂಶ ಸರಿದೂಗಿಸುವ ನಿಧಿ | 5,46,429.56 | – | ಆಪದ್ಧನ ನಿಧಿ ಹೂಡಿಕೆ ಯುಕೋ ಬ್ಯಾಂಕ್ | 12,59,207.00 |
| 50,000.00 | ಸುವರ್ಣ ಮಹೋತ್ಸವ ನಿಧಿ | 50,000.00 | 10,000.00 | ಮೈ.ಚಾ.ಜಿ.ಸ.ಕೇ. ಬ್ಯಾಂಕ್ ಷೇರು ಹಣ (ಎಂ ಸಿ ಡಿ ಸಿ ಸಿ ಬ್ಯಾಂಕ್) | 10,000.00 |
| 90,974.00 | ಸಿಬ್ಬಂದಿ ವಿದ್ಯಾ ನಿಧಿ | 90,974.00 | 11,13,71,628.98 | | 7,99,20,272.98 |
| 14,882.02 | ಜಾಹೀರಾತು ನಿಧಿ | 9,782.02 | | | |

| | | | | | |
|---|---|---|---|---|---|
| | | | | **ಸ್ಥಿರಾಸ್ತಿಗಳು:** | |
| 6,49,899.10 | ಅಗಸ್ತ್ಯ ಮೂಲ ಸೌಕರ್ಯಾಭಿವೃದ್ಧಿ ಖಾತೆ | 7,06,299.10 | | ವಿಜಯನಗರ ಶಾಖಾ ಕಛೇರಿ – ನಿವೇಶನ | |
| | | | 33,55,407.00 | ಮತ್ತು ಕಟ್ಟಡ ಬೆಲೆ | 33,55,407.00 |
| 3,82,804.00 | ಮರಣ ಪರಿಹಾರ ನಿಧಿ (ವೈಕುಂಠ ನಿಧಿ) | 3,80,804.00 | | ಕೃಷ್ಣಮೂರ್ತಿಪುರಂ ಕಛೇರಿ – ನಿವೇಶನ | |
| | | | 76,17,306.00 | ಮತ್ತು ಕಟ್ಟಡ ಬೆಲೆ | 76,17,306.00 |
| 1,57,940.00 | ಶತಮಾನೋತ್ಸವ ನಿಧಿ | 1,57,940.00 | 1,09,72,713.00 | | 1,09,72,713.00 |
| 6,649.00 | ಹಿರಿಯ ಸದಸ್ಯರ ಸನ್ಮಾನ ನಿಧಿ | – | | **ಚರಾಸ್ತಿಗಳು:** | |
| 28,79,972.00 | ಸಿಬ್ಬಂದಿ ಉಪದಾನ ನಿಧಿ | 32,43,949.00 | 8,000.00 | ಬೀರುಗಳು | 8,000.00 |
| 1,36,43,790.85 | | 1,29,56,418.85 | 1,59,228.00 | ಸಿಸಿಟಿವಿ ಕ್ಯಾಮರಾಗಳು | 1,59,228.00 |
| | **ಸವಕಳಿ ನಿಧಿ:** | | 4,97,548.00 | ಗಣಕಯಂತ್ರ ಪರಿಕರಗಳು | 4,97,548.00 |
| 39,51,101.00 | ಕಟ್ಟಡಗಳು | 42,04,417.00 | 14,03,056.00 | ಗಣಕಯಂತ್ರಗಳು | 14,24,242.00 |
| 19,01,514.00 | ಗಣಕಯಂತ್ರಗಳು | 19,07,665.00 | 19,650.00 | ವಿದ್ಯುತ್ ಉಪಕರಣಗಳು | 19,650.00 |
| 10,60,926.00 | ಪೀಠೋಪಕರಣಗಳು | 11,45,759.00 | 14,255.00 | ಬೆಂಕಿ ಆರಿಸುವ ಯಂತ್ರಗಳು | 14,255.00 |
| 6,64,864.00 | ಯು.ಪಿ.ಎಸ್/ಜನರೇಟರ್ | 6,33,620.00 | 11,13,994.75 | ಪೀಠೋಪಕರಣಗಳು | 11,41,112.75 |
| 75,78,405.00 | | 78,91,461.00 | 2,03,572.40 | ಕಛೇರಿ ಯಂತ್ರೋಪಕರಣಗಳು | 2,03,572.40 |
| | **ಸದಸ್ಯರ ಠೇವಣಿಗಳು:** | | 2,83,000.00 | ಭದ್ರತಾ ಕಪಾಟುಗಳು | 2,83,000.00 |
| 2,81,73,000.00 | ಅಗಸ್ತ್ಯ ರಜತ ಸಿರಿ ಆರ್ ಡಿ ಠೇವಣಿಗಳು | – | 14,000.00 | ಟೆಲಿವಿಷನ್ (ಸಿಸಿ ಟಿವಿಗಾಗಿ) | 14,000.00 |
| 58,400.00 | ನಗದು ಪತ್ರ | 58,400.00 | 2,87,681.00 | ಜನರೇಟರ್ | 2,87,681.00 |
| 16,01,83,000.00 | ನಿಶ್ಚಿತ ಠೇವಣಿಗಳು | 20,25,58,900.00 | 3,45,939.00 | ಯು.ಪಿ.ಎಸ್. ಮತ್ತು ಬ್ಯಾಟರಿಗಳು | 3,45,939.00 |
| 71,16,480.00 | ಪಿಗ್ಮಿ ಠೇವಣಿಗಳು | 62,80,708.00 | 80,000.00 | ಜೆರಾಕ್ಸ್ ಯಂತ್ರ | 80,000.00 |
| 1,34,49,450.00 | ಸಂಚಿತ ಠೇವಣಿಗಳು | 1,65,53,850.00 | 44,29,924.15 | | 44,78,228.15 |
| 3,11,000.00 | ಭದ್ರತಾ ಕಪಾಟಿನ ಠೇವಣಿಗಳು | 3,26,000.00 | | **ಸದಸ್ಯರ ಸಾಲಗಳು:** | |
| 4,31,29,501.87 | ಉಳಿತಾಯ ಖಾತೆಗಳು | 3,95,11,809.32 | 14,421.00 | ಅಗಸ್ತ್ಯ ಆಪತ್ಬಂಧು ಸಾಲಗಳು | – |
| | ಸಿಬ್ಬಂದಿ, ಆಭರಣ ಪರೀಕ್ಷಕರ ಮತ್ತು ಪಿಗ್ಮಿ | | | | |
| 1,95,000.00 | ಸಂಗ್ರಹಕಾರರ ಭದ್ರತಾ ಠೇವಣಿಗಳು | 2,00,000.00 | – | ಅಲ್ಪಾವಧಿ ಜಂಟಿ ಸಾಲಗಳು | 25,68,445.00 |
| 25,26,15,831.87 | | 26,54,89,667.32 | 5,98,16,695.00 | ಸ್ಥಿರಾಸ್ತಿ ಸಾಲಗಳು | 7,29,82,753.00 |

| 31/03/2024 ಕ್ಕೆ ಇದ್ದಂತೆ ಒಟ್ಟು (ರೂ) | ಜವಾಬ್ದಾರಿ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು (ರೂ) | 31/03/2024 ಕ್ಕೆ ಇದ್ದಂತೆ ಒಟ್ಟು (ರೂ) | ಆಸ್ತಿಗಳ ವಿವರಗಳು | 31/03/2025 ಕ್ಕೆ ಇದ್ದಂತೆ ಒಟ್ಟು (ರೂ) |
|---|---|---|---|---|---|
| | **ಇತರೆ ಜವಾಬ್ದಾರಿಗಳು:** | | 8,83,02,417.00 | ಚಿನ್ನಾಭರಣ ಸಾಲಗಳು | 11,31,39,699.00 |
| 25,00,406.00 | ಸದಸ್ಯರಿಗೆ ಪಾವತಿಸಬೇಕಾದ ಲಾಭಾಂಶ | 27,70,178.00 | 9,76,320.00 | ಬೆಳ್ಳಿ ಸಾಲಗಳು | 8,19,340.00 |
| 490.00 | ಜಿಎಸ್‌ಟಿ (ಜಮಾ) | – | 62,18,687.00 | ಠೇವಣಿ ಆಧಾರ ಸಾಲಗಳು | 75,22,182.00 |
| – | ಜಿಎಸ್‌ಟಿ (ಪಾವತಿ) | (530.00) | 15,59,286.00 | ವಾಹನ ಸಾಲಗಳು | 32,00,209.00 |
| 1,200.00 | ಸಿಬ್ಬಂದಿ ವೃತ್ತಿ ತೆರಿಗೆ | 1,200.00 | 4,06,02,848.00 | ಜಂಟಿ ಸಾಲಗಳು | 3,59,71,152.00 |
| 22,550.00 | ಸಿಬ್ಬಂದಿ ಭವಿಷ್ಯ ನಿಧಿ ವಂತಿಗೆ | 22,550.00 | 7,13,758.00 | ದಿನವಹಿ ಮರುಪಾವತಿ ಸಾಲಗಳು | 8,19,999.00 |
| 15,000.00 | ಸಿಬ್ಬಂದಿ ಎಕ್ಸ್‌ಗ್ರೇಷಿಯಾ | – | 5,28,673.00 | ವಿದ್ಯಾಭ್ಯಾಸ ಸಾಲಗಳು | 4,10,764.00 |
| 2,50,000.00 | ಮಳಿಗೆ ಬಾಡಿಗೆ ಮುಂಗಡ | 2,50,000.00 | 49,33,123.00 | ಡಿಕ್ರಿ ಸಾಲಗಳು | 57,01,234.00 |
| 1,45,500.00 | ಷೇರು ಬಾಕಿದಾರರು | 1,44,300.00 | 20,36,66,228.00 | | 24,31,35,777.00 |
| – | ವಿಮೆ ವಂತಿಗೆ (ಸಿಬ್ಬಂದಿಯವರಿಂದ)ಪಾವತಿಸಲುಬಾಕಿ | 1,625.00 | | **ಸಿಬ್ಬಂದಿ ಸಾಲಗಳು:** | |
| – | ಯಶಸ್ವಿನಿ ನೊಂದಣಿ ಶುಲ್ಕ ಪಾವತಿಸಲು ಬಾಕಿ | 3,900.00 | 4,92,541.00 | ಸಿಬ್ಬಂದಿ ಜಂಟಿ ಸಾಲಗಳು | 3,66,566.00 |
| 29,35,146.00 | | 31,93,223.00 | 1,92,871.00 | ಸಿಬ್ಬಂದಿ ಸ್ಥಿರಾಸ್ತಿ ಸಾಲಗಳು | 1,52,978.00 |
| | **ಕಾಯ್ದಿರಿಸಿದ ಲೆಕ್ಕಗಳು:** | | 6,85,412.00 | | 5,19,544.00 |
| 1,21,500.00 | ಲೆಕ್ಕ ಪರಿಶೋಧನಾ ಶುಲ್ಕ (ಕಾಯ್ದಿರಿಸಿದ್ದು) | 1,21,500.00 | | **ಇತರೆ ಆಸ್ತಿಗಳು:** | |
| 75,09,654.00 | ಅಗಸ್ತ್ಯ ರಜತ ಸಿರಿ ಆರ್ ಡಿ ಠೇವಣಿ ಮೇಲಿನ ಬಡ್ಡಿ | – | 85,212.00 | ದಾವಾ ಫೀ | 1,23,900.00 |
| 15,994.00 | ನಗದು ಪತ್ರದ ಮೇಲಿನ ಬಡ್ಡಿ | 15,994.00 | 19,67,835.89 | ಧನವಿನಿಯೋಗಗಳ ಮೇಲಿನ ಬರಬೇಕಾದ ಬಡ್ಡಿ | 6,66,611.00 |
| 22,01,570.00 | ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 33,48,200.00 | 32,622.00 | ಪುಸ್ತಕ ಮತ್ತು ಫಾರಂಗಳ ದಾಸ್ತಾನು | 33,928.00 |
| 8,44,125.00 | ಸಂಚಿತ ಠೇವಣಿ ಮೇಲಿನ ಬಡ್ಡಿ | 10,63,051.00 | 3,13,376.00 | ಆದಾಯ ತೆರಿಗೆ ಮೇಲ್ಮನವಿ ಠೇವಣಿ ಪಾವತಿ | 3,13,376.00 |
| – | ಪಿಗ್ಮಿ ಠೇವಣಿ ಮೇಲಿನ ಬಡ್ಡಿ | 55,460.00 | 4,383.00 | ದೂರವಾಣಿ ಠೇವಣಿ | 3,661.00 |
| 12,110.00 | ಭದ್ರತಾಕಪಾಟು ಠೇವಣಿ ಮೇಲೆ ಕೊಡಬೇಕಾದ ಬಡ್ಡಿ | 12,176.00 | 47,741.00 | ಕಾನೂನು ಶುಲ್ಕ ವಸೂಲಾತಿಗೆ ಬಾಕಿ | 1,15,941.00 |
| 2,62,058.00 | ವೈಕುಂಠ ನಿಧಿ ಮೇಲಿನ ಬಡ್ಡಿ | 2,69,785.00 | 45,94,313.50 | ಟಿ.ಡಿ.ಎಸ್. ಬರಬೇಕಾದದ್ದು | 62,81,254.50 |
| 16,11,000.00 | ಸಿಬ್ಬಂದಿ ಗಳಿಕೆ ರಜಾ ಪಾವತಿಸಬೇಕಾದದ್ದು | 17,44,092.00 | 70,45,483.39 | | 75,38,671.50 |
| 1,25,78,011.00 | | 66,30,258.00 | | | |

| | | | | | |
|---|---|---|---|---|---|
| | **ಅಮಾನತ್ತು ಲೆಕ್ಕಗಳು :** | | | | |
| 2,79,745.62 | ಸಾಮಾನ್ಯ ಅಮಾನತ್ತು ಖಾತೆ | 3,31,403.62 | | | |
| 2,79,745.62 | | 3,31,403.62 | | | |
| 35,19,046.69 | **ನಿಶವ್ವಳ ಲಾಭ** | 32,09,263.00 | | | |
| **34,54,80,037.36** | **ಒಟ್ಟು ಮೊತ್ತ** | **35,41,20,673.81** | **34,54,80,037.36** | **ಒಟ್ಟು ಮೊತ್ತ** | **35,41,20,673.81** |

ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಪರವಾಗಿ

ಸಹಿ/–
ಗೋಪಿನಾಥ್ ಎಂ.ಡಿ
**ಅಧ್ಯಕ್ಷರು**

ಸಹಿ/–
ಸೌಮ್ಯ ಎಂ ಎನ್
**ಉಪಾಧ್ಯಕ್ಷರು**

ಸಹಿ/–
ನಾಗರಾಜ ಕೆ
**ಖಜಾಂಚಿ**

ಸಹಿ/–
ಉಮಾ. ಎಸ್
**ಲೆಕ್ಕಿಗರು**

ಸಹಿ/–
ವೀಣಾ. ಎನ್
**ಪ್ರಭಾರ ಕಾರ್ಯದರ್ಶಿ**

**ದೃಢೀಕರಣ**

ನಾನು ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೈಸೂರು, ಇದರ 2024–2025 ನೇ ಸಾಲಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸಿರುತ್ತೇನೆ. ನನ್ನ ಅತ್ಯುತ್ತಮ ಜ್ಞಾನ ಮತ್ತು ನಂಬಿಕೆಯಂತೆ ಲೆಕ್ಕ ಪರಿಶೋಧನೆಗೆ ಅವಶ್ಯಕವಾದ ಎಲ್ಲಾ ಮಾಹಿತಿ ಹಾಗೂ ವಿವರಣೆಯನ್ನು ಪಡೆದಿರುತ್ತೇನೆ. ನನ್ನ ಅಭಿಪ್ರಾಯದಂತೆ ನನಗೆ ದೊರಕಿರುವ ಅತ್ಯುತ್ತಮ ಮಾಹಿತಿ, ವಿವರಣೆ ಹಾಗೂ ಲಗತ್ತಿಸಿರುವ ನನ್ನ ವಿವರವಾದ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವುದಕ್ಕೆ ಒಳಪಟ್ಟು, ವರದಿಯಲ್ಲಿ ಚರ್ಚಿಸಿರುವ ಸಹಕಾರ ಸಂಘದ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆಯು ದಿನಾಂಕ 31/03/2025 ಕ್ಕೆ ಇದ್ದಂತೆ ಸಹಕಾರ ಸಂಘದ ವ್ಯವಹಾರದ ನೈಜ ಹಾಗೂ ಸಮಂಜಸ ಆರ್ಥಿಕ ಸ್ಥಿತಿಯನ್ನು ತಿಳಿಯಪಡಿಸುತ್ತದೆ.

ಸಮಾನ ದಿನಾಂಕದ ನನ್ನ ವರದಿಗೆ ಅನುಗುಣವಾಗಿ

ದಿನಾಂಕ : 30–07–2025
ಸ್ಥಳ : ಮೈಸೂರು
UDIN NO : 25218258BMJIEL9109

ಸಹಿ/–
ಸಿ.ಎ. ಸತ್ಯನಾರಾಯಣ ಸಿ.ಎಸ್.
ಸನ್ನದು ಲೆಕ್ಕಿಗರು, ಸ. ಸಂಖ್ಯೆ : 218258
ಸಿ.ಎಸ್.ಎಸ್. ಅಂಡ್ ಕೋ. ಪರವಾಗಿ
ಎಫ್.ಆರ್.ಎನ್ : 011450S

# ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

## ವಿವಿಧ ಸಾಲಗಳು ಮತ್ತು ಠೇವಣಿಗಳು – 2 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ

| ಕ್ರಮ ಸಂಖ್ಯೆ | ವಿವರಗಳು | 2023–24 | | | 2024–25 | | |
|---|---|---|---|---|---|---|---|
| | | ಕೊಟ್ಟಿದ್ದು/ ವರ್ಗಾಯಿಸಿದ್ದು | ವಸೂಲಾದದ್ದು | ವರ್ಷದ ಕೊನೆಯಲ್ಲಿ ಬಾಕಿ | ಕೊಟ್ಟಿದ್ದು/ ವರ್ಗಾಯಿಸಿದ್ದು | ವಸೂಲಾದದ್ದು | ವರ್ಷದ ಕೊನೆಯಲ್ಲಿ ಬಾಕಿ |
| 1 | ಸ್ಥಿರಾಧಾರ ಸಾಲ | 2,08,00,000 | 2,19,52,291 | 5,98,16,695 | 3,00,00,000 | 1,68,33,942 | 7,29,82,753 |
| 2 | ಚಿನ್ನಾಭರಣ ಸಾಲ | 11,37,00,330 | 9,77,02,732 | 8,83,02,417 | 15,51,12,750 | 13,02,75,468 | 11,31,39,699 |
| 3 | ಬೆಳ್ಳಿ ಸಾಲ | 10,33,050 | 8,80,496 | 9,76,320 | 12,74,023 | 14,31,003 | 8,19,340 |
| 4 | ಠೇವಣಿ ಆಧಾರ ಸಾಲ | 1,42,78,407 | 1,53,13,342 | 62,18,687 | 1,42,04,360 | 1,29,00,865 | 75,22,182 |
| 5 | ವಾಹನ ಸಾಲ | 12,03,196 | 1,99,987 | 15,59,286 | 20,48,824 | 4,07,901 | 32,00,209 |
| 6 | ಜಂಟಿ ಸಾಲ | 2,41,01,000 | 2,59,86,389 | 4,06,02,848 | 2,03,95,000 | 2,50,26,696 | 3,59,71,152 |
| 7 | ಅಲ್ಪಾವಧಿ ಜಂಟಿ ಸಾಲ | – | – | – | 29,58,000 | 3,89,555 | 25,68,445 |
| 8 | ದಿನವಹಿ ಮರುಪಾವತಿ ಸಾಲ | 27,35,000 | 25,42,461 | 7,13,758 | 21,35,000 | 20,28,759 | 8,19,999 |
| 9 | ವಿದ್ಯಾಭ್ಯಾಸ ಸಾಲ | – | 64,946 | 5,28,673 | – | 1,17,909 | 4,10,764 |
| 10 | ಡಿಕ್ರಿ ಸಾಲ | – | 3,04,953 | 49,33,123 | 8,71,399 | 1,03,288 | 57,01,234 |
| 11 | ಅಗಸ್ತ್ಯ ಆಪತ್ಬಂಧು ಸಾಲ | – | 15,593 | 14,421 | – | 14,421 | – |
| 12 | ಸಿಬ್ಬಂದಿ ಸಾಲ(ಜಂಟಿ ಸಾಲ, ವಾಹನ ಸಾಲ, ಸ್ಥಿರಾಧಾರ ಸಾಲ) | 2,00,000 | 3,43,317 | 6,85,412 | – | 1,65,868 | 5,19,544 |
| | **ಒಟ್ಟು** | **17,80,50,983** | **16,53,06,507** | **20,43,51,640** | **22,89,99,356** | **18,96,95,675** | **24,36,55,321** |

| ಕ್ರಮ ಸಂಖ್ಯೆ | ಖಾತೆ | 2023–24ರ ಕೊನೆಯಲ್ಲಿ | 2024–25ರ ಕೊನೆಯಲ್ಲಿ |
|---|---|---|---|
| 1 | ಅಗಸ್ತ್ಯ ರಜತ ಸಿರಿ ಆರ್ ಡಿ ಠೇವಣಿ | 2,81,73,000 | – |
| 2 | ನಗದು ಪತ್ರ | 58,400 | 58,400 |
| 3 | ನಿಶ್ಚಿತ ಠೇವಣಿ | 16,01,83,000 | 20,25,58,900 |
| 4 | ಪಿಗ್ಮಿ ಠೇವಣಿ | 71,16,480 | 62,80,708 |
| 5 | ಸಂಚಿತ ಠೇವಣಿ | 1,34,49,450 | 1,65,53,850 |
| 6 | ಭದ್ರತಾ ಕಪಾಟಿನ ಠೇವಣಿ | 3,11,000 | 3,26,000 |
| 7 | ಉಳಿತಾಯ ಖಾತೆ | 4,31,29,501 | 3,95,11,809 |
| 8 | ಸಿಬ್ಬಂದಿ ಮತ್ತು ಪಿಗ್ಮಿ ಸಂಗ್ರಹಕಾರರ ಭದ್ರತಾ ಠೇವಣಿ | 1,95,000 | 2,00,000 |
| | **ಒಟ್ಟು** | **25,26,15,831** | **26,54,89,667** |

## ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., (ರಿ)

### ವರದಿ ಸಾಲಿನಲ್ಲಿ ಸುಸ್ತಿ ಸಾಲಗಳ ವರ್ಷಾವಾರು ವಿವರ 31/03/2025 ಕ್ಕೆ ಇದ್ದಂತೆ

| | | ಜಂಟಿ ಸಾಲ | | | | ಸ್ಥಿರಾಸ್ತಿ ಸಾಲ | | | | ವಾಹನ ಸಾಲ | | | |
|---|---|---|---|---|---|---|---|---|---|---|---|---|---|
| | | ಪ್ರಧಾನ ಕಛೇರಿ | | ಶಾಖಾ ಕಛೇರಿ | | ಪ್ರಧಾನ ಕಛೇರಿ | | ಶಾಖಾ ಕಛೇರಿ | | ಪ್ರಧಾನ ಕಛೇರಿ | | ಶಾಖಾ ಕಛೇರಿ | |
| ಕ್ರ ಸಂ | ವರ್ಷಾವಾರು ವಿವರ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ |
| 1 | 6 ವರ್ಷ ಮೇಲ್ಪಟ್ಟು | 19 | 5,44,812 | 29 | 3,29,889 | 1 | 1,19,437 | 1 | 1,04,572 | 4 | 2,42,595 | 2 | 23,987 |
| 2 | 4 ವರ್ಷದಿಂದ 6 ವರ್ಷದವರೆಗೆ | 29 | 10,03,229 | 12 | 3,50,892 | 3 | 20,82,709 | - | - | - | - | - | - |
| 3 | 3 ವರ್ಷದಿಂದ 4 ವರ್ಷದವರೆಗೆ | 25 | 6,73,158 | 8 | 2,26,136 | 5 | 3,51,512 | - | - | - | - | - | - |
| 4 | 1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ | 77 | 8,04,474 | 31 | 4,12,202 | | - | - | - | - | - | - | - |
| 5 | 1 ವರ್ಷದ ಒಳಗೆ | 2 | 7,362 | - | - | - | - | - | - | - | - | - | - |
| | | | | | | | | | | | | | |
| **ಒಟ್ಟು ಮೊತ್ತ** | | **152** | **30,33,035** | **80** | **13,19,119** | **9** | **25,53,658** | **1** | **1,04,572** | **4** | **2,42,595** | **2** | **23,987** |

| | | ವಿದ್ಯಾಭ್ಯಾಸ ಸಾಲ | | | | ದಿನವಹಿ ಮರುಪಾವತಿ ಸಾಲ | | | | ಒಟ್ಟು ಸುಸ್ತಿ ಸಾಲದ ಮೊತ್ತ | |
|---|---|---|---|---|---|---|---|---|---|---|---|
| | | ಪ್ರಧಾನ ಕಛೇರಿ | | ಶಾಖಾ ಕಛೇರಿ | | ಪ್ರಧಾನ ಕಛೇರಿ | | ಶಾಖಾ ಕಛೇರಿ | | | |
| ಕ್ರ ಸಂ | ವರ್ಷಾವಾರು ವಿವರ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ | ಖಾತೆಗಳು | ಮೊತ್ತ |
| 1 | 6 ವರ್ಷ ಮೇಲ್ಪಟ್ಟು | 3 | 1,69,078 | 4 | 2,41,686 | 11 | 1,68,046 | 6 | 56,180 | 80 | 20,00,282 |
| 2 | 4 ವರ್ಷದಿಂದ 6 ವರ್ಷದವರೆಗೆ | - | - | - | - | 2 | 47,284 | - | - | 46 | 34,84,114 |
| 3 | 3 ವರ್ಷದಿಂದ 4 ವರ್ಷದವರೆಗೆ | - | - | - | - | 1 | 14,000 | - | - | 39 | 12,64,806 |
| 4 | 1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ | - | - | - | - | 1 | 41,532 | - | - | 109 | 12,58,208 |
| 5 | 1 ವರ್ಷದ ಒಳಗೆ | - | - | - | - | 2 | 67,700 | - | - | 4 | 75,062 |
| | | | | | | | | | | | |
| **ಒಟ್ಟು ಮೊತ್ತ** | | **3** | **1,69,078** | **4** | **2,41,686** | **17** | **3,38,562** | **6** | **56,180** | **278** | **80,82,472** |

| | | ಡಿಕ್ರಿ ಸಾಲ | | | | ಒಟ್ಟು ಸಾಲದ ಮೊತ್ತ | |
|---|---|---|---|---|---|---|---|
| | | **ಪ್ರಧಾನ ಕಛೇರಿ** | | **ಶಾಖಾ ಕಛೇರಿ** | | | |
| 1 | ಡಿಕ್ರಿ ಸಾಲ | 114 | 40,16,889 | 61 | 16,84,345 | 175 | 57,01,234 |
| | | | | | | | |
| | **ಒಟ್ಟು ಮೊತ್ತ** | **114** | **40,16,889** | **61** | **16,84,345** | **175** | **57,01,234** |

| ಸಾರಾಂಶ | | | |
|---|---|---|---|
| 1 | ಜಂಟಿ ಸಾಲ | 232 | 43,52,154 |
| 2 | ಸ್ಥಿರಾಸ್ತಿ ಸಾಲ | 10 | 26,58,230 |
| 3 | ವಾಹನ ಸಾಲ | 6 | 2,66,582 |
| 4 | ವಿದ್ಯಾಭ್ಯಾಸ ಸಾಲ | 7 | 4,10,764 |
| 5 | ದಿನವಹಿ ಮರುಪಾವತಿ ಸಾಲ | 23 | 3,94,742 |
| 6 | ಡಿಕ್ರಿ ಸಾಲ | 175 | 57,01,234 |
| | | | |
| | **ಒಟ್ಟು ಮೊತ್ತ** | **453** | **1,37,83,706** |

## ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು
## 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ

| ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ರೀತ್ಯ ಅನುಸೂಚಿಗಳು | ಅನುಸೂಚಿಗೆ ಸನ್ನದು ಲೆಕ್ಕಿಗರು ಸೂಚಿಸಿರುವ ಮಾಹಿತಿ | ಸನ್ನದು ಲೆಕ್ಕಿಗರ ವರದಿಗೆ ಸಂಘದ ಅನುಪಾಲನಾ ವರದಿ |
|---|---|---|
| 13(ಬಿ) (1) ನಿಯತ ಸದಸ್ಯರು ಸಂಘದ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಬಗ್ಗೆ ಟಿಪ್ಪಣಿ | ನಿಯತ ಸದಸ್ಯರು ಸಂಘದಲ್ಲಿ ವಿವಿಧ ಠೇವಣಿ ಹೂಡಿಕೆಗಳನ್ನು ಮಾಡುವುದು ಮತ್ತು ವಿವಿಧ ರೀತಿಯ ಸಾಲಗಳನ್ನು ಪಡೆಯುವುದರ ಮೂಲಕ ಸಂಘದ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಸಂಘದ ಸದಸ್ಯತ್ವ ಪಡೆದು, ವರದಿ ಸಾಲಿನಲ್ಲಿ ಯಾವುದೇ ವ್ಯವಹಾರ ಕೈಗೊಳ್ಳದ ಸದಸ್ಯರನ್ನು ಗುರುತಿಸಿ, ಮುಂದಿನ ದಿನಗಳಲ್ಲಿ ಸಂಘದ ವ್ಯವಹಾರಗಳಲ್ಲಿ ಅವರು ಭಾಗಿಯಾಗುವಂತೆ ಮನವೊಲಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸಂಘವು ತನ್ನ ಸದಸ್ಯರಿಗೆ ವಾರ್ಷಿಕ ಮಹಾ ಸಭೆಯ ವರದಿ ಪುಸ್ತಕದಲ್ಲಿ ಸದಸ್ಯರ ಹಕ್ಕು ಮತ್ತು ಹೊಣೆಗಾರಿಕೆಗೆ ಅವರು ಸಂಘದಲ್ಲಿ ಕನಿಷ್ಠ ವ್ಯವಹಾರವನ್ನು ಮಾಡಿ ಕಾಯ್ದಿರಿಸಿಕೊಳ್ಳಲು ಅವಶ್ಯ ಮಾಹಿತಿಯನ್ನು ನೀಡಲಾಗುತ್ತಿದೆ. ಸದಸ್ಯರು ಲಾಭಾಂಶ ಪಡೆಯಲು ಬಂದಾಗ ಸದಸ್ಯರಿಗೆ ತಿಳುವಳಿಕೆ ನೀಡಲಾಗಿರುತ್ತದೆ. ಲೆಕ್ಕಪರಿಶೋಧಕರ ಸಲಹೆಯಂತೆ ಮುಂದೆಯೂ ಕ್ರಮವಿಡಲಾಗುವುದು. |
| 14(ಬಿ) **ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಶೆ** | ಸಂಘದ ಉಪನಿಯಮ 12ರ ಅನ್ವಯ ಅಧಿಕೃತ ಷೇರು ಬಂಡವಾಳದ ಮಿತಿಯನ್ನು 20–08–2017ರಂದು ನಡೆದ 2016–17ರ ವಾರ್ಷಿಕ ಮಹಾಸಭೆಯಲ್ಲಿ ರೂ. 5 ಕೋಟಿ ಎಂದು ನಿಗದಿಪಡಿಸಲಾಗಿದೆ. ಉಪನಿಯಮ 10ರಲ್ಲಿ ತಿಳಿಸಿರುವಂತೆ ಸಂಘದ ಪ್ರತಿ ಷೇರಿನ ಮುಖ ಬೆಲೆಯು ರೂ.1000 ಇದ್ದು, ನಾಮಮಾತ್ರ ಸದಸ್ಯರ ಷೇರು ಮುಖಬೆಲೆ ರೂ.200 ಆಗಿರುತ್ತದೆ. ಸಂಘವು ಸದಸ್ಯರಿಂದ ಸಾಲ ಕೋರಿ ಅರ್ಜಿ ಬಂದಾಗ ಸಾಲದ ಒಳನಿಯಮಗಳಲ್ಲಿ ಸೂಚಿಸಿದಂತೆ ಸಾಲದ ಮೊತ್ತಕ್ಕೆ ಅನುಗುಣವಾಗಿ ಸದಸ್ಯರು ಹೆಚ್ಚುವರಿ ಷೇರನ್ನು ಹಣ ಸಂದಾಯ ಮಾಡಿ ಪಡೆದಿರುತ್ತಾರೆ. ಸಂಘದಲ್ಲಿ ಷೇರು ಮುಖಬೆಲೆಯ ಪೂರ್ಣಮೊತ್ತವನ್ನು ಪಾವತಿಸದೇ ಇರುವ 333 ಸದಸ್ಯರ ಪಟ್ಟಿಮಾಡಿ ಷೇರು ಬಾಕಿದಾರರ ಹೆಸರಿನ ಖಾತೆಯಲ್ಲಿಡಲಾಗಿದೆ. ಇದಕ್ಕೆ ಸಂಬಂಧಿಸಿದ ಕುಳುವಾರು ತಯಾರಿಸಲಾಗಿದ್ದು, ಷೇರು ಮುಖಬೆಲೆಯ ಪೂರ್ಣ ಮೊತ್ತವನ್ನು ಸದರಿ ಸದಸ್ಯರುಗಳಿಂದ ಜಮಾ ಪಡೆಯಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಷೇರು ಬಾಕಿದಾರರಿಗೆ ಈ ಹಿಂದೆ ಅನೇಕ ತಿಳುವಳಿಕೆ ನೀಡಲಾಗಿದ್ದು, ಕೆಲವು ಸದಸ್ಯರ ವಿಳಾಸ ಅಪೂರ್ಣವಾಗಿರುವುದರಿಂದ ಸರ್ವ ಸದಸ್ಯರ ಸಭೆಯ ಪುಸ್ತಕದಲ್ಲಿ ಇದರ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ತಮ್ಮ ಸಲಹೆಯನ್ನು ಪರಿಗಣಿಸಿ ಷೇರು ಮುಖಬೆಲೆಯ ಪೂರ್ಣ ಮೊತ್ತವನ್ನು ಭರ್ತಿ ಮಾಡಿ ಸಂಘದ ವ್ಯವಹಾರದಲ್ಲಿ ತೊಡಗಿಸಿಕೊಳ್ಳಲು ಪತ್ರ ವ್ಯವಹಾರವನ್ನು ಮಾಡಲಾಗುವುದು. |
| 14(ಬಿ)(1)ಸದಸ್ಯರಿಂದ ವಸೂಲಿಸಿದ ಷೇರಿನ ಮೊತ್ತವು ಸಂಘದ ಉಪನಿಯಮ ರನ್ವಯ ಷೇರಿನ ಮುಖ ಬೆಲೆಗೆ ಅನುಗುಣವಾಗಿ ಇದೆಯೇ? | ಉಪನಿಯಮ 10ರಲ್ಲಿ ತಿಳಿಸಿರುವಂತೆ ಸಂಘದ ಪ್ರತಿ ಷೇರಿನ ಮುಖ ಬೆಲೆಯು ರೂ.1000 ಇದ್ದು, ಹಾಲಿ ಮುಖ ಬೆಲೆಯ ಪೂರ್ತಿ ಮೊತ್ತ ಪಾವತಿ ಮಾಡದಿರುವ ಸದಸ್ಯರನ್ನು ಪಟ್ಟಿ ಮಾಡಿದ್ದು ಪೂರ್ಣ ಮೊತ್ತ ವಸೂಲಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಸಂಘವು ಸದಸ್ಯರಿಂದ ಸಾಲ ಕೋರಿ ಅರ್ಜಿ ಬಂದಾಗ ಸಾಲದ ಒಳನಿಯಮಗಳಲ್ಲಿ ಸೂಚಿಸಿದಂತೆ ಸಾಲದ ಮೊತ್ತಕ್ಕೆ ಅನುಗುಣವಾಗಿ ಹೆಚ್ಚುವರಿ ಷೇರನ್ನು ಸ್ವೀಕರಿಸುತ್ತದೆ. ರೂ.1000 ಕ್ಕಿಂತಲು ಹೆಚ್ಚಿನ ಷೇರು ಮೌಲ್ಯವನ್ನು ಹೊಂದಿರುವ ಸದಸ್ಯರನ್ನು ಷೇರುದಾರರೆಂದು ತೋರಿಸಲಾಗಿದೆ. ಹಿಂದಿನ ವರ್ಷಗಳ | ಸಂಘದ ಕೆಲವು ಸದಸ್ಯರು ರೂ.1100, ರೂ.1,200, ರೂ.1,500 ಷೇರು ಮೊತ್ತವನ್ನು ಹೊಂದಿದ್ದು, ಸಂಘಕ್ಕೆ ಭೇಟಿ ನೀಡಿದಾಗ ಈ ವ್ಯತ್ಯಾಸದ ಮೊತ್ತವನ್ನು ಷೇರಿನ ಮುಖ ಬೆಲೆಗೆ ಮೊತ್ತ ಪಾವತಿಸಿಕೊಳ್ಳಲಾಗುತ್ತಿದೆ. ಸಂಘದೊಂದಿಗೆ ನಿರಂತರ ವ್ಯವಹಾರ ಮಾಡದೇ ಇರುವ ಸದಸ್ಯರುಗಳಿಗೆ ಸರ್ವ ಸದಸ್ಯರ ಸಭೆಯ ವರದಿ ಪುಸ್ತಕದಲ್ಲಿ ಮಾಹಿತಿಯನ್ನು ನೀಡಲಾಗುತ್ತಿದೆ. ಆದರೂ ಸದಸ್ಯರು ಸ್ಪಂದಿಸಿರುವುದಿಲ್ಲ. ತಮ್ಮ ಸಲಹೆಯಂತೆ ಷೇರು ಮುಖ ಬೆಲೆಯನ್ನು |

| | | |
|---|---|---|
| | ಷೇರಿನ ಮುಖ ಬೆಲೆಯ ಪ್ರಕಾರ, ಉದಾಹರಣೆಗೆ, ರೂ. 1100, ರೂ1,200, ರೂ.1,500 ಗಳ ಷೇರು ಮೊತ್ತವನ್ನು ಪಡೆದಿದ್ದು, ಇವುಗಳ ಸಂಬಂದ ಷೇರು ಮುಖಬೆಲೆಯ ಪೂರ್ಣ ಮೊತ್ತವನ್ನು ಸದಸ್ಯರಿಂದ ಪಡೆಯಲು ಸೂಕ್ತ ಕ್ರಮ ವಹಿಸಲು ಸೂಚಿಸಲಾಗಿದೆ. | ಹೊರತುಪಡಿಸಿ ವ್ಯತ್ಯಾಸದ ಮೊತ್ತವನ್ನು ಷೇರು ಬಾಕಿದಾರರ ಖಾತೆಗೆ ವರ್ಗಾವಣೆ ಮಾಡಲು ಆಡಳಿತ ಮಂಡಲಿಯ ಅನುಮತಿಯನ್ನು ಪಡೆದು ಸರ್ವಸದಸ್ಯರ ಸಭೆಯ ಅನುಮೋದನೆಯಂತೆ ಕ್ರಮ ಕೈಗೊಳ್ಳಲಾಗುವುದು. |
| 16(5) ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ | ಹೂಡಿಕೆಗಳ ನಿರ್ವಹಣೆ ಸಮಾಧಾನಕರವಾಗಿದೆ. ಹೂಡಿಕೆಗಳ ಸಂಬಂದ, ಸಂಘದ ಆರ್ಥಿಕ ಹಿತದ ದೃಷ್ಟಿಯನ್ನು ಪರಿಗಣಿಸುತ್ತಾ, ಹಾಗೆಯೇ ಹೂಡಿಕೆ ಭದ್ರತೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾ, ಸರ್ವಸದಸ್ಯರ ಸಭೆಯ ನಿರ್ಧಾರಗಳನ್ನು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, ಕಲಂ, ಅಧಿನಿಯಮಗಳನ್ನು ಹಾಗು ಆದಾಯ ತೆರಿಗೆ ಸಲಹೆಗಾರರ ಸಲಹೆಯನ್ನೂ ಪರಿಗಣಿಸಿ, ಸೂಕ್ತ ನಿರ್ಧಾರಗಳನ್ನು ಆಡಳಿತ ಮಂಡಳಿಯವರು ತಮ್ಮ ಸಭೆಗಳಲ್ಲಿ ಚರ್ಚಿಸಿ, ನಿರ್ಧಾರಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. ಈ ಸಂಬಂದ ಸಂಘವು ಸೂಕ್ತ ಆಂತರಿಕ ನೀತಿ ಹಾಗು ನಿಯಮಗಳನ್ನು ರಚಿಸಿಕೊಂಡು, ಅದರಂತೆ ಹೂಡಿಕೆ ಕಾರ್ಯ ನಿರ್ವಹಿಸುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ | ಸಂಘದ ಆರ್ಥಿಕ ಹಿತದ ದೃಷ್ಟಿಯನ್ನು ಪರಿಗಣಿಸಿ ಆದಾಯ ತೆರಿಗೆ ಸಲಹೆಗಾರರ ಸಲಹೆಯಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, ಕಲಂ, ಅಧಿನಿಯಮಗಳ ಅನುಸಾರವಾಗಿ ನಿರ್ದೇಶಕ ಮಂಡಲಿ ಅನುಮೋದನೆಯಂತೆ ಹೂಡಿಕೆ ಮಾಡಲಾಗಿರುತ್ತದೆ. ತಮ್ಮ ಸಲಹೆಯಂತೆ ಈ ಸಂಬಂದ ಸೂಕ್ತವಾದ ಆಂತರಿಕ ನೀತಿ ಹಾಗು ನಿಯಮಗಳನ್ನು ರಚಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. |
| 18(4) ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ, ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ (ಕುಳುವಾರು ತಯಾರಿಸಿ) ಕಡ್ಡಾಯವಾಗಿ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಶಿಸಿ | ಅ) ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಪಾವತಿಯಾಗಿರುತ್ತದೆ. 31–03–2025ರ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗನ್ನು ಸೂಕ್ತವಾಗಿ ಲೆಕ್ಕಾಚಾರ ಮಾಡಿ ಅವಕಾಶ ಕಲ್ಪಿಸಲಾಗಿದೆ. ಸದರಿ ಬಡ್ಡಿಯ ಅವಕಾಶ ಕಲ್ಪಿಸುವಾಗ ಸಂಪೂರ್ಣ ತಿಂಗಳನ್ನು ಮಾತ್ರ ಪರಿಗಣಿಸಿ ಲೆಕ್ಕ ಹಾಕಲಾಗಿದೆ.<br>ಆ) ಅವಧಿ ಮೀರಿದ ಠೇವಣಿಗಳು: ಸದಸ್ಯರು ನವೀಕರಿಸದೇ ಅಥವಾ ನಗದೀಕರಿಸಲೂ (ಹಿಂಪಡೆಯಲು) ಬರದೇ ಇದ್ದಾಗ, ಅಂತಹ ಠೇವಣಿಗಳ ಮೇಲೆ ಬಡ್ಡಿಯನ್ನು, ಸದಸ್ಯರು ನಗದೀಕರಿಸಲು ಬಂದಾಗ ಸಂಘದ ಒಳ ನಿಯಮಗಳಂತೆ ಉಳಿತಾಯ ಖಾತೆಯ ಬಡ್ಡಿಯ ದರದಲ್ಲಿ ಕೊಡಲಾಗಿದೆ. 31–03–2025ರ ವರ್ಷಾಂತ್ಯಕ್ಕೆ ಈ ಅವಧಿ ಮೀರಿದ ಠೇವಣಿಗಳನ್ನು ಸದಸ್ಯರು ನವೀಕರಿಸದೇ ಇದ್ದಾಗ, ಇದರ ಮೇಲಿನ ಬಡ್ಡಿಗೆ ಆಯಾ ವರ್ಷಗಳಲ್ಲಿಯೇ ಅವಕಾಶ ಕಲ್ಪಿಸಲು ಕ್ರಮವಿಡುವುದು ಅವಶ್ಯಕವೆಂದು ಸೂಚಿಸಲಾಗಿದೆ.ಬಡ್ಡಿ ಲೆಕ್ಕಾಚಾರದ ಬಗ್ಗೆ ಸೂಕ್ತ ಆಂತರಿಕ ನಿಯಮಗಳನ್ನು ರಚಿಸಲು ಕ್ರಮವಿಡಲು ಸೂಚಿಸಲಾಗಿದೆ. | (ಆ) ಅವಧಿ ಮೀರಿದ ಠೇವಣಿಗಳನ್ನು ಸದಸ್ಯರು ನವೀಕರಿಸದೇ ಇದ್ದಾಗ, ಇದರ ಮೇಲೆ ನಿಖರವಾದ ಬಡ್ಡಿ ತಿಳಿಯದೇ ಇರುವುದರಿಂದ ಬಡ್ಡಿ ಕಾಯ್ದಿರಿಸಲು ಸಾಧ್ಯವಾಗಿರುವುದಿಲ್ಲ. ಲೆಕ್ಕಪರಿಶೋಧಕರ ಸಲಹೆಯಂತೆ ಸೂಕ್ತವಾದ ಆಂತರಿಕ ನಿಯಮವನ್ನು ರಚಿಸಿಕೊಂಡು ಕ್ರಮ ಕೈಗೊಳ್ಳಲಾಗುವುದು. |
| 19(7) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 28 ರಂತೆ ನಗದು ಮೀಸಲು (ಡಿ.ಟಿ.ಎಲ್.ನ 3%) ಮತ್ತು ಪ್ರವಾಹಿ ಧನ (ಡಿ.ಟಿ.ಎಲ್.ನ 10%) ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ? (ಪ್ರವಾಹಿ ಧನ ಲೆಕ್ಕಾಚಾರ ಮಾಡುವಾಗ ಕಲಂ 58ಕ್ಕೆ ವಿರುದ್ಧವಾಗಿ ಮಾಡಿರುವ ಹೂಡಿಕೆಗಳನ್ನು ಪರಿಗಣಿಸಬಾರದು) | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 28 ರಂತೆ ನಗದು ಮೀಸಲು (ಡಿ.ಟಿ.ಎಲ್.ನ 3%) ಮತ್ತು ಪ್ರವಾಹಿ ಧನ (ಡಿ.ಟಿ.ಎಲ್.ನ 10%) ಮಿತಿ ರಿಜಿಸ್ಟರ್ ತಂತ್ರಾಂಶದಲ್ಲಿ ಲಭ್ಯವಿರುತ್ತದೆ. ನಿಯಮ 28ರಂತೆ ಸದರಿ ಮಿತಿಗಳಿಗೆ ಒಳಪಟ್ಟು ಸಂಘವು ಕಾರ್ಯ ನಿರ್ವಹಿಸಲು ಸೂಚಿಸಿದೆ. | ನಗದು ಮೀಸಲು (ಡಿ.ಟಿ.ಎಲ್.ನ 3%) ಮತ್ತು ಪ್ರವಾಹಿ ಧನ ಮಿತಿಯನ್ನು ಆದಾಯ ತೆರಿಗೆ ಸಲಹೆಗಾರರ ಸಲಹೆಯಂತೆ ಧನವಿನಿಯೋಗಗಳಲ್ಲಿ ತೊಡಗಿಸಿರುವುದರಿಂದ ಕೆಲವು ಸಂದರ್ಭಗಳಲ್ಲಿ ಹೆಚ್ಚು ಅಥವಾ ಕಡಿಮೆಯಾಗಿರುತ್ತದೆ. ಪ್ರವಾಹಿ ಧನ (ಡಿ.ಟಿ.ಎಲ್.ನ 10%) ಹೆಚ್ಚುವರಿ ಧನ ವಿನಿಯೋಗಗಳಲ್ಲಿ ಇರುತ್ತದೆ. ಮುಂದಿನ ದಿನಗಳಲ್ಲಿ ಸದರಿ ಮಿತಿಗಳನ್ನು ಕಾಯ್ದುಕೊಳ್ಳಲು ಕ್ರಮವಿಡಲಾಗುವುದು. |

| | | |
|---|---|---|
| 20(2) ಉಳಿತಾಯ ಖಾತೆಗಳ ಮೇಲಿನ ಬಡ್ಡಿ:<br>26(1) ಉಪನಿಯಮಗಳ ಹಾಗೂ ಸಾಲದ ನಿಯುವಮಾವಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲಗಳ ವಿವರ | **ಉಳಿತಾಯ ಖಾತೆಗಳ ಮೇಲಿನ ಬಡ್ಡಿ:** ಬಡ್ಡಿ ಪಾವತಿಯ ಅವಧಿಯ ಬಗ್ಗೆ ಸೂಕ್ತ ಆಂತರಿಕ ನಿಯಮಗಳನ್ನು ರಚಿಸಿಕೊಳ್ಳಲು ಸೂಚಿಸಿದೆ.<br>ಉಪನಿಯಮಗಳನ್ನು ಹಾಗೂ ಸಾಲದ ಒಳ ನಿಯಮಗಳನ್ನು ಗಮನಿಸಿದಾಗ, ಅವುಗಳಲ್ಲಿ ವ್ಯತ್ಯಾಸ ಇರುವುದು ಕಂಡು ಬರುತ್ತದೆ. ಸಂಘವು ಸಾಲಗಳ ಮಿತಿಯನ್ನು ಉಪನಿಯಮಗಳ ಪ್ರಕಾರ ಜಾರಿಗೊಳಿಸಿರುತ್ತದೆ. ಸಂಘದ ಸಾಲದ ಒಳನಿಯಮಗಳನ್ನು ತಿದ್ದುಪಡಿ ಮಾಡಲು ಸಂಘವು ಶೀಘ್ರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ತಮ್ಮ ಈ ಸಲಹೆಯನ್ನು ಆಡಳಿತ ಮಂಡಲಿಯ ಗಮನಕ್ಕೆ ತಂದು ಬಡ್ಡಿ ಪಾವತಿಯ ಅವಧಿಯ ಬಗ್ಗೆ ಸೂಕ್ತವಾದ ಆಂತರಿಕ ನಿಯಮವನ್ನು ರಚಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. |
| 27(2) ವಾಹನ ಸಾಲ: | **ವಾಹನ ಸಾಲ:**ಸಂಘವು ವಾಹನ ಸಾಲ ವಿತರಿಸಿದ ನಂತರ ಸದಸ್ಯರಿಂದ ವಾಹನ ಖರೀದಿಯ ರಶೀತಿಯನ್ನು (original Invoice) ಪಡೆಯಲು ಕ್ರಮವಿಡುವುದು. ವಾಹನದ ವಿಮೆ ಹಾಗು ವಾಹನದ ನೋಂದಣಿ ಪ್ರಮಾಣ ಪತ್ರ ಪಡೆಯಲು ಸೂಚಿಸಲಾಗಿದೆ. | ಆಡಳಿತ ಮಂಡಲಿಯ ತೀರ್ಮಾನದಂತೆ ಮುಂದಿನ ದಿನಗಳಲ್ಲಿ ಉಪನಿಯಮದನುಸಾರ ಸಾಲದ ಒಳನಿಯಮವನ್ನು ರಚಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. |
| 27(3) ಸ್ಥಿರಾಧಾರ ಸಾಲ: | **ಸ್ಥಿರಾಧಾರ ಸಾಲ:** ಸಂಘವು ಸದಸ್ಯರ ಸ್ಥಿರಾಸ್ತಿಗಳ (ನಿವೇಶನ / ಕಟ್ಟಡ) ಆಧಾರದ ಮೇಲೆ ಸದಸ್ಯರಿಗೆ ಸಾಲವನ್ನು ನೀಡುತ್ತಿದ್ದು, ಈ ಸಾಲವನ್ನು ನೀಡುವಾಗ, ಸಾಲದ ಆಧಾರವಾಗಿ ನೀಡುವ ಕಟ್ಟಡಗಳ ಮೇಲೆ ಸದಸ್ಯರಿಂದ ವಿಮೆ ಮಾಡಿಸಿ ನಂತರ ಸಾಲವನ್ನು ನೀಡಲು ಸೂಚಿಸಲಾಗಿದೆ. ಸದರಿ ಸಾಲಗಳನ್ನು ನೀಡುವಾಗ, ಸಾಲದ ಒಳನಿಯಮಗಳನ್ನು ಸಂಘದ ಉಪನಿಯಮಕ್ಕೆ ಸರಿ ಹೊಂದುವಂತೆ ತಿದ್ದುಪಡಿ ಮಾಡಲು ಸೂಚಿಸಲಾಗಿದೆ. ಅಂತೆಯೇ ಆಧಾರವಾಗಿ ನೀಡುವ ಕಟ್ಟಡಗಳ ಮೇಲೆ ನಗರ ಸಭೆಗೆ ತಹಲ್ ವರೆವಿಗೂ ತೆರಿಗೆ ಪಾವತಿಸಿರುವ ರಶೀತಿಯ ಪ್ರತಿಯನ್ನು ಪಡೆದು ಕೊಳ್ಳುವುದು ಅವಶ್ಯಕವೆಂದು ಸೂಚಿಸಲಾಗಿದೆ. ಸಾಲ ಪಡೆವ ಸದಸ್ಯರ ಸಹಿಯನ್ನು ಅವರು ನೀಡುವ ಎಲ್ಲಾ ದಾಖಲಾತಿಗಳ ಮೇಲೂ ಪಡೆದು, ಅದನ್ನು ಮೂಲ ದಾಖಲಾತಿಯೊಂದಿಗೆ ಸಂಘದ ಪರವಾಗಿ ಪರಿಶೀಲಿಸಿ ಸಹಿ ಮಾಡುವುದು ಸೂಕ್ತವೆಂದು ಸೂಚಿಸಲಾಗಿದೆ. ಸ್ಥಿರಾಧರ ಸಾಲಗಳ ಸಂಬಂಧ ಸಂಘವು ಪಡೆದ ಸ್ಥಿರಾಸ್ತಿಗಳ ಮೌಲ್ಯ ಮಾಪನವನ್ನು ಪ್ರತಿ ಮೂರು ವರ್ಷಕ್ಕೊಮ್ಮೆ Approved Valuer ರವರಿಂದ ಪಡೆದು, ಆಯಾಯ ದಿನಾಂಕದ ಸಾಲದ ಬಾಕಿ ಮೊತ್ತದೊಂದಿಗೆ ಪರಿಶೀಲಿಸುವುದು. ಈ ಕ್ರಮವು ಎಲ್ಲಾ ರಾಷ್ಟ್ರೀಕೃತ ಹಾಗು ನೋಂದಾಯಿತ ಬ್ಯಾಂಕುಗಳಲ್ಲಿ ಪ್ರಚಲಿತದಲ್ಲಿರುತ್ತದೆ. ಈ ಕಾರ್ಯ ಕೈಗೊಳ್ಳುವುದು ಸಂಘದ ಆರ್ಥಿಕ ಹಿತದೃಷ್ಟಿಯಿಂದ ಉತ್ತಮ ಕ್ರಮವಾಗಿರುತ್ತದೆ. | ಲೆಕ್ಕಪರಿಶೋಧಕರ ಸಲಹೆಯಂತೆ ಈಗಾಗಲೇ ಕ್ರಮಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಈ ಪದ್ದತಿಯನ್ನು ಮುಂದುವರೆಸಲಾಗುವುದು. ಲೆಕ್ಕಪರಿಶೋಧಕರ ಸಲಹೆಯಂತೆ ಆಡಳಿತ ಮಂಡಲಿಯ ಸಭೆಯ ಗಮನಕ್ಕೆ ತಂದು ವಿಮೆ ಮಾಡಿಸುವ ಕ್ರಮವನ್ನು ಅವರ ಆದೇಶದಂತೆ ಕ್ರಮವಿಡಲಾಗುವುದು. ಉಪನಿಯಮದನುಸಾರ ಪರಿಷ್ಕೃತ ಒಳನಿಯಮಗಳನ್ನು ರಚಿಸಿ ಕೊಳ್ಳಲಾಗುವುದು. ಆಧಾರವಾಗಿ ನೀಡುವ ಕಟ್ಟಡಗಳ ಮೇಲೆ ನಗರ ಸಭೆಗೆ ತಹಲ್‌ವರೆವಿಗೂ ತೆರಿಗೆ ಪಾವತಿಸಿರುವ ರಶೀತಿಯ ಪ್ರತಿಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಸಾಲ ಪಡೆವ ಸದಸ್ಯರ ಸಹಿಯನ್ನು ಅವರು ನೀಡುವ ಎಲ್ಲಾ ದಾಖಲಾತಿಗಳ ಮೇಲೂ ಪಡೆಯಲಾಗುವುದು. ಸಾಲ ಪಡೆವ ಸದಸ್ಯರ ಸಹಿಯನ್ನು ಅವರು ನೀಡುವ ಎಲ್ಲಾ ದಾಖಲಾತಿಗಳ ಮೇಲೂ verified with orginals ಎಂದು ಸಂಘದ ಪರವಾಗಿ ಪರಿಶೀಲಿಸಿ ಸಹಿ ಮಾಡಲಾಗುವುದು. ಆಡಳಿತ ಮಂಡಲಿಯ ನಿರ್ಧಾರದಂತೆ ಸ್ಥಿರಾಸ್ತಿಗಳ ಮೌಲ್ಯ ಮಾಪನವನ್ನು ಪ್ರತಿ ಮೂರು ವರ್ಷಕ್ಕೊಮ್ಮೆ Approved Valuer ರವರಿಂದ ಪಡೆದು, ಆಯಾ ದಿನಾಂಕದ ಸಾಲದ ಬಾಕಿ ಮೊತ್ತದೊಂದಿಗೆ ಪರಿಶೀಲಿಸುವ ಕ್ರಮ ಕೈಗೊಳ್ಳಲಾಗುವುದು. |
| 27(4) ಜಂಟಿ ಸಾಲ: | **ಜಂಟಿ ಸಾಲ :** ಸ್ವಂತ ವ್ಯಾಪಾರದ ಆಧಾರದ ಮೇಲೆ ಸಾಲ ಪಡೆಯುವ ಸದಸ್ಯರಿಂದ ವ್ಯಾಪಾರದ ಪರವಾನಗಿ ಪಡೆಯಲು ಸೂಚಿಸಿದೆ. ಜಂಟಿ ಸಾಲ ವಿತರಿಸುವಾಗ ಸದಸ್ಯರ ಸಾಲ ಮರುಪಾವತಿ ಕ್ಷಮತೆಯನ್ನು ನಿರ್ಧರಿಸಿ, ಸಾಲ ವಿತರಿಸಲು ಸೂಚಿಸಲಾಗಿದೆ. ಸಾಲ ಮರುಪಾವತಿ ಕ್ಷಮತೆಯನ್ನು ನಿರ್ಧರಿಸಲು ಸೂಕ್ತ ದಾಖಲಾತಿಗಳನ್ನು ಸದಸ್ಯರಿಂದ ಪಡೆಯಲು ಸೂಚಿಸಿದೆ. ಸಾಲ ಪಡೆವ ಸದಸ್ಯರ ಸಹಿಯನ್ನು ಅವರು ನೀಡುವ ಎಲ್ಲಾ | ಕೆಲವು ಸದಸ್ಯರು ಮನೆಯಲ್ಲೇ ಪರವಾನಗಿ ಪಡೆಯದೇ ಸ್ವಂತವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸಿಬ್ಬಂದಿವರ್ಗದವರು ವಿಳಾಸ ಪರಿಶೀಲನೆಗೆ ತೆರಳಿದ್ದಾಗ ವ್ಯಾಪಾರದ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ. ಸಂಘದ ಆಡಳಿತ ಮಂಡಲಿಯ ತೀರ್ಮಾನದಂತೆ ಸೂಕ್ತ ದಾಖಲಾತಿಗಳನ್ನು ಪಡೆಯಲಾಗುವುದು. ಸಾಲ ಪಡೆವ ಸದಸ್ಯರ ಸಹಿಯನ್ನು ಅವರು ನೀಡುವ ಎಲ್ಲಾ |

| | | |
|---|---|---|
| | ದಾಖಲಾತಿಗಳ ಮೇಲೂ ಪಡೆದು, ಅದನ್ನು ಮೂಲ ದಾಖಲಾತಿಯೊಂದಿಗೆ ಸಂಘದ ಪರವಾಗಿ ಪರಿಶೀಲಿಸಿ ಸಹಿ ಮಾಡುವುದು ಸೂಕ್ತವೆಂದು ಸೂಚಿಸಲಾಗಿದೆ. | ದಾಖಲಾತಿಗಳ ಮೇಲೂ verified with orginals ಎಂದು ಸಂಘದ ಪರವಾಗಿ ಪರಿಶೀಲಿಸಿ ಸಹಿ ಮಾಡಲಾಗುವುದು. |
| 27(5) | ಸಂಘವು ತನ್ನ ಸದಸ್ಯರಿಗೆ ಉಪನಿಯಮದಲ್ಲಿ ತಿಳಿಸಿರುವಂತೆ ವಿವಿಧ ಬಗೆಯ ಸಾಲವನ್ನು ವಿತರಿಸುವ ವ್ಯವಸ್ಥೆ ಹೊಂದಿರುತ್ತದೆ. ಸಾಲ ವಿತರಣೆ ಮತ್ತು ವಸೂಲಾತಿಯ ಬಗ್ಗೆ ವಿಸ್ತೃತವಾದ ಒಳ ನಿಯಮಗಳ ಕೈಪಿಡಿಯನ್ನು 2008 ರಲ್ಲಿ ರಚಿಸಲಾಗಿದೆ. ಈ ಒಳನಿಯಮಗಳು ಸಂಘದ ಉಪನಿಯಮಕ್ಕೆ ಸರಿಹೊಂದುವ ಹಾಗೆ ಪರಿಷ್ಕರಿಸಲು ಸೂಚಿಸಲಾಗಿದೆ. | ಆಡಳಿತ ಮಂಡಲಿಯ ತೀರ್ಮಾನದಂತೆ ಉಪನಿಯಮದನುಸಾರ ಪರಿಷ್ಕೃತ ಒಳನಿಯಮಗಳನ್ನು ರಚಿಸಿಕೊಳ್ಳಲಾಗುವುದು. |
| 29(ಎ)(1)ಲೆಕ್ಕಪರಿಶೋಧನಾ ಕಾಲಕ್ಕೆ ಇವುಗಳ ಸಂಪೂರ್ಣ ದಾಖಲಾತಿಗಳು ಹಾಗೂ ಇ.ಸಿ. ಖಾತಾಉತಾರೆ (Khatha Extract) ಪರಿಶೀಲಿಸಿದ ಬಗ್ಗೆ ವಿಮರ್ಶೆ | ಮೇಲಿನ ಸ್ಥಿರಾಸ್ತಿಗಳ ಪತ್ರವನ್ನು ಪರಿಶೀಲನೆಗೆ ನೀಡಿರುತ್ತಾರೆ ಹಾಗೂ ಪರಿಶೀಲಿಸಿದೆ. ಕೃಷ್ಣಮೂರ್ತಿಪುರಂನಲ್ಲಿ ನಿರ್ಮಿಸಲಾದ ಕಟ್ಟಡದ, ಕಟ್ಟಡ ಪೂರ್ಣಗೊಂಡ ಪ್ರಮಾಣಪತ್ರ ಪಡೆಯಲು ಸೂಚಿಸಲಾಗಿದೆ. | ಸಂಬಂಧಪಟ್ಟ ಪ್ರಾಧಿಕಾರಕ್ಕೆ ಈ ಬಗ್ಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ. ನಿಯಮಗಳ ಉಲ್ಲಂಘನೆಯಾಗಿರುವುದರಿಂದ ಕಟ್ಟಡ ಪೂರ್ಣಗೊಂಡ ಪ್ರಮಾಣಪತ್ರ ನೀಡಲಾಗುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ. |
| 29(ಎ)(2) ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಸ್ಥಿರಾಸ್ತಿ ರಿಜಿಸ್ಟರ್‌ನ್ನು ಎಕ್ಸೆಲ್ ತಂತ್ರಾಂಶದಲ್ಲಿ ಬರೆದಿಡಲಾಗಿದೆ. ಸಂಪೂರ್ಣ ಮಾಹಿತಿಗಳನ್ನು ಮುಂದಿನ ದಿನಗಳಲ್ಲಿ ಬರೆದಿಡಲು ಸೂಚಿಸಿದೆ. | ಲೆಕ್ಕಪರಿಶೋಧಕರ ಸಲಹೆಯಂತೆ ಪುಸ್ತಕದಲ್ಲಿ ಬರೆದಿಡಲು ಕ್ರಮವಿಡಲಾಗುವುದು. |
| 29(ಬಿ)(2) ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಚರಾಸ್ತಿ ರಿಜಿಸ್ಟರ್‌ನ್ನು ಎಕ್ಸೆಲ್ ತಂತ್ರಾಂಶದಲ್ಲಿ ಬರೆದಿಡಲಾಗಿದೆ. ಈ ಸಂಬಂದ ಕೆಳಕಂಡ ಸಲಹೆ ಸೂಚನೆಗಳನ್ನು ನಿರ್ವಹಿಸಲು ಸೂಚಿಸಿದೆ:<br>ಅ) ಚರಾಸ್ತಿಗಳ ವಿಲೇವಾರಿ ವಿವರವನ್ನು ಆಯಾ ಚರಾಸ್ತಿಯ ವಿವರದೊಂದಿಗೆ ತೋರಿಸುವ ಬದಲಾಗಿ ವಿಲೇವಾರಿ ಆಗಿರುವ ದಿನಾಂಕದಂದು ಒಟ್ಟು ವಿಲೇವಾರಿ ಎಂದು ತೋರಿಸಲಾಗಿದೆ. ಚರಾಸ್ತಿಗಳ ಪೂರ್ಣ ಮಾಹಿತಿಯನ್ನು ಅಂದರೆ ಮೊತ್ತ, ಸಂಖ್ಯೆ, ವಿಲೇವಾರಿಯಾದ ದಿನಾಂಕ ಇತ್ಯಾದಿ ಮಾಹಿತಿಗಳೊಂದಿಗೆ ಬರೆದಿಡಲು ಕ್ರಮವಿಡುವುದು.<br>ಆ) ಸದರಿ ರಿಜಿಸ್ಟರ್ ನಲ್ಲಿ ಸವಕಳಿ ಮತ್ತು WDV ವಿವರಗಳನ್ನೂ ಸೇರಿಸಲು ಕ್ರಮವಿಡುವುದು.<br>ಇ) ಸದರಿ ಚರಾಸ್ತಿಗಳ ರಿಜಿಸ್ಟರ್‌ನ್ನು ಹಾಗು ಭೌತಿಕವಾಗಿ ಅವುಗಳ ಇರುವಿಕೆಯನ್ನು ಪ್ರತಿ ಸಾಲಿಗೊಮ್ಮೆಯಾದರೂ ಸಂಘದ ಪರವಾಗಿ ನೌಕರೇತರರಿಂದ ಪರಿಶೀಲಿಸಲು ಕ್ರಮವಿಡುವುದು. | ಲೆಕ್ಕಪರಿಶೋಧಕರ ಸಲಹೆಯಂತೆ ಸಂಘದ ಸನ್ನದು ಲೆಕ್ಕಿಗರು ಹಾಗೂ ಆಂತರಿಕ ಲೆಕ್ಕಪರಿಶೋಧಕರ ಮಾರ್ಗದರ್ಶನ ಪಡೆದು ಪುಸ್ತಕದಲ್ಲಿ ಬರೆದಿಡಲಾಗುವುದು. |
| 29(ಬಿ)(7) ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಶೆ. | ಚರಾಸ್ತಿ ರಿಜಿಸ್ಟರ್‌ನ್ನು ಎಕ್ಸೆಲ್ ತಂತ್ರಾಂಶದಲ್ಲಿ ಬರೆದಿಡಲಾಗಿದೆ. ಚರಾಸ್ತಿ ರಿಜಸ್ಟರ್‌ನಿಂದ ಅನುಪಯುಕ್ತ ಚರಾಸ್ತಿಗಳನ್ನು ಪ್ರತ್ಯೇಕಿಸುವ ಸಂಬಂಧ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ, ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಆಡಳಿತ ಮಂಡಳಿಯ ಶಿಫಾರಸನ್ನು ಮಂಡಿಸಿ, ಅನುಮೋದನೆ ಪಡೆದು ಮುಂದಿನ ಕ್ರಮವಿಡುವುದು. | ಲೆಕ್ಕಪರಿಶೋಧಕರ ಸಲಹೆಯಂತೆ ಈ ಬಗ್ಗೆ ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಮುಂಬರುವ ಸರ್ವ ಸದಸ್ಯರ ಸಭೆಗೆ ವಿಷಯವನ್ನು ಮಂಡಿಸಿ ಸೂಕ್ತವಾದ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| 36) ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು(ಲೆಕ್ಕಪರಿಶೋಧ್ಕರು ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ನಂತರ ಸಂಘದ ಲೆಕ್ಕಪುಸ್ತಕಗಳ ನಿರ್ವಹಣೆ, ವ್ಯಾಪಾರ ವಹಿವಾಟು/ವ್ಯವಹಾರಗಳು, ಸಾಲಗಳ ನೀಡಿಕೆ ಹಾಗೂ ವಸೂಲಾತಿ, ಠೇವಣಿ ಸಂಗ್ರಹಣೆ ಹಾಗೂ ಹಿಂದಿರುಗಿಸುವಿಕೆ, ಸಂಘವು ಹೊಂದಿರುವ ಲಾಭ/ನಷ್ಟ ಹಾಗೂ ಸಂಘವು ಆರ್ಥಿಕ ಅಭಿವೃದ್ಧಿ ಹೊಂದಲು ಕೈಗೊಳ್ಳಬೇಕಾದ ಕ್ರಮಗಳ ಹಿನ್ನೆಲೆಯಲ್ಲಿ ನೀಡುವುದು) | 36.1) ತಂತ್ರಾಂಶ:<br>ಅ. ವರದಿ ಸಾಲಿನಲ್ಲಿ, ಸಂಘದ ಕೇಂದ್ರ ಕಛೇರಿ ಮತ್ತು ವಿಜಯನಗರ ಶಾಖೆಗಳಲ್ಲಿ ಗಣಕೀಕೃತ ವ್ಯವಹಾರಗಳನ್ನು ಹಾಗು ತನ್ನ ಲೆಕ್ಕ ಪತ್ರಗಳನ್ನು, ಯುನಿಫೈ ಎನ್ನುವ ತಂತ್ರಾಂಶದಲ್ಲಿ ನಿರ್ವಹಿಸಿರುತ್ತದೆ. ಅದರಲ್ಲಿ ಕೇಂದ್ರೀಕೃತ ನಿರ್ವಹಣಾ ತಂತ್ರಾಂಶ ವ್ಯವಸ್ಥೆ (Core Banking System) ಅಳವಡಿಸಿಕೊಳ್ಳಲು ಸೂಚಿಸಿದೆ. ಇದು ಸದಸ್ಯರಿಗೆ ಹೆಚ್ಚಿನ ಅನುಕೂಲವನ್ನು ನೀಡುವುದರ ಜೊತೆಗೆ, ಸಂಘದ ಲೆಕ್ಕ ಪುಸ್ತಕಗಳ ನಿರ್ವಹಣೆಯನ್ನು ಉತ್ತಮ ಪಡಿಸುತ್ತದೆ. ಇದೇ ರೀತಿಯಲ್ಲಿ ಇದು ಸಂಘವು ತನ್ನ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ನಡೆಸಲು ಸಹಾಯಕಾರಿಯಾಗಿರುತ್ತದೆಂದು ಅಭಿಪ್ರಾಯಿಸಲಾಗಿದೆ.<br>ಇ. ಸಂಘವು ವರ್ಷಕ್ಕೊಮ್ಮೆ, ತಾನು ಬಳಸುತ್ತಿರುವ ತಂತ್ರಾಂಶದ System Audit ಮಾಡಿಸಿಕೊಳ್ಳಲು ಸೂಚಿಸಿದೆ. ಇದರಿಂದ ಬಳಕೆಯಾಗುತ್ತಿರುವ ತಂತ್ರಾಂಶದಲ್ಲಿನ ಲೋಪದೋಷಗಳನ್ನು ಕಂಡುಹಿಡಿಯುವುದರ ಜೊತೆಗೆ ನೂತನವಾಗಿ ಲಭ್ಯವಿರುವ ತಂತ್ರಾಂಶದ ಭದ್ರತೆಯ ಅಂಶಗಳನ್ನು ಅಳವಡಿಸಿ ಕೊಳ್ಳಲು ಸಾಧ್ಯವಾಗಿರುತ್ತದೆ. ತಂತ್ರಾಂಶದಿಂದ ತಯಾರಿಸಿದ ವರದಿ, ತಂತ್ರಾಂಶದಲ್ಲಿರುವ ದತ್ತಾಂಶಕ್ಕೆ ತಾಳೆಯಾಗುತ್ತದೆಯೇ? ತಂತ್ರಾಂಶವು ಲೆಕ್ಕಮಾಡಿ ನೀಡುವ ಫಲಿತಾಂಶಗಳು ಸಂಘದ ನಿಯಮಗಳಿಗೆ ಹೊಂದಾಣಿಕೆಯಾಗುತ್ತವೆಯೆ? ಇತ್ಯಾದಿಗಳ ವಿಷಯಗಳ ಬಗ್ಗೆ ಪರಿಶೀಲನೆ ಮಾಡಿ, ತಂತ್ರಾಶದಲ್ಲಿನ ತಪ್ಪುಗಳನ್ನು ಕಾಲಕಾಲಕ್ಕೆ ಪತ್ತೆ ಹಚ್ಚಿ, ಅಂದೇ ಸರಿಪಡಿಸಿಕೊಂಡು, ಸಂಘವು ಸಶಕ್ತ ಹಾಗು ಸಧೃಡವಾಗಿ ತನ್ನ ದೈನಂದಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗಲು System Audit ನಿಂದ ಸಾಧ್ಯವಾಗುತ್ತದೆ. | ಸಂಘದ ಆಡಳಿತ ಮಂಡಲಿ ಸದಸ್ಯರು ತಂತ್ರಾಂಶದ ಉನ್ನತೀಕರಣದ ಯೋಜನೆಯನ್ನು ಅಳವಡಿಸುವ ಬಗ್ಗೆ ಚರ್ಚಿಸಿರುತ್ತಾರೆ. ಮುಂದಿನ ದಿನಗಳಲ್ಲಿ ತಂತ್ರಾಂಶದ ಉನ್ನತೀಕರಣವನ್ನು ಮಾಡುವ ಸಂದರ್ಭದಲ್ಲಿ ಲೆಕ್ಕಪರಿಶೋಧಕರ ಸಲಹೆಯಂತೆ ಕಾರ್ಯಗತ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.<br>ತಮ್ಮ ಸಲಹೆಯಂತೆ ಮುಂದಿನ ದಿನಗಳಲ್ಲಿ ತಂತ್ರಾಂಶದ ಉನ್ನತೀಕರಣ ಕಾರ್ಯ ಪೂರ್ಣಗೊಂಡ ನಂತರ System Audit ವ್ಯವಸ್ಥೆಯನ್ನು ವಾರ್ಷಿಕ ಅಥವಾ ದ್ವೈವಾರ್ಷಿಕ ಒಮ್ಮೆಯಾದರು ನಡೆಸಲು ಸೂಕ್ತ ಕ್ರಮವಿಡಲಾಗುವುದು. |
| | 36.2) ದಸ್ತಾವೇಜು ನಿರ್ವಹಣೆ: ಕಾಲಕಾಲಕ್ಕೆ ಸದಸ್ಯತ್ವದ ಅರ್ಜಿ, ಸಾಲ/ ಠೇವಣಿ ಪತ್ರಗಳ ನಮೂನೆ–ಅರ್ಜಿ, ಒಪ್ಪಂದ, ಇತ್ಯಾದಿಗಳನ್ನು ವಿಮರ್ಷೆಗೆ ಒಳಪಡಿಸಿ, ಪ್ರಚಲಿತ ತಿದ್ದುಪಡಿಯಾದ ಕಾನೂನುಗಳ ಅನ್ವಯ ಮಾರ್ಪಾಡು ಮಾಡಿಕೊಳ್ಳಲು ಸೂಚಿಸಿದೆ. | ಆಡಳಿತ ಮಂಡಲಿ ಸಭೆಯ ಗಮನಕ್ಕೆ ತಂದು ಕಾನೂನು ಸಲಹೆಗಾರರ ಸಲಹೆ ಸೂಚನೆಯಂತೆ ಕ್ರಮಕೈಗೊಳ್ಳಲಾಗುವುದು. |
| | 36.3) ಅಮಾನತ್ತು ಲೆಕ್ಕಗಳು: ವರ್ಷಾಂತ್ಯಕ್ಕೆ ಸಂಘದಲ್ಲಿ ಸಾಮಾನ್ಯ ಅಮಾನತ್ತು ಎಂದು ರೂ.3,31,403.62 ತೋರಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಜಮಾ ಖರ್ಚುಗಳನ್ನು ಪರಿಶೀಲಿಸಿ, ಸಹಕಾರ ಕಾಯ್ದೆ, ಕಲಂಗಳ ಅನ್ವಯ ಅವುಗಳನ್ನು ಲೆಕ್ಕ ಪುಸ್ತಕಗಳಲ್ಲಿ ಸೂಕ್ತ ಖಾತೆಗಳಿಗೆ ವರ್ಗಾಯಿಸಲು ಕ್ರಮವಿಡಲು ಸೂಚಿಸಿದೆ. | ಅಮಾನತ್ತು ಖಾತೆಯಲ್ಲಿ ಹೆಚ್ಚಾಗಿ ಬ್ಯಾಂಕ್ ಖಾತೆಗೆ ನೆಫ್ಟ್ ಮುಖಾಂತರ ಹಣ ವರ್ಗಾವಣೆ ಮಾಡಿರುವ ಸದಸ್ಯರು ಸಂಘಕ್ಕೆ ತಿಳಿಯಪಡಿಸದೇ ಇರುವ ಬಾಬ್ತುಗಳಾಗಿರುತ್ತದೆ. ಹಾಗೇ ಷೇರು ಮುಕ್ತಾಯಕ್ಕೆ ಸಂಘದಿಂದ ಚೆಕ್ ನೀಡಲಾಗಿದ್ದು, ಸದಸ್ಯರು ಅದನ್ನು ಅವರ ಖಾತೆಗೆ ಜಮಾ ಮಾಡಿಕೊಳ್ಳದೇ ಅವಧಿ ಮುಗಿದಿರುವುದನ್ನು ಅಮಾನತ್ತು ಖಾತೆಯಲ್ಲಿ ಇಡಲಾಗಿದೆ. ಈ ಮೊತ್ತವನ್ನು ಮುಂದಿನ ದಿನದಲ್ಲಿ ಸಂಬಂಧಪಟ್ಟವರು ಮಾಹಿತಿ ನೀಡಿದ ತಕ್ಷಣ ಅವರ ಖಾತೆಗೆ ವರ್ಗಾಯಿಸಲಾಗುವುದು ಹಾಗೂ ಷೇರು ವಾಪಸಾತಿಗಳ ಪಾವತಿಗೆ ಬೇರೆ ಬದಲಿ ಚೆಕ್ ನೀಡಲಾಗುವುದು. ಉಳಿತಾಯ ಖಾತೆಯಲ್ಲಿ ವ್ಯವಹಾರ ಮಾಡದೇ ಇರುವ ಕನಿಷ್ಟ ಮಿತಿಗಿಂತ ಕಡಿಮೆ ಮೊತ್ತ ಇರುವ ಮೊತ್ತವನ್ನೂ ಸಹ ವರ್ಗಾವಣೆ ಮಾಡಲಾಗಿರುತ್ತದೆ. |

| | | |
|---|---|---|
| | 36.4) ಸಾಲ ಬಾಕಿಯಿರುವ ಸದಸ್ಯರ ಪೈಕಿ, ಮರಣ ಹೊಂದಿರುವ ಸದಸ್ಯರನ್ನು ಗುರುತಿಸಿ ಅಂತಹ ಸಾಲಗಳ ಹೊಂದಾಣಿಕೆ ಮಾಡಲು ಕ್ರಮವಿಡುವುದು. ಅಂತೆಯೇ ಅವರ ಬೇರೆ ಠೇವಣಿ ಖಾತೆಗಳ ಮೊತ್ತ ಬಡ್ಡಿ ಸಹಿತ ಹೊಂದಾಣಿಕೆ ಮಾಡಲು, ಕಾನೂನಾತ್ಮಕವಾಗಿ ಸೂಕ್ತ ಕ್ರಮವಹಿಸುವುದು. | ಈಗಾಗಲೇ ಐದು ವರ್ಷಗಳಿಂದ ಸರ್ವ ಸದಸ್ಯರ ಸಭೆಯಲ್ಲಿ, ಸಂಘದ ಅಧಿಕೃತ ವೆಬ್‌ಸೈಟ್‌ನಲ್ಲಿ ಮರಣ ಹೊಂದಿರುವ 15 ಸದಸ್ಯರ ಪಟ್ಟಿ ಮಾಡಿ, ಪ್ರಚುರಪಡಿಸಲಾಗಿರುತ್ತದೆ. ಅವರು ಮರಣ ಹೊಂದಿರುವ ಬಗ್ಗೆ ಮೌಖಿಕ ಮಾಹಿತಿ ತಿಳಿದು ಬಂದಿರುತ್ತದೆ. ಅವರುಗಳು ಸಂಘಕ್ಕೆ ನೀಡಿರುವ ವಿಳಾಸಕ್ಕೆ ಕಾನೂನು ಸಲಹೆಗಾರರಿಂದ ತಿಳುವಳಿಕೆ ಕಳುಹಿಸಲಾಗಿದ್ದು, ವಿಳಾಸದಲ್ಲಿ ವಾಸವಿಲ್ಲದ ಕಾರಣ ವಾಪಸ್ಸ್ ಆಗಿರುತ್ತದೆ ಅವರ ಕುಟುಂಬದವರ ವಿವರಗಳು ಲಭ್ಯವಾಗುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿ ಕರಡು ಸಂಶಯಾಸ್ಪದ ಸಾಲದ ನಿಧಿಯಿಂದ ಹೊಂದಾಣಿಕೆ ಮಾಡಲು ಅನುಮತಿ ಕೇಳಲಾಗಿತ್ತು. ಆದರೆ ಸರ್ವ ಸದಸ್ಯರ ಸಭೆಯಲ್ಲಿ ಮರಣ ಧೃಢೀಕರಣ ಪಡೆದು ಕಾರ್ಯಗತಮಾಡಲು ತಿಳಿಸಲಾಗಿದೆ. ಆದರೆ ಸದಸ್ಯರ ಮರಣ ಪ್ರಮಾಣ ಪತ್ರ ಇದುವರೆಗೂ ಲಭ್ಯವಾಗದ ಕಾರಣ ಹೊಂದಾಣಿಕೆ ಮಾಡಿರುವುದಿಲ್ಲ. ಮುಂಬರುವ ಸರ್ವಸದಸ್ಯರ ಸಭೆಯಲ್ಲಿ ಮಾಹಿತಿಯನ್ನು ತಿಳಿಸಿ ತಮ್ಮ ಸಲಹೆ ಸೂಚನೆಯನ್ನು ಸಹ ತಿಳಿಸಿ ಸರ್ವಸದಸ್ಯರ ಸಭೆಯ ಅನುಮತಿಗೆ ಅನುಸಾರವಾಗಿ ಕಾರ್ಯಗತ ಮಾಡಲಾಗುವುದು. |
| | 36.5) ಸಂಘವು ಹಿಂದಿನ 4-5 ವರ್ಷಗಳಿಂದಲೂ ಕಾರ್ಯದರ್ಶಿ ನೇಮಕ ಮಾಡಿರುವುದಿಲ್ಲ, ಬದಲಿಗೆ ಪ್ರಭಾರ ಕಾರ್ಯದರ್ಶಿಯವರನ್ನೇ ಮುಂದುವರಿಸಲಾಗುತ್ತಿದೆ. ಈ ಬಗ್ಗೆ 2022-23ರ ವಾರ್ಷಿಕ ಸಭೆಯಲ್ಲೂ ಆಕ್ಷೇಪಿಸಲಾಗಿರುವುದು ಸಭಾ ನಡಾವಳಿಯನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆ. ಸಂಘವು ಕಾರ್ಯದರ್ಶಿಯವರನ್ನು ನೇಮಕ ಮಾಡಲು ಈ ಕೂಡಲೇ ಕ್ರಮವಿಡುವುದು. | ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಮುಂದಿನ ದಿನಗಳಲ್ಲಿ ಕಾರ್ಯದರ್ಶಿ ನೇಮಕಾತಿ ಮಾಡಲು ಕ್ರಮವಿಡಲಾಗುವುದು. |
| | 36.6) 2022-23, 2023-24ರ ವಾರ್ಷಿಕ ಮಹಾಸಭೆ ನಡಾವಳಿಯನ್ನು ಪರಿಶೀಲಿಸಿದಾಗ, ಹೂಡಿಕೆಗಳನ್ನು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿಯೇ ಮಾಡಬೇಕೆಂದು ಸದಸ್ಯರು ಆಗ್ರಹಿಸಿರುತ್ತಾರೆ ಮತ್ತು ಕಾಯ್ದೆ ಕಲಂ 58 ರೀತ್ಯ ಅನುಮೋದನೆಯನ್ನೂ ಪಡೆದಿರುತ್ತದೆ. ಸಂಘವು ವರದಿ ಸಾಲಿನಲ್ಲಿ ನೂತನವಾಗಿ ಮಾಡಿರುವ ಹೂಡಿಕೆಗಳನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿಯೇ ಮಾಡಿದ್ದು, ನವೀಕರಣದ ಹೂಡಿಕೆಗಳನ್ನು ಈ ಹಿಂದೆ ಮಾಡಿದ್ದ ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕಿನ ಅಥವಾ ಸಹಕಾರ ಬ್ಯಾಂಕ್‌ಗಳಲ್ಲೇ ಮುಂದುವರೆಸಿರುತ್ತದೆ. ಈ ಬಗ್ಗೆ ಸರ್ವಸದಸ್ಯರ ತೀರ್ಮಾನದಂತೆ ಹಾಗು ತತ್ಸಂಬಂಧದ ಕಂಡಿಕೆಗಳಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮವಿಡಲು ಸೂಚಿಸಲಾಗಿದೆ. | ರಾಷ್ಟ್ರೀಕೃತ ಅಥವಾ ಷೆಡ್ಯೂಲ್ ಬ್ಯಾಂಕ್‌ನಲ್ಲಿ ಠೇವಣಿ ಮಾಡಿದರೆ ಸಂಸ್ಥೆಗೆ ಆದಾಯ ತೆರಿಗೆ ಇಲಾಖೆಯವರು ನೀಡುವ 80ಪಿ ಸೌಲಭ್ಯ ನೀಡುವುದಿಲ್ಲ. ಸಂಘದ ಅಪೀಲ್‌ಗಳನ್ನು ನಿರ್ವಹಿಸುತ್ತಿರುವ **ಸನ್ನದು ಲೆಕ್ಕಿಗರಾದ ಶ್ರೀ ಸತೀಶ್‌ರವರು** ಸಂಘವು 80P ಸೌಲಭ್ಯ ಪಡೆಯಲು ಸಹಕಾರ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡುವಂತೆ ಸಲಹೆ ನೀಡಿರುವ ರೀತ್ಯ ಹೂಡಿಕೆಗಳನ್ನು ಸಹಕಾರ ಬ್ಯಾಂಕ್‌ನಲ್ಲಿ ಮುಂದುವರೆಸಲಾಗಿರುತ್ತದೆ. |
| | 36.7) ಆರು ವರ್ಷ ಮೀರಿ ಡಿಕ್ರಿಯಾಗದ ಸಾಲಗಳಿಗೆ ಮಹಾಸಭೆಯ ಒಪ್ಪಿಗೆ ಪಡೆದು, ತತ್ಸಂಬಂಧ ಕಾಯ್ದಿರಿಸಲು ಸೂಚಿಸಲಾಗಿದೆ.<br>36.8) ಡಿಕ್ರಿಯಾದ ದಿನಾಂಕದಿಂದ 12 ವರ್ಷದ ಒಳಗಾಗಿ ಅಮಲ್ಜಾರಿ ಕೈಗೊಳ್ಳದಿರುವಂತಹ ಸಾಲಗಳಿಗೆ ಶೇ.100 ರಷ್ಟು ಮೀಸಲು ಇಡಲು ಸೂಚಿಸಲಾಗಿದೆ. | ಸದರಿಯವರಿಗೆ ಕಾನೂನು ಸಲಹೆಗಾರರ ಮುಖಾಂತರ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿರುತ್ತದೆ. ಮುಂದಿನ ಕ್ರಮವಾಗಿ ದಾವಾ ಕ್ರಮ ಕೈಗೊಳ್ಳಲು ವಕೀಲರಿಗೆ ಅವಶ್ಯಕ ದಾಖಲೆಗಳನ್ನು ನೀಡಲಾಗಿದ್ದು, ಕಾರ್ಯ ಪ್ರಗತಿಯಲ್ಲಿರುತ್ತದೆ. |

ಸಿ. ಎಸ್. ಎಸ್. & ಕೋ,
ಸನ್ನದು ಲೆಕ್ಕಪರಿಶೋಧಕರು

ಸಿ.ಎ. ಸತ್ಯನಾರಾಯಣ. ಸಿ. ಎಸ್.
ಸನ್ನದು ಲೆಕ್ಕಪರಿಶೋಧಕರು
ಮಾಲೀಕರು ಸಿ. ಎಸ್. ಎಸ್ & ಕೋ.

ನಂ.926, "ಸಪ್ತಶ್ರೀ" 6ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಶ್ರೀರಾಂಪುರ 2ನೇ ಹಂತ, ಮೈಸೂರು 5700023
ಮೊಬೈಲ್ ನಂ. 93412 24889, Email ID: ca.css.co@gmail.com

## ಸ್ವಾಯತ್ತ ಲೆಕ್ಕ ಪರಿಶೋಧಕರ ವರದಿ

ಗೆ,
ಸದಸ್ಯರು,
ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು,
ನಂ.1414, 6ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು 570 004

**1. ಅಭಿಪ್ರಾಯ :**

(1) ನಾನು **ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು, ನಂ.1414, 6ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು 570 004** (ಸಂಘ ಎಂದು ಸಂಕ್ಷಿಪ್ತವಾಗಿ ಕರೆಯಲಾಗಿದೆ) ಹಣಕಾಸಿನ ತಃಖ್ತೆಗಳನ್ನು ಪರಿಶೋಧಿಸಿರುತ್ತೇನೆ. ಇದರಲ್ಲಿ ದಿನಾಂಕ 31.03.2025 ರಲ್ಲಿ ಇದ್ದಂತೆ ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು 31.03.2025ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಸಂಘವು ಅಳವಡಿಸಿಕೊಂಡಿರುವ ಪ್ರಮುಖ/ಪ್ರಭಾವಿ ಲೆಕ್ಕ ನೀತಿಗಳ ಸಾರಾಂಶ ಮತ್ತಿತರ ವಿವರಣಾತ್ಮಕ ಮಾಹಿತಿಗಳೂ ಒಳಗೊಂಡಿರುತ್ತವೆ.

(2) 31-03-2025 ರಲ್ಲಿನ ಅನುಸೂಚಿ ಹಾಗು ಟಿಪ್ಪಣಿಗಳಿಂದ ಕೂಡಿ ಲಗತ್ತಿಸಿರುವ ಲೆಕ್ಕ ಪತ್ರಗಳು, ನನ್ನ ಅಭಿಪ್ರಾಯದಲ್ಲಿ ಮತ್ತು ನನಗೆ ಲಭಿಸಿದ ಮಾಹಿತಿಗಳ ಪ್ರಕಾರ ಹಾಗೂ ನನಗೆ ನೀಡಿದ ವಿವರಣೆಗಳಿಗೆ ಅನುಸಾರವಾಗಿ, ನಾವು ನೀಡಿರುವ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆಗಳಲ್ಲಿ ತಿಳಿಸಿರುವುದನ್ನು ಹೊರತುಪಡಿಸಿ, 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ಅನುಗುಣವಾಗಿರುವುದಲ್ಲದೇ, ಆ ದಿನದ ಸಂಘದ ನೈಜ ಮತ್ತು ನ್ಯಾಯ ಸಮ್ಮತವಾದ ಚಿತ್ರಣವನ್ನೂ, ಅಂದಿಗೆ ಅಂತ್ಯಗೊಳ್ಳುವ ವರ್ಷದ ಉಳಿಕೆಯನ್ನೂ ನೀಡುತ್ತವೆ.

**2. ಅಭಿಪ್ರಾಯಕ್ಕೆ ಆಧಾರ :**

ನಾನು ಭಾರತೀಯ ಸನ್ನದು ಲೆಕ್ಕಪರಿಶೋಧಕರ ಸಂಸ್ಥೆ (ICAI) ಜಾರಿ ಮಾಡಿರುವ ಲೆಕ್ಕ ಪರಿಶೋಧನಾ ಮಾನ ದಂಡಗಳಿಗೆ (Auditing Standards) ಅನುಗುಣವಾಗಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗಳಿಗೆ ಪಾಲನೆಯಂತೆ ಲೆಕ್ಕ ಪರಿಶೋಧನೆಯನ್ನು ನಡೆಸಿರುತ್ತೇನೆ. ಸದರಿ ಮಾನದಂಡಗಳಲ್ಲಿ ತಿಳಿಸಿರುವ ನನ್ನ ಹೊಣೆಗಾರಿಕೆಗಳನ್ನು ಈ ವರದಿಯ **"ಹಣಕಾಸಿನ ತಃಖ್ತೆಗಳ ಪರಿಶೋಧನೆಯಲ್ಲಿ ಲೆಕ್ಕ ಪರಿಶೋಧಕರ ಜವಾಬ್ದಾರಿಗಳು"** ಎಂಬ ವಿಭಾಗದ ಅಡಿಯಲ್ಲಿ ವಿವರಿಸಿದ್ದೇನೆ. ಭಾರತದಲ್ಲಿನ ಹಣಕಾಸಿನ ತಃಖ್ತೆಗಳ ಪರಿಶೋಧನೆಗೆ ಅವಶ್ಯ ಎನಿಸಿದ ನೈತಿಕ ಸ್ವತಂತ್ರ್ಯವನ್ನು ಸದರಿ ಸಂಸ್ಥೆಯಿಂದ ಹೊಂದಿರುತ್ತೇನೆ. ಹಾಗೂ ನಾನು ಸದರಿ ಅವಶ್ಯಕತೆಗಳಿಗೆ ಅನುಗುಣವಾಗಿ ನನ್ನ ಇತರೆ ಹೊಣೆಗಾರಿಕೆಗಳನ್ನೂ ಪೂರೈಸಿರುತ್ತೇನೆ. ನನ್ನ ಅಭಿಪ್ರಾಯದ ಆಧಾರಕ್ಕೆ ನಾನು ಪಡೆದುಕೊಂಡಿರುವ ಲೆಕ್ಕ ಪರಿಶೋಧನಾ ಸಾಕ್ಷಾಧಾರಗಳು ಸಮರ್ಪಕ ಮತ್ತು ಯುಕ್ತವೆಂದು ನಾನು ನಂಬಿದ್ದೇನೆ.

**3. ಲೆಕ್ಕಪತ್ರಗಳ ಬಗ್ಗೆ ಆಡಳಿತ ಮಂಡಳಿ ಹಾಗೂ ನಿರ್ವಹಣಾ ಜವಾಬ್ದಾರಿ ಹೊತ್ತವರ ಹೊಣೆಗಾರಿಕೆ :**

(1) ವಂಚನೆ ಅಥವಾ ದೋಷ ಮುಕ್ತ ಹಾಗು ಗಣನೀಯ ತಪ್ಪು ಹೇಳಿಕೆ ರಹಿತವಾದ ಹಣಕಾಸಿನ ತಃಖ್ತೆಗಳ ತಯಾರಿಕೆಗೆ ಅಗತ್ಯವಾದ ಆಂತರಿಕ ನಿಯಂತ್ರಣಗಳನ್ನು ಅಳವಡಿಸಿ, ಕಾಯ್ದೆಗೂ ಮತ್ತು ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ಲೆಕ್ಕ ಮಾನದಂಡಗಳ ಅನುಗುಣವಾಗಿ ನ್ಯಾಯ ಸಮ್ಮತವಾದ ರೀತಿಯಲ್ಲಿ ಹಣಕಾಸಿನ ತಃಖ್ತೆಗಳನ್ನು ಪ್ರಸ್ತುತ ಪಡಿಸುವ ಜವಾಬ್ದಾರಿಯು ಆಡಳಿತ ಮಂಡಳಿಯದ್ದಾಗಿರುತ್ತದೆ.

(2) ಹಣಕಾಸಿನ ತಃಖ್ತೆಗಳ ತಯಾರಿಕೆಯಲ್ಲಿ ತನ್ನ ಸಂಸ್ಥೆಯು ಕ್ರಿಯಾಶೀಲವಾಗಿ ಸಾಗುವ ಸಾಮರ್ಥ್ಯವನ್ನು ಗಮನಿಸಿ ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನೂ, ಇದೇ ಕ್ರಿಯಾಶೀಲತೆ ಆಧಾರವಾಗಿರುವ ಲೆಕ್ಕ ಪದ್ಧತಿಗೆ ವ್ಯತಿರಿಕ್ತವಾಗಿದ್ದರೆ, ಸಂಸ್ಥೆಯನ್ನು ಒಂದೋ ಮುಚ್ಚುವುದೋ ಅಥವಾ ವ್ಯವಹಾರಗಳನ್ನು ನಿಲ್ಲಿಸುವುದೋ ಎಂಬ ಮಾಹಿತಿಯನ್ನೂ ತಿಳಿಯಪಡಿಸಲು ಆಡಳಿತ ಮಂಡಳಿಯು ಜವಾಬ್ದಾರಿಯನ್ನು ಹೊಂದಿರುತ್ತದೆ.
ಹಣಕಾಸಿನ ವರದಿಯನ್ನು ತಯಾರಿಸುವ ಪ್ರಕ್ರಿಯೆಯ ಮೇಲ್ವಿಚಾರಣೆಯು, ಸಂಸ್ಥೆಯ ಆಡಳಿತ ನಿರ್ವಹಣಾ ಜವಾಬ್ದಾರಿಯನ್ನು ಹೊಂದಿದವರದ್ದಾಗಿರುತ್ತದೆ.

**4. ಹಣಕಾಸಿನ ತಃಖ್ತೆಗಳ ಪರಿಶೋಧನೆಯಲ್ಲಿ ಲೆಕ್ಕ ಪರಿಶೋಧಕರ ಜವಾಬ್ದಾರಿಗಳು:**

(1) ಹಣಕಾಸಿನ ತಃಖ್ತೆಗಳು ಅಖಂಡವಾಗಿ, ವಂಚನೆ ಅಥವಾ ದೋಷ ಮುಕ್ತ ಹಾಗೂ ಗಣನೀಯ ತಪ್ಪು ಹೇಳಿಕೆ ರಹಿತವಾಗಿ ಇವೆಯೆಂದು ಭರವಸೆಯನ್ನು ನೀಡುವುದು ನನ್ನ ಅಭಿಪ್ರಾಯವನ್ನೊಳಗೊಂಡ ಲೆಕ್ಕ ಪರಿಶೋಧನಾ ವರದಿಯ ಉದ್ದೇಶವಾಗಿರುತ್ತದೆ.
(2) ತಪ್ಪು ನಿರೂಪಣೆಗಳು ಇದ್ದಲ್ಲಿ, ಲೆಕ್ಕ ಪರಿಶೋಧನೆಯ ಮಾನ ದಂಡಗಳ ಪ್ರಕಾರ ಕೈಗೊಂಡ ನನ್ನ ಪರಿಶೋಧನೆಯು ಗಂಭೀರವಾದ ತಪ್ಪು ನಿರೂಪಣೆಯನ್ನು ಪತ್ತೆ ಮಾಡುತ್ತದೆ ಎಂದು ಖಾತರಿಯಾಗಿ ಹೇಳಲಾರೆ. ಆದರೆ ನನ್ನ ವಿವೇಚನೆಯಂತೆ ನಾನು ನೀಡುವ ಭರವಸೆಯು ಉತ್ಕೃಷ್ಟ ಮಟ್ಟದ್ದಾಗಿರುತ್ತದೆ.

C.S.S. & Co. MYSORE 570 023 CHARTERED ACCOUNTANTS

ಸಿ. ಎಸ್. ಎಸ್. & ಕೋ,
ಸನ್ನದು ಲೆಕ್ಕಪರಿಶೋಧಕರು

ಸಿಎ. ಸತ್ಯನಾರಾಯಣ. ಸಿ. ಎಸ್.
ಸನ್ನದು ಲೆಕ್ಕಪರಿಶೋಧಕರು
ಮಾಲೀಕರು ಸಿ. ಎಸ್. ಎಸ್ & ಕೋ.

ನಂ.926, "ಸಪ್ತಶ್ರೀ" 6ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಶ್ರೀರಾಂಪುರ 2ನೇ ಹಂತ, ಮೈಸೂರು 5700023
ಮೊಬೈಲ್ ನಂ. 93412 24889, Email ID: ca.css.co@gmail.com

(3) ಹಣಕಾಸಿನ ತಃಖ್ತೆಗಳನ್ನು ಬಳಸುವವರ ಆರ್ಥಿಕ ನಿರ್ಧಾರಗಳ ಮೇಲೆ, ಭಿನ್ನ ಭಿನ್ನವಾಗಿ ಆಗಲೀ ಒಟ್ಟಿಗೆ ಕೂಡಿ ಆಗಲೀ, ಪ್ರಭಾವ ಬೀರುವ ವಂಚನೆ ಅಥವಾ ತಪ್ಪುಗಳಿಂದ ಉದ್ಭವಿಸುವ ತಪ್ಪು ನಿರೂಪಣೆಗಳು, ಗಣನೀಯವೆಂದು ಪರಿಗಣಿಸಲಾಗುವುದು,

5. ಲೆಕ್ಕ ಪರಿಶೋಧನೆಯ ಅವಧಿಯಲ್ಲಿ, ಲೆಕ್ಕ ಪರಿಶೋಧನೆಯ ಮಾನದಂಡಗಳ ಅನುಗುಣವಾಗಿ ನಾನು ವೃತ್ತಿಪರವಾಗಿ ತೀರ್ಮಾನಗಳನ್ನು ಕೈಗೊಂಡಿರುವೆ ಮತ್ತು ವಿಚಾರಗಳನ್ನು ವೃತ್ತಿಪರವಾಗಿಯೇ ವಿಮರ್ಶಿಸಿರುವೆ. ಅಲ್ಲದೇ:

ಅ) ನಾನು ಅಭಿಪ್ರಾಯ ನೀಡುವ ಮೊದಲು, ವಂಚನೆ, ತಪ್ಪು ಅಥವಾ ಸಂಚಿನಿಂದ ಹಣಕಾಸಿನ ತಖ್ತೆಃಗಳಲ್ಲಿನ ಗಂಭೀರವಾದ ತಪ್ಪು ನಿರೂಪಣೆಗಳನ್ನು ಗುರುತಿಸಿ ಮತ್ತದರ ಮೌಲ್ಯ ನಿರ್ಧರಿಸಿ ಅದಕ್ಕೆ ತಕ್ಕ ಪರಿಶೋಧನಾ ಕ್ರಮಗಳನ್ನು ಕೈಗೊಂಡು ಹಾಗೂ ಪರಿಶೋಧನೆಗೆ ಸಮರ್ಪಕ ಮತ್ತು ಸೂಕ್ತ ದಾಖಲೆಗಳನ್ನು ಪಡೆದಿರುತ್ತೇನೆ. ಸಾಮಾನ್ಯ ತಪ್ಪಿಗಿಂತ ಆಂತರಿಕ ನಿಯಂತ್ರಣಗಳ ತಿರಸ್ಕಾರ, ತಪ್ಪು ಹೇಳಿಕೆಗಳು, ಉದ್ದೇಶ ಪೂರ್ವಕ ಲೋಪಗಳು, ನಕಲುತನ ಅಥವಾ ಒಳಸಂಚಿನಿಂದ ಉಂಟಾಗುವ ತಪ್ಪು ನಿರೂಪಣೆಗಳನ್ನು ಗುರುತಿಸದೇ ಇರುವ ಜವಾಬ್ದಾರಿ ಹೆಚ್ಚಿನದ್ದಾಗಿರುತ್ತದೆ.

ಆ) ನನ್ನ ಪರಿಶೋಧನಾ ಕ್ರಮಗಳನ್ನು ರಚಿಸಿಕೊಳ್ಳಲು ಸಂಗತವಾದ/ ಅವಶ್ಯವಿರುವ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಂಡಿರುವಿನೇ ವಿನಹಃ, ಸಂಸ್ಥೆಯ ಆಂತರಿಕ ನಿಯಂತ್ರಣಗಳ ಕಾರ್ಯಕ್ಷಮತೆಯ ಬಗ್ಗೆ ಆಭಿಪ್ರಾಯ ವ್ಯಕ್ತಪಡಿಸಲು ಅಲ್ಲ.

ಇ) ಆಡಳಿತ ಮಂಡಳಿಯವರು ಬಳಸಿರುವ ಲೆಕ್ಕನೀತಿಗಳ ಯೋಗ್ಯತೆ ಮತ್ತು ಅದನ್ನು ಬಳಸಿ ಮಾಡಿರುವ ಅಂದಾಜಿನ ಲೆಕ್ಕಾಚಾರಗಳು ಮತ್ತು ಸಂಬಂಧಿಸಿದ ಪ್ರಕಟಣೆಗಳ ಮೌಲ್ಯವನ್ನೂ ನಿರ್ಧರಿಸಿರುತ್ತೇನೆ.

ಈ) ಕ್ರಿಯಾಶೀಲಾ ಸಂಸ್ಥೆಯಾಗಿ ಮುಂದುವರೆಯವ ಸಾಮರ್ಥ್ಯದ ಮೇಲೆ ಮಹತ್ವವಾಗಿ ಬೀರಲಿರುವ ಯಾವುದಾದರು ಘಟನೆಗಳು ಅಥವಾ ವಿದ್ಯಮಾನಗಳು ಗಣನೀಯ ಅನಿಶ್ಚಿತೆ ಎಂದು ತಿಳಿಯಲು, ಸಂಸ್ಥೆಯು ಕ್ರಿಯಾಶೀಲವಾಗಿ ಮುಂದುವರೆಯಲು, ಆಡಳಿತ ಮಂಡಳಿಯವರು ಅಳವಡಿಸಿಕೊಂಡಿರುವ ಲೆಕ್ಕ ಪದ್ಧತಿಯು ಸಮರ್ಪಕವಾಗಿದೆ ಎಂದರಿಯಲು, ಲೆಕ್ಕ ಪರಿಶೋಧಿಸುವಾಗ ಸಮರ್ಪಕ ಸಾಕ್ಷ್ಯಾಧಾರಗಳನ್ನು ಪಡೆದಿರುತ್ತೇನೆ. ಒಂದು ವೇಳೆ ಅಂತಹ ಗಣನೀಯ ಆನಿಶ್ಚಿತೆ ಇದೆ ಎಂದು ಕಂಡು ಬಂದರೆ, ನಾನು ಇದಕ್ಕೆ ಸಂಬಂಧಿಸಿದ ಹಣಕಾಸಿನ ತಃಖ್ತೆಗೆ ಸಂಬಂಧಿಸಿದ ನನ್ನ ವರದಿಯಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕು. ಒಂದು ವೇಳೆ ಸದರಿ ಉಲ್ಲೇಖಗಳು ಅಸಮರ್ಪಕವೆಂದು ಕಂಡುಬಂದರೆ, ನನ್ನ ತೀರ್ಮಾನಗಳನ್ನು ಬದಲಿಸುವೆನು. ನನ್ನ ಈ ತೀರ್ಮಾನಗಳು ಲೆಕ್ಕ ಪರಿಶೋಧನಾ ವರದಿಯ ದಿನಾಂಕದವರಗೆ ನಾನು ಪಡೆದಂತಹ ಪರಿಶೋಧನೆಯ ಸಾಕ್ಷ್ಯಾಧಾರಗಳ ಮೇಲಾಗಿರುತ್ತದೆ. ಅದಾಗ್ಯು, ಭವಿಷ್ಯದ ಘಟನೆಗಳು, ವಿದ್ಯಮಾನಗಳು ಸಂಸ್ಥೆಯ ಕ್ರಿಯಾಶೀಲ ಪ್ರಗತಿಯನ್ನು ಸ್ಥಗಿತಗೊಳಿಸಬಹುದು.

6. ನಾನು, ನಿರ್ವಹಣಾ ಜವಾಬ್ದಾರಿ ಹೊತ್ತವರಿಗೆ, ಬೇರೆ ಹಲವು ವಿಷಯಗಳೊಡನೆ, ಪೂರ್ವ ನಿರ್ಧಾರಿತ ಲೆಕ್ಕ ಪರಿಶೋಧನಾ ವ್ಯಾಪ್ತಿ ಮತ್ತು ಅವಧಿ, ಪರಿಶೋಧನೆಯ ಕಾಲದಲ್ಲಿ ಪತ್ತೆಯಾದ ಮಹತ್ವದ ವಿಷಯಗಳಿದ್ದಲ್ಲಿ ಮತ್ತು ಆಂತರಿಕ ನಿಯಂತ್ರಣಗಳಲ್ಲಿನ ಗುರುತರವಾದ ನ್ಯೂನತೆಗಳಿದ್ದಲ್ಲಿ ಅವುಗಳನ್ನು ತಿಳಿಸಿರುತ್ತೇನೆ.

7. ಮತ್ತು ನಾನು ನಿರ್ವಹಣಾ ಜವಾಬ್ದಾರಿ ಹೊತ್ತವರಿಗೆ, ನನ್ನ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಸೂಕ್ತ ನೈತಿಕ ಅವಶ್ಯಕತೆಗಳನ್ನು ಪೂರೈಸಿರುವ ಬಗ್ಗೆ ವಿವರಗಳನ್ನು ನೀಡಿರುತ್ತೇನೆ ಮತ್ತು ಅವರೊಂದಿಗೆ ನನ್ನ ಸ್ವಾತಂತ್ರ್ಯಕ್ಕೆ ಪ್ರಭಾವ ಬೀರಬಹುದಾದಂತಹ ಎಲ್ಲಾ ಸಂಬಂಧಗಳು ಮತ್ತು ವಿಚಾರಗಳಲ್ಲದೆ, ಅವಶ್ಯವಿದ್ದಲ್ಲಿ ಪಡೆದುಕೊಂಡ ರಕ್ಷಣಾ ಕ್ರಮಗಳ ಕುರಿತು ವಿವರಿಸಿರುತ್ತೇನೆ.

8. **ಇತರೆ ನಿಯಂತ್ರಕ ಅಗತ್ಯತೆಗಳ ಬಗ್ಗೆ ವರದಿ:**

ಅ) ಈ ವರದಿಯ ಜೊತೆಗೆ ಕರ್ನಾಟಕ ಸರ್ಕಾರದ ಅಧಿಕೃತ ಜಾಲತಾಣ, ಸಹಕಾರ ದರ್ಪಣದಲ್ಲಿ ಲಭ್ಯವಿರುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಅಡಿಯಲ್ಲಿ ನೀಡುವ 39 ಪ್ರಶ್ನೆಗಳನ್ನು ಹೊಂದಿರುವ ಲೆಕ್ಕಪರಿಶೋಧನಾ ವರದಿಯನ್ನೂ ನೀಡಿರುತ್ತೇನೆ.

ಆ) ನನ್ನ ಅತ್ಯುತ್ತಮ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ, ಲೆಕ್ಕಪರಿಶೋಧನೆಗೆ ಅಗತ್ಯವೆಂದು ಕಂಡುಬಂದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದಿರುತ್ತೇನೆ.

ಇ) ನಾನು ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿದ ನಂತರ, ಅಂತಹ ಲೆಕ್ಕ ಪುಸ್ತಕಗಳನ್ನು ಸಂಘವು ಸಮರ್ಪಕವಾಗಿರಿಸಿದೆ ಎಂಬ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತೇನೆ.

ಈ) ಈ ವರದಿಯಲ್ಲಿ ಕಾಣಿಸಿರುವ ಸಂಘದ ಆಸ್ತಿ ಮತ್ತು ಜವಾಬ್ದಾರಿ ಪಟ್ಟಿ, ಜಮಾ ಖರ್ಚು ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಗಳು ಸಂಘದ ಲೆಕ್ಕಪುಸ್ತಕಗಳೊಡನೆ ಹೊಂದಾಣಿಕೆಯಾಗಿರುತ್ತದೆ.

30–07–2025
ಮೈಸೂರು.
UDIN : 25218258BMJIEL9109

For C.S.S. & Co.,
Chartered Accountants
SATHYANARAYANA. C.S.
PROPRIETOR
FRN. 011450S M. No. 218258

C.S.S. & Co. MYSORE 570 023 CHARTERED ACCOUNTANTS

# ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., (ರಿ) ಮೈಸೂರು

ಸಂಘದ ಉಪನಿಯಮದ ಸಂಖ್ಯೆ 89.3 ರನ್ವಯ ಲಾಭ ಹಂಚಿಕೆಯನ್ನು ನಿರ್ದೇಶಕ ಮಂಡಲಿ ಸದಸ್ಯರ ಸಭೆಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದ್ದು, ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

| ಕ್ರ ಸಂ | ಲಾಭ ವಿಲೇವಾರಿ | ಹಂಚಿಕೆಯ ಮೊಬಲಗು ರೂ. |
|---|---|---|
| | ನಿವ್ವಳ ಲಾಭ 31/03/2025ಕ್ಕೆ ಇದ್ದಂತೆ | **32,09,263.00** |
| 1 | ಆಪದ್ಧನ ನಿಧಿ (ಶೇಕಡ 25%) | 8,02,316.00 |
| 2 | ಸಹಕಾರ ಶಿಕ್ಷಣ ನಿಧಿ (ಶೇಕಡ 2%) | 48,139.00 |
| | | **23,58,808.00** |
| 3 | ಲಾಭಾಂಶ (ಶೇಕಡ 6 ರಂತೆ) | 19,42,871.00 |
| 4 | ಕರಡು ಸಾಲದ ನಿಧಿ | – |
| 5 | ಸದಸ್ಯರ ಮರಣೋತ್ತರ ನಿಧಿ | 3,15,000.00 |
| 6 | ವಿದ್ಯಾ ನಿಧಿ | – |
| 7 | ಕಟ್ಟಡ ನಿಧಿ | – |
| 8 | ಸಿಬ್ಬಂದಿ ಕ್ಷೇಮನಿಧಿ | – |
| 9 | ಸುವರ್ಣ ಮಹೋತ್ಸವ ನಿಧಿ | – |
| 10 | ಸಿಬ್ಬಂದಿ ಬೋನಸ್ /ಎಕ್ಸ್‌ಗ್ರೇಷಿಯ | 1,00,000.00 |
| 11 | ಧರ್ಮದ ನಿಧಿ | – |
| 12 | ಲಾಭಾಂಶ ಸಮೀಕರಣ ನಿಧಿ | 937.00 |
| 13 | ಶತಮಾನೋತ್ಸವ ನಿಧಿ | – |
| 14 | ಸಿಬ್ಬಂದಿ ವಿದ್ಯಾ ನಿಧಿ | – |
| 15 | ಪ್ರಚಾರ/ಜಾಹೀರಾತು ನಿಧಿ | – |
| | **ಒಟ್ಟು ಮೊತ್ತ** | **23,58,808.00** |

## ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ (ರಿ)., ಮೈಸೂರು

2024–25ನೇ ಸಾಲಿಗೆ ವಾಸ್ತವವಾಗಿ ಆಗಿರುವ ಖರ್ಚು, ಅನುಮೋದನೆಗಿಂತ ಹೆಚ್ಚಾಗಿ ಖರ್ಚಾಗಿರುವ ರೂ. 6,23,795/– ಗಳು ಸರ್ವಸದಸ್ಯರ ಸಭೆಯ ಮಂಜೂರಾತಿಗೆ ಹಾಗೂ 2025–26ನೇ ಸಾಲಿಗೆ ಅಂದಾಜು ಆಯ–ವ್ಯಯ ಪಟ್ಟಿಯನ್ನು ದಿನಾಂಕ:15/03/2025ರ ಆಡಳಿತ ಮಂಡಲಿ ಸಭೆಯ ವಿ.ಸಂಖ್ಯೆ: 5ರ ಅನುಮೋದನೆಗೆ ಮಂಡಿಸಲಾಗಿರುತ್ತದೆ. ಆಯ–ವ್ಯಯ ಪಟ್ಟಿಯನ್ನು ಮರು ನಿಗದಿಪಡಿಸಿ ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

| ವಿವರಗಳು | 2024–25ಕ್ಕೆ ಸರ್ವಸದಸ್ಯರ ಸಭೆಯ ಮಂಜೂರಾಗಿದ್ದ ಮೊತ್ತ (ರೂ) | 31/03/2025 ಕ್ಕೆ ವಾಸ್ತವವಾಗಿ ಖರ್ಚಾಗಿರುವುದು ಒಟ್ಟು (ರೂ) | ಅಂದಾಜಿಗಿಂತ ಹೆಚ್ಚಾಗಿ ಖರ್ಚಾಗಿ ಗಿರುವುದು | 2025–26ನೇ ಸಾಲಿಗೆ ಅಂದಾಜು ಆಯ–ವ್ಯಯ ಅನುಮೋದನೆಗೆ (ರೂ). |
|---|---|---|---|---|
| **ಖರ್ಚು ವಿವರಗಳು** | | | | |
| **1) ಠೇವಣಿಗಳ ಮೇಲಿನ ಬಡ್ಡಿ ಪಾವತಿ:** | 1,90,00,000 | 1,77,36,294 | | 1,90,00,000 |
| **ಮೊತ್ತ(1)** | **1,90,00,000** | **1,77,36,294** | – | **1,90,00,000** |
| **2) ಆಡಳಿತ ನಿರ್ವಹಣಾ ವೆಚ್ಚಗಳು:** | | | | |
| ಸಿಬ್ಬಂದಿ ವೆಚ್ಚಗಳು: | 50,00,000 | 43,43,284 | | 55,00,000 |
| **ಮೊತ್ತ(2)** | **50,00,000** | **43,43,284** | – | **55,00,000** |
| **3) ರಿಪೇರಿ ಮತ್ತು ನವೀಕರಣ ವೆಚ್ಚಗಳು:** | | | | |
| ರಿಪೇರಿ ಮತ್ತು ನವೀಕರಣ | 1,00,000 | 23,949 | – | 50,000 |
| ನಾಮಫಲಕ ವೆಚ್ಚ | – | – | | |
| ಗಣಕಯಂತ್ರ ನಿರ್ವಹಣಾ ವೆಚ್ಚ | 1,00,000 | 23,201 | – | 1,00,000 |
| ಎಸ್ ಎಂ ಎಸ್ ನಿರ್ವಹಣಾ ವೆಚ್ಚ | | 47,000 | | |
| ನಿರ್ವಹಣಾ ವೆಚ್ಚ (ಜೆರಾಕ್ಸ್ ಯಂತ್ರ, ಯು.ಪಿ.ಎಸ್, ಜನರೇಟರ್, ಮಾಪನ ಯಂತ್ರದ ಬಾಬ್ತು ಪಾವತಿ) | 50,000 | 33,792 | – | 50,000 |
| **ಮೊತ್ತ (3)** | **2,50,000** | **1,27,942** | – | **2,00,000** |
| **4) ಕಮಿಷನ್ ಮತ್ತು ಸಾಲ ವಸೂಲಾತಿ ವೆಚ್ಚಗಳು:** | | | | |
| ದಿನವಹಿ ಮರುಪಾವತಿ ಸಾಲದ ಕಮೀಷನ್ | 50,000 | 34,342 | – | 40,000 |
| ಪಿಗ್ಮಿ ಸಂಗ್ರಹಕಾರರಿಗೆ ಪ್ರೋತ್ಸಾಹ ಧನ | 75,000 | 60,300 | – | 75,000 |
| ಪ್ರೋತ್ಸಾಹ ಧನ (ಎಲ್.ಆರ್.ಸಿ) | 75,000 | 38,121 | – | 50,000 |
| ಪಿಗ್ಮಿ ಕಮಿಷನ್ | 4,00,000 | 3,76,278 | – | 4,00,000 |
| ಸಾಲ ವಸೂಲಾತಿ ವೆಚ್ಚ | 25,000 | 2,620 | – | 15,000 |
| **ಮೊತ್ತ (4)** | **6,25,000** | **5,11,661** | – | **5,80,000** |
| **5) ಇತರೆ ಆಡಳಿತ ನಿರ್ವಹಣಾ ವೆಚ್ಚಗಳು:** | | | | |
| ನೀರಿನ ಕಂದಾಯ | 25,000 | 34,141 | 9,141 | 40,000 |
| ಸಂಘದ ವೃತ್ತಿ ತೆರಿಗೆ | 5,000 | 5,000 | – | 5,000 |
| ವಿದ್ಯುತ್ ವೆಚ್ಚ | 1,25,000 | 79,881 | – | 1,25,000 |

| | | | | |
|---|---|---|---|---|
| ವಿದ್ಯುತ್ ಉಪಕರಣ | 5,000 | – | – | 5,000 |
| ವಿಮೆ ವಂತಿಗೆ | 1,25,000 | 84,745 | – | 2,50,000 |
| ದೂರವಾಣಿ ವೆಚ್ಚ | 60,000 | 39,769 | – | 50,000 |
| ಅಂಚೆ ವೆಚ್ಚ | 40,000 | 19,184 | – | 30,000 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 1,75,000 | 55,201 | – | 60,000 |
| ಪಹರೆ ಮತ್ತು ರಕ್ಷಣೆ | 5,50,000 | 4,73,273 | – | 5,00,000 |
| ದಿನಪತ್ರಿಕೆ ಚಂದಾ | 10,000 | 7,040 | – | 10,000 |
| ಗೌರವ ಧನ ಪಾವತಿ (ಪದಾಧಿಕಾರಿಗಳಿಗೆ) | 30,000 | 21,000 | – | 25,000 |
| ಗೌರವ ಧನ ಪಾವತಿ (ಇತರೆ) | 10,000 | 2,000 | – | 10,000 |
| ವಾರ್ಷಿಕೋತ್ಸವದ ವೆಚ್ಚ | 50,000 | 41,089 | – | 50,000 |
| ಸರ್ವ ಸದಸ್ಯರ ಸಭೆಯ ವೆಚ್ಚ | 5,50,000 | 5,52,575 | 2,575 | 7,00,000 |
| ಸದಸ್ಯರ ಮರಣೋತ್ತರ ನಿಧಿ | – | 17,000 | 17,000 | – |
| ಲೆಕ್ಕ ಪರಿಶೋಧನಾ ಶುಲ್ಕ | 1,50,000 | 1,35,000 | – | 1,50,000 |
| ವೃತ್ತಿ ಶುಲ್ಕ | 2,50,000 | 3,49,636 | 99,636 | 4,00,000 |
| ಕಟ್ಟಡ ಕಂದಾಯ | 1,25,000 | 1,28,631 | 3,631 | 1,50,000 |
| ಪ್ರಯಾಣ ಭತ್ಯೆ | 1,00,000 | 1,11,654 | 11,654 | 1,15,000 |
| ಸಭಾ ಭತ್ಯೆ | 1,50,000 | 1,35,000 | | 1,50,000 |
| ಜಾಹಿರಾತು ವೆಚ್ಚ | | 7,344 | 7,344 | 50,000 |
| ಸಂಭಾವನೆ | 2,00,000 | 1,37,526 | – | 1,50,000 |
| ಸಾದಿಲ್ವಾರು | 6,50,000 | 4,68,788 | – | 6,00,000 |
| ಕಾನೂನು ವೆಚ್ಚ, ದಾವಾ ಶುಲ್ಕ | 50,000 | 8,802 | – | 50,000 |
| ಕ್ಯಾಲೆಂಡರ್ ಮುದ್ರಣ ಬಾಬ್ತು | 60,000 | 46,200 | – | 60,000 |
| ಬ್ಯಾಂಕ್ ಛಾರ್ಜಸ್ | 10,000 | 14,711 | 4,711 | 15,000 |
| ವೈಕುಂಠ ನಿಧಿ ಮೇಲಿನ ಬಡ್ಡಿ | – | 57,227 | 57,227 | 65,000 |
| ಗ್ರಾಹಕರ ಸಭೆಯ ಹಾಗೂ ಸಹಕಾರ ಸಪ್ತಾಹದ ವೆಚ್ಚ | 1,50,000 | 1,13,516 | – | 1,50,000 |
| ಅಧ್ಯಯನ ಪ್ರವಾಸ | 1,00,000 | – | – | 1,00,000 |
| ಉಪನಿಯಮ ತಿದ್ದುಪಡಿ ಶುಲ್ಕ | 5,000 | – | – | 5,000 |
| **ಮೊತ್ತ (5)** | **37,60,000** | **31,31,733** | **2,12,919** | **40,70,000** |
| **7. ಆಯವ್ಯಯೇತರ ಖರ್ಚು:** | | | | |
| ಆದಾಯ ತೆರಿಗೆ ಮೇಲ್ಮನವಿ ಶುಲ್ಕ | | – | | |
| ಆದಾಯ ತೆರಿಗೆ ಪಾವತಿ | 7,00,000 | 6,34,873 | | 12,00,000 |
| ಅನರ್ಹ ಜಿಎಸ್‌ಟಿ ಮೊತ್ತ | | 1,62,947 | | |
| ಕಾಯ್ದಿರಿಸಿದ ಲೆಕ್ಕಗಳು: ಸವಕಳಿ | | 3,13,056 | | |
| **ಮೊತ್ತ (6)** | **7,00,000** | **11,10,876** | **4,10,876** | **12,00,000** |
| **ಒಟ್ಟು ಖರ್ಚು (ಮೊತ್ತ (1) ರಿಂದ (7)ರವರೆಗೆ** | **2,93,35,000** | **2,69,61,790** | **6,23,795** | **3,05,50,000** |
| **ನಿವ್ವಳ ಲಾಭ** | **91,65,000** | **32,09,263** | | **61,50,000** |

| | | | | |
|---|---|---|---|---|
| **ಆದಾಯದ ವಿವರಗಳು** | | | | |
| **1. ಸಾಲಗಳ ಮೇಲಿನ ಬಡ್ಡಿ** | 3,00,00,000 | 2,39,97,691 | | 3,00,00,000 |
| **ಮೊತ್ತ (1)** | **3,00,00,000** | **2,39,97,691** | | **3,00,00,000** |
| **2. ಧನವಿನಿಯೋಗಗಳ ಮೇಲಿನ ಬಡ್ಡಿ:** | 75,00,000 | 49,47,805 | | 55,00,000 |
| **ಮೊತ್ತ (2)** | **75,00,000** | **49,47,805** | | **55,00,000** |
| **3. ಇತರೆ ಆದಾಯಗಳು:** | 10,00,000 | 12,25,557 | | 12,00,000 |
| **ಮೊತ್ತ (3)** | **10,00,000** | **12,25,557** | | **12,00,000** |
| **ಒಟ್ಟು ಲಾಭದ ಮೊತ್ತ (1) ರಿಂದ (4)ರವರೆಗೆ** | **3,85,00,000** | **3,01,71,053** | | **3,67,00,000** |
| **ಬಂಡವಾಳ ಖರ್ಚುಗಳು (ಅಂದಾಜು)** | | | | |
| ಗಣಕ ಯಂತ್ರ ನೂತನ ತಂತ್ರಾಂಶ ಮತ್ತು ಗಣಕ ಯಂತ್ರದ ಅಳವಡಿಕೆಗಾಗಿ | **8,00,000** | 21,186.00 | – | **8,00,000** |
| ಪೀಠೋಪಕರಣ ಖರೀದಿಗಾಗಿ (ಪ್ರಧಾನ ಕಛೇರಿ ಮತ್ತು ಶಾಖಾ ಕಛೇರಿಗಾಗಿ) ಹಾಗೂ ಕಛೇರಿ ಉಪಕರಣಗಳು | **1,00,000** | 27,118.00 | – | **50,000** |
| ಯುಪಿಎಸ್/ಜನರೇಟರ್ ಮತ್ತು ಸಿಸಿಟಿವಿ ಕ್ಯಾಮರಾ | **1,00,000** | – | – | **1,00,000** |
| ಪ್ರಧಾನ ಕಛೇರಿಗೆ ಲಿಫ್ಟ್ ಅಳವಡಿಸಲು | – | – | – | **20,80,000** |

◆◆◆◆◆◆

## ಪ್ರಧಾನ ಕಛೇರಿಯಲ್ಲಿ ಲಿಫ್ಟ್ ಅಳವಡಿಸಲು ತಗಲುವ ಅಂದಾಜು ವೆಚ್ಚ

ಪ್ರಧಾನ ಕಛೇರಿಗೆ ಲಿಫ್ಟ್ ಅಳವಡಿಸುವಂತೆ ಸಂಘದ ಹಿರಿಯ ನಾಗರೀಕ ಸದಸ್ಯರು ಹಾಗೂ ಇತರೆ ಸದಸ್ಯರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದು, ಸದಸ್ಯರ ಅನುಕೂಲಕ್ಕಾಗಿ ಲಿಫ್ಟ್ ಅಳವಡಿಸಿ ಕಾರ್ಯಗತಗೊಳಿಸುವ ಸಲುವಾಗಿ ನಿರ್ದೇಶಕ ಮಂಡಲಿ ಸಭೆಯಲ್ಲಿ ಚರ್ಚಿಸಿದ್ದು, ಸರ್ವಸದಸ್ಯರ ಸಭೆಯ ಅನುಮೋದನೆಗೆ ಮನವಿ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ತಗಲಬಹುದಾದ ಅಂದಾಜು ವೆಚ್ಚಗಳ ವಿವರ ಈ ಕೆಳಕಂಡಂತೆ ಇದೆ:

| Sl. No | Particulars | Estimated Amount |
|---|---|---|
| 1 | Construction of lift well with necessary MS Steel and RCC Structure including civil work as required for G+3 floors | 7,50,000-00 |
| 2 | Electrical for lift Room wiring (including earthing and excluding liaison works) | 1,00,000-00 |
| 3 | Main Cable replacement | 30,000-00 |
| 4 | Approximate cost of lift | 12,00,000-00 |
| | **TOTAL** | **20,80,000-00** |

## ನಿರ್ದೇಶಕರುಗಳ ಸಭಾ ಹಾಜರಾತಿ ವಿವರ

**ನಡೆದ ಒಟ್ಟು ಸಭೆಗಳ ವಿವರ: ನಿರ್ದೇಶಕ ಮಂಡಳಿ ಸಭೆಗಳು–24,**
**ವಿಶೇಷ ಸಭೆ– 7, ತುರ್ತು ಸಭೆ– 3, ಸಿಬ್ಬಂದಿ ಸಭೆ – 1**
**ದಿನಾಂಕ: 01/04/2024 ರಿಂದ 31/03/2025ರವರೆಗೆ**

| ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳ ಸಂಖ್ಯೆ |
|---|---|---|
| ಶ್ರೀ ಗೋಪಿನಾಥ್ ಎಂ ಡಿ | ಅಧ್ಯಕ್ಷರು | 24 |
| ಶ್ರೀಮತಿ ಸೌಮ್ಯ ಎಂ ಎನ್ | ಉಪಾಧ್ಯಕ್ಷರು | 22 |
| ಶ್ರೀ ನಾಗರಾಜ ಕೆ | ಖಜಾಂಚಿ | 24 |
| ಶ್ರೀ ಪಾರ್ಥಸಾರಥಿ ಸಿ ವಿ | ನಿರ್ದೇಶಕರು | 18 |
| ಶ್ರೀ ಪ್ರಶಾಂತ್‌ತಾತಾಚಾರ್ ಹೆಚ್ ಎಸ್ | ನಿರ್ದೇಶಕರು | 15 |
| ಶ್ರೀ ಬಾಲಕೃಷ್ಣ ಎಂ ಆರ್ | ನಿರ್ದೇಶಕರು | 20 |
| ಶ್ರೀ ಚೇತನ್ ಹೆಚ್ ಪಿ | ನಿರ್ದೇಶಕರು | 21 |
| ಶ್ರೀ ಪಣಿರಾಜ್ ಎನ್ | ನಿರ್ದೇಶಕರು | 23 |
| ಶ್ರೀಮತಿ ಮಹಿಮ ಪಿ | ನಿರ್ದೇಶಕರು | 16 |
| ಶ್ರೀ ವಿಕ್ರಮ್ ಕೆ | ನಿರ್ದೇಶಕರು | 21 |
| ಶ್ರೀಮತಿ ನಾಗಶ್ರೀ ಎನ್ | ನಿರ್ದೇಶಕರು | 24 |
| ಶ್ರೀ ಅರುಣ್ ಕೆ ಎನ್ | ನಿರ್ದೇಶಕರು | 22 |
| ಶ್ರೀ ಶಿವರುದ್ರಪ್ಪ | ನಿರ್ದೇಶಕರು | 14 |
| ಶ್ರೀಮತಿ ರಾಜಮ್ಮ ಎಸ್ | ನಿರ್ದೇಶಕರು | 22 |
| ಶ್ರೀಮತಿ ಶಾಶ್ವತಿ ನಾಯಕ ಎಂ ಪಿ | ನಿರ್ದೇಶಕರು | 14 |

## ಜಾಮೀನುದಾರರ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳು

- ಜಾಮೀನುದಾರರು, ಸಾಲಗಾರರಷ್ಟೇ ಸಂಘದಿಂದ ಪಡೆದಿರುವ ಸಾಲದ ಹಣಕ್ಕೆ ಹೊಣೆಗಾರರಾಗಿರುತ್ತಾರೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮೇರೆಗೆ ಸಾಲಗಾರರು ಸುಸ್ತಿದಾರರಾದರೆ ಅವರ ಜಾಮೀನುದಾರರೂ ಸಹ ಸುಸ್ತಿ ಸಾಲಗಾರರೆಂದು ಪರಿಗಣಿಸಲ್ಪಡುತ್ತಾರೆ ಮತ್ತು ಸಂಘದಿಂದ ಸಾಲ ಪಡೆಯುವುದಕ್ಕೆ ಅನರ್ಹರಾಗುತ್ತಾರೆ.
- ಜಾಮೀನು ಕೊಡುವ ಮುನ್ನ ಜಾಮೀನುದಾರರು ಸಾಲಗಾರರ ಆರ್ಥಿಕ ಸ್ಥಿತಿ, ಸಾಲದ ಉದ್ದೇಶ ಮತ್ತು ಸಾಲ ಮರುಪಾವತಿಸುವ ಶಕ್ತಿ ಇವುಗಳ ಬಗ್ಗೆ ತಿಳಿದುಕೊಳ್ಳತಕ್ಕದ್ದು.
- ಸಾಲಗಾರರು ಸಾಲಕ್ಕೆ ನಿಗದಿಯಾದ ಸಾಲದ ಕಂತುಗಳನ್ನು ಕ್ರಮಬದ್ಧವಾಗಿ ಮರುಪಾವತಿ ಮಾಡುತ್ತಿರುವ ಬಗ್ಗೆ ವಿಚಾರಿಸಬೇಕು. ಒಂದು ವೇಳೆ ಸಾಲದ ಕಂತುಗಳು ಸರಿಯಾಗಿ ಮರುಪಾವತಿಯಾಗದಿದ್ದಲ್ಲಿ ಸಂಘದ ಹಿತದೃಷ್ಟಿಯಿಂದ ಸುಸ್ತಿ ಕಂತುಗಳ ಮೊತ್ತವನ್ನು ಸಾಲಗಾರನಿಂದ ಜಮಾ ಮಾಡಿಸುವ ಜವಾಬ್ದಾರಿಯು ಜಾಮೀನುದಾರರ ಮೇಲಿರುತ್ತದೆ. ಸಂಘದ ಕಛೇರಿಯಲ್ಲಿ ಸಾಲಗಾರ ಸದಸ್ಯರ ಮರುಪಾವತಿ ಬಗ್ಗೆ ಆಗಿಂದಾಗ್ಗೆ ಮಾಹಿತಿ ಪಡೆಯತಕ್ಕದ್ದು.
- ಸಾಲಗಾರರ ಬಾಕಿ ಮೊತ್ತವು ಬೆಳೆಯುತ್ತಾ ಹೋದಾಗ ಜಾಮೀನುದಾರರ ಸ್ವಹಿತಕ್ಕೆ ಧಕ್ಕೆಯಾಗುತ್ತದೆ ಎಂಬುದನ್ನು ತಿಳಿಯತಕ್ಕದ್ದು.

# ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

**ಕೆಳಕಂಡ ಸದಸ್ಯರು ಮರಣ ಹೊಂದಿರುವ / ಕಾಣೆಯಾಗಿರುವ ವಿಷಯ ಮೌಖಿಕವಾಗಿ ತಿಳಿದು ಬಂದಿದ್ದು, ಮಾಹಿತಿ ಲಭ್ಯವಿಲ್ಲದ ಸದಸ್ಯರ ಸಾಲದ ಮೊತ್ತವನ್ನು ಕರಡು ಸಂಶಯಾಸ್ಪದ ಸಾಲದ ನಿಧಿ ಮೊತ್ತದಿಂದ ಹೊಂದಾಣಿಕೆ ಮಾಡಲು ಸರ್ವಸದಸ್ಯರ ಸಭೆಯ ಅನುಮೋದನೆ ಕೋರಲಾಗಿದೆ**

| ಕ್ರಮ ಸಂಖ್ಯೆ | ಡಿಕ್ರಿ ಸಾಲದ ಖಾತೆ ಸಂಖ್ಯೆ | ಸದಸ್ಯತ್ವದ ಸಂಖ್ಯೆ | ಸದಸ್ಯರ ಹೆಸರು | ವಿಳಾಸ | ಸಾಲದ ಬಾಕಿ ಮೊತ್ತ |
|---|---|---|---|---|---|
| 1 | DECC000028 | MC00000184 | ಪಂಡರಿನಾಥ್ ಜಿ | # 40, 2ನೇ ಅಡ್ಡರಸ್ತೆ, ಸ್ವರ್ಣಸಂದ್ರ, ಮಂಡ್ಯ | 14,920 |
| 2 | DECC000049 | MC00002300 | ನಾಗರತ್ನಮ್ಮ ಎಂ ವಿ | # 645, 1ನೇಕ್ರಾಸ್, ಕುಂಬಾರಗೇರಿ ಎನ್ ಎಸ್ ರಸ್ತೆ, ಮೈಸೂರು. | 14,338 |
| 3 | DECC000081 | MC00002402 | ಸುಬ್ರಹ್ಮಣ್ಯಬಾಬು ಹೆಚ್.ಎಲ್ | ಎಫ್–12, ಪನ್ನಗ, ಜೆ ಪಿ ನಗರ ಮೈಸೂರು | 16,900 |
| 4 | DECC000054 | MC00000467 | ಅಪ್ರಮೇಯ ಎಂ ಎನ್ | # 125, 3ನೇ ಅಡ್ಡರಸ್ತೆ, ಸರಸ್ವತಿಪುರಂ ಮೈಸೂರು | 9,665 |
| 5 | DECC000060 | MC00000468 | ಶುಭಾ ಅಪ್ರಮೇಯ | # 125, 3ನೇ ಅಡ್ಡರಸ್ತೆ, ಸರಸ್ವತಿಪುರಂ ಮೈಸೂರು | 10,000 |
| 6 | DECC000141 | MC00002561 | ಸುಧೀಂದ್ರ ಸಿ ಆರ್ | # 21, 2ನೇ ಬ್ಲಾಕ್, ಎಸ್‌ಬಿಎಮ್ ಬಡಾವಣೆ, ಶ್ರೀರಾಂಪುರ, ಮೈಸೂರು | 5,000 |
| 7 | DECC000142 | MC00001878 | ನಾಗರಾಜ್ ಹೆಚ್ ಜಿ | #ಎಲ್–2, 1ನೇ ಮುಖ್ಯರಸ್ತೆ, 1ನೇಅಡ್ಡ ರಸ್ತೆ, ಶಾರದಾದೇವಿನಗರ, ಮೈಸೂರು | 11,000 |
| 8 | DECC000143 | MC00001877 | ರಾಜಮಣಿ ಕೆ | #ಎಲ್–2, 1ನೇ ಮುಖ್ಯರಸ್ತೆ, 1ನೇಅಡ್ಡ ರಸ್ತೆ, ಶಾರದಾದೇವಿನಗರ, ಮೈಸೂರು | 11,000 |
| 9 | DECC000144 | MC00003690 | ವೆಂಕಟೇಶ್ ಕೆ | # 11, 1ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, ಜಯನಗರ, ಮೈಸೂರು | 8,856 |
| 10 | DECC000156 | MC00002432 | ನಾಗರಾಜ್ ಹೆಚ್ ಆರ್ | #355, 6ನೇ ಮುಖ್ಯರಸ್ತೆ, ಟಿ.ಕೆ. ಬಡಾವಣೆ, ಮೈಸೂರು. | 11,268 |
| 11 | DECC000159 | MC00000546 | ಡಾ|| ಶೇಷಾಚಲ ಸಿ ಎಸ್ | # 719, 16ನೇ ಮುಖ್ಯ ರಸ್ತೆ, ಸರಸ್ವತಿ ಪುರಂ, ಮೈಸೂರು | 25,265 |
| 12 | DECC000195 | MC00000592 | ಚಂದ್ರಶೇಖರ್ ವಿ | #37, ನ್ಯೂ ಮಾಡೆಲ್ ಹೌಸ್, ಕರುಣಾಪುರ, ಮೈಸೂರು | 8,233 |
| 13 | DECC000198 | MC00005617 | ಮಂಜುಳಾ ರವಿಕುಮಾರ್ | # 88–1, 5ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು | 23,500 |
| 14 | DECC000169 | MC00004958 | ಪ್ರೇಮಾ ಎ | # ಎಲ್–200, ಸಿಐಟಿಬಿ 2ನೇ ಹಂತ ಕುವೆಂಪುನಗರ, ಮೈಸೂರು | 21,327 |
| 15 | DECC000170 | MC00005053 | ಶ್ರೀನಿವಾಸನ್ ಎ | # ಎಲ್–200, ಸಿಐಟಿಬಿ 2ನೇ ಹಂತ ಕುವೆಂಪುನಗರ, ಮೈಸೂರು | 21,327 |
| | | ಒಟ್ಟು ಮೊತ್ತ | | | **2,12,599** |

**ಈ ಮೇಲಿನ ಕ್ರಮ ಸಂಖ್ಯೆ 1, 2, 14, 15 ಸುಸ್ತಿ ಸದಸ್ಯರ ಮರಣ ದೃಢೀಕರಣ ಪತ್ರ ಲಭ್ಯವಿದ್ದು ಸಾಲದ ಮೊತ್ತ ರೂ. 71,912/–ಗಳನ್ನು ಕರಡು ಸಂಶಯಾಸ್ಪದ ಸಾಲದ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ಕೋರಲಾಗಿದೆ.**

## ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು
## ಪ್ರಗತಿ ನೋಟ

| | ವಿವರ | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 | 2024-25 |
|---|---|---|---|---|---|---|---|---|---|---|
| 1 | **ಸದಸ್ಯರ ಸಂಖ್ಯೆ** | | | | | | | | | |
| | ಸಾಮಾನ್ಯ ಸದಸ್ಯರು | 6,345 | 6,323 | 4,413 | 4,739 | 4,887 | 4,939 | 6,133 | 6,079 | 6,164 |
| | ಸಹ ಸದಸ್ಯರು | 590 | 609 | 605 | 600 | 578 | 563 | 555 | 551 | 548 |
| | ನಾಮಮಾತ್ರ ಸದಸ್ಯರು | 166 | 173 | 181 | 184 | 27 | 12 | 6 | 6 | 1 |
| 2 | ಷೇರು ಮೊಬಲಗು | 2,36,37,800 | 2,45,52,600 | 2,46,68,200 | 2,68,37,900 | 2,80,97,100 | 2,91,46,700 | 3,21,50,100 | 3,24,23,700 | 3,32,88,700 |
| 3 | ಆಪದ್ಧನ ನಿಧಿ | 83,76,471 | 94,69,357 | 1,07,26,102 | 1,20,55,728 | 1,35,75,921 | 1,60,92,206 | 1,83,25,838 | 1,99,06,360 | 2,11,30,279 |
| 4 | ಇತರೇ ನಿಧಿ | 1,14,60,329 | 1,17,88,381 | 1,35,86,557 | 1,32,85,089 | 1,47,40,352 | 1,79,84,166 | 2,04,34,638 | 2,12,22,196 | 2,08,47,880 |
| 5 | ಠೇವಣಾತಿಗಳು | 23,61,90,160 | 21,37,88,547 | 20,94,04,216 | 23,59,34,611 | 22,90,33,687 | 25,98,28,961 | 26,75,32,863 | 25,26,15,832 | 26,54,89,667 |
| 6 | ವಿವಿಧ ಸಾಲಗಳು | 15,61,40,634 | 14,63,30,920 | 14,49,03,989 | 17,04,76,618 | 18,07,42,523 | 18,54,60,683 | 19,16,07,164 | 20,43,51,640 | 24,31,35,777 |
| 7 | ಹೂಡಿಕೆಗಳು | 11,74,15,987 | 10,53,71,506 | 10,46,91,428 | 10,97,57,047 | 10,03,79,399 | 13,14,90,812 | 13,71,77,759 | 11,49,52,971 | 7,99,20,273 |
| 8 | ನಿವ್ವಳ ಲಾಭ | 35,37,243 | 44,75,809 | 41,23,087 | 48,95,664 | 87,76,913 | 67,68,646 | 51,82,284 | 35,19,046 | 32,09,263 |
| 9 | ಡಿವಿಡೆಂಡ್ ದರ | 10 | 10 | 10 | 10 | 12 | 11 | 10 | 10 | ** |
| 10 | ಆಡಿಟ್ ವರ್ಗೀಕರಣ | “ಎ” | “ಎ” | “ಎ” | “ಎ” | “ಎ” | "ಬಿ" | "ಬಿ" | "ಬಿ" | "ಬಿ" |

**GSTIN:29AADAA7412N1ZI**

# ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್., (ರಿ) ಮೈಸೂರು

**ಪ್ರಧಾನ ಕಛೇರಿ: #1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು –570004 ಫೋ: 0821–2330014, 2334140**

**ಶಾಖಾ ಕಛೇರಿ: ಸಿಎ–16, 2ನೇ ಹಂತ, ವಿಜಯನಗರ, ಮೈಸೂರು–570017 ಫೋ: 0821–2411556**

***website:www.agastyasociety.com***

***e-mail:agastyasociety.mysore@gmail.com***

***Mob : 9632109452***

**ಸಾಲದ ಸೌಲಭ್ಯಗಳು: ಸದಸ್ಯರಿಗೆ ಹಾಗೂ ಸಹ ಸದಸ್ಯರಿಗೆ**

| | |
|---|---|
| ◆ ಚಿನ್ನಾಭರಣ ಸಾಲ | ಶೇ. 11.00 |
| ◆ ಜಂಟಿ ಸಾಲ | ಶೇ. 15.00 |
| ◆ ಅಲ್ಪಾವಧಿ ಜಂಟಿ ಸಾಲ | ಶೇ. 14.00 |
| ◆ ವಾಹನ ಸಾಲ | ಶೇ. 11.00 |
| ◆ ಸ್ಥಿರಾಧಾರ ಸಾಲ | ಶೇ. 11.00 |
| ◆ ವಿದ್ಯಾಭ್ಯಾಸ ಸಾಲ | ಶೇ. 12.00 |
| ◆ ದಿನವಹಿ ತೀರುವಳಿ ಸಾಲ | |
| ◆ ತುರ್ತು ಸಾಲ | |

**ಠೇವಣಿಗಳ ಮೇಲಿನ ಬಡ್ಡಿ :**

| | | |
|---|---|---|
| 1) | ನಿಶ್ಚಿತ ಠೇವಣಿ: 181 ದಿನಗಳಿಂದ 1 ವರ್ಷದವರೆಗೆ | ಶೇ. 6.00 |
| | 13 ತಿಂಗಳಿನಿಂದ 24 ತಿಂಗಳವರೆಗೆ | ಶೇ. 7.00 |
| | 18 ತಿಂಗಳುಗಳಿಗೆ | ಶೇ. 7.50 |

**(ಹಿರಿಯ ನಾಗರೀಕ ಸದಸ್ಯರಿಗೆ, ವಿಕಲ ಚೇತನರಿಗೆ, ಸಂಘದ ಮಾಜಿ ಸೈನಿಕರಿಗೆ ಶೇಕಡ 0.5 ಹೆಚ್ಚಿಗೆ ನೀಡಲಾಗುತ್ತದೆ)**

| | | |
|---|---|---|
| 2) | ಸದಸ್ಯರ ಉಳಿತಾಯ ಖಾತೆ | ಶೇ. 4.00 |
| 3) | ಸಂಚಿತ ಠೇವಣಿ | ಶೇ. 8.00 |
| 4) | ಪಿಗ್ಮಿ ಠೇವಣಿ | ಶೇ. 1.50 |

**ಸದಸ್ಯರಿಗೆ ಪ್ರಧಾನ ಕಛೇರಿಯಲ್ಲಿ ಲಾಕರ್ ಸೌಲಭ್ಯವನ್ನು ಒದಗಿಸಲಾಗಿದೆ**

ಹೆಚ್ಚಿನ ವಿವರಗಳಿಗೆ ಸೊಸೈಟಿಯ ವ್ಯವಹಾರದ ವೇಳೆಯಲ್ಲಿ ಸಂಪರ್ಕಿಸುವುದು.

## ಮಾನ್ಯ ಸದಸ್ಯರ ಗಮನಕ್ಕೆ :

1) 2023–24ನೇ ಸಾಲಿನ 29ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಹಾಗೂ 2024–25ನೇ ಸಾಲಿನ ಜಮಾ–ಖರ್ಚು ತ:ಖ್ತೆಯನ್ನು ಈ ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಿರುವುದಿಲ್ಲ. ಅದರ ಪ್ರತಿಗಳು ಸದಸ್ಯರ ಅವಗಾಹನೆಗಾಗಿ ಪ್ರಧಾನ ಕಛೇರಿ ಮತ್ತು ಶಾಖಾ ಕಛೇರಿಯಲ್ಲಿ ಲಭ್ಯವಿರುತ್ತದೆ. ಅಪೇಕ್ಷಿಪಟ್ಟ ಸದಸ್ಯರು ಸದರಿ ಪ್ರತಿಗಳನ್ನು ಕಛೇರಿ ವ್ಯವಹಾರದ ವೇಳೆಯಲ್ಲಿ ಖುದ್ದಾಗಿ ಬಂದು ಪರಿಶೀಲಿಸಬಹುದು. ಮುದ್ರಣ ಮತ್ತು ಅಂಚೆ ವೆಚ್ಚ ತಗ್ಗಿಸುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಸದಸ್ಯರು ಸಹಕರಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

2) 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯು ಕಛೇರಿಯಲ್ಲಿ ಲಭ್ಯವಿದ್ದು, ಕಛೇರಿ ವೇಳೆಯಲ್ಲಿ ಸದಸ್ಯರು ಪರಿಶೀಲಿಸಬಹುದಾಗಿರುತ್ತದೆ.

◆◆◆◆◆◆

ವಿಶೇಷ ಸೂಚನೆ:

1) ಸದಸ್ಯರು ಕಡ್ಡಾಯವಾಗಿ ಕೆ.ವೈ.ಸಿ. ನೀಡಬೇಕಾಗಿರುವುದರಿಂದ ಸಂಘದ ಕಛೇರಿ ವೇಳೆಯಲ್ಲಿ ತಮ್ಮ ಆಧಾರ್ ಮತ್ತು ಪಾನ್ ಸಂಖ್ಯೆಗಳನ್ನು ನೀಡಿ ಸಹಕರಿಸಬೇಕಾಗಿ ಮನವಿ ಮಾಡಲಾಗಿದೆ.

2) ಲಾಭಾಂಶ ಪಡೆಯದೆ ಇರುವ ಸದಸ್ಯರು ಸಂಘದ ವ್ಯವಹಾರದ ವೇಳೆಯಲ್ಲಿ ಷೇರು ಪಾಸ್‌ಪುಸ್ತಕ ಹಾಜರುಪಡಿಸಿ ಪಡೆದುಕೊಳ್ಳುವಂತೆ ಸೂಚಿಸಲಾಗಿದೆ. ಉಪನಿಯಮ 91 ರಂತೆ ಲಾಭಾಂಶ ಘೋಷಿಸಿದ ದಿನಾಂಕದಿಂದ 3 ವರ್ಷದೊಳಗೆ ಲಾಭಾಂಶ ಪಡೆಯದಿರುವ ಮೊಬಲಗನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡಲಾಗುವುದು. ಆದುದರಿಂದ 2021–22ನೇ ಸಾಲಿನ ಲಾಭಾಂಶ ಪಡೆಯದೆ ಇರುವ ಸದಸ್ಯರು ದಿನಾಂಕ:30/09/2025ರ ಒಳಗೆ ಪಡೆದು ಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಇದೇ ತಿಳುವಳಿಕೆ ಪತ್ರವಾಗಿದ್ದು, ಮುಂದೆ ಇದರ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡುವುದಿಲ್ಲ. ಸಂಘದ ಉಪನಿಯಮದ ಸಂಖ್ಯೆ:16.2ರ ಪ್ರಕಾರ ಸುಸ್ತಿ ಸಾಲದ ಸದಸ್ಯರುಗಳ ಡಿವಿಡೆಂಡ್ ಮೊತ್ತವನ್ನು ಕಡ್ಡಾಯವಾಗಿ ಅವರ ಸಾಲದ ಖಾತೆಗೆ ವರ್ಗಾಯಿಸಲಾಗುವುದು.

3) ಸದಸ್ಯರು ತಮ್ಮ ವಿಳಾಸ ಬದಲಾವಣೆಯಾದಲ್ಲಿ ಸಂಘಕ್ಕೆ ತಿಳಿಸಿ, ಸಂಘದ ದಾಖಲಾತಿಗಳಲ್ಲಿ ಬದಲಾವಣೆ ಮಾಡಿಸಲು ಮನವಿ ಮಾಡಲಾಗಿದೆ.

**ಸಹಕಾರ ಸಂಘಗಳ ಧ್ಯೇಯ ವಾಕ್ಯ**
**“ಒಬ್ಬರಿಗಾಗಿ ಎಲ್ಲರೂ**
**ಎಲ್ಲರಿಗಾಗಿ ಒಬ್ಬರು”**

# 2024-25ನೇ ಸಾಲಿನ ಕಾರ್ಯಕ್ರಮಗಳು



ಸಂಘದ 30ನೇ ವಾರ್ಷಿಕೋತ್ಸವದ
ಉದ್ಘಾಟನಾ ಸಮಾರಂಭ



2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ
ಸಮಾರಂಭ



ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ



ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ
ಸನ್ಮಾನ




ಪ್ರತಿಭಾ ಪುರಸ್ಕಾರ

ತೆರೆದ-ಅಂಚೆ

ಶ್ರೀಮತಿ/ಶ್ರೀ ______________________

______________________

______________________

______________________




ಪ್ರತಿ ತಲುಪದಿದ್ದಲ್ಲಿ ಈ ಕೆಳಗಿನ ವಿಳಾಸಕ್ಕೆ ಹಿಂತಿರುಗಿಸುವುದು

ಪ್ರಭಾರ ಕಾರ್ಯದರ್ಶಿ
**ಅಗಸ್ತ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., (ರಿ.)**
# 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು-570 004

ಮುದ್ರಣ : ಪ್ರಿಂಟ್ ಕಲ್ಚರ್, ಮೈಸೂರು ಮೊ. : 98454 35390